ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜನವರಿ-2018
ಬೆಲೆ ರೂ. 1



ಮೊಗ್ಗಿನಂತಹ ಕನಸು
ಹೂವಾಗಿ ಅರಳಿ
ಹೊಮ್ಮುತಿರಲಿ ಹೊಸ
ವರುಷದ ಹೊಂಗಿರಣ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 28 ಸಂಚಿಕೆ 4
ಜನವರಿ 2018, ಬೆಲೆ ರೂ. 1



**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷ**
ವಸಂತ ಶೆಟ್ಟಿ ಬೆಳ್ಳಾರೆ: 9958697823

**ಉಪಾಧ್ಯಕ್ಷರು**
ಆಶಾಲತಾ ಎಂ.: 9891249149
ಎಸ್.ಸಿ. ಹೇಮಲತ: 9971121636

**ಪ್ರಧಾನ ಕಾರ್ಯದರ್ಶಿ**
ಸಿ.ಎಂ.ನಾಗರಾಜ: 9811325440

**ಕೋಶಾಧಿಕಾರಿ**
ಕೆ.ಎಸ್.ಜಿ. ಶೆಟ್ಟಿ 9810232113

**ಜಂಟಿ ಕಾರ್ಯದರ್ಶಿಗಳು**
ಟಿ.ಪಿ. ಬೆಳ್ಳಿಯಪ್ಪ: 9654555795
ಜಮುನಾ ಸಿ. ಮಠದ: 9717146597

**ಸಮಿತಿ ಸದಸ್ಯರು**
ಡಾ. ಎಂ.ಎಸ್. ಶಶಿಕುಮಾರ್: 9811689337
ರಾಧಾಕೃಷ್ಣ: 9818252183
ಪೂಜಾ ಪಿ. ರಾವ್: 9810882498
ವಿ.ವಿ.ಬಿರಾದಾರ: 9873005409
ಸಖಾರಾಮ ಉಪ್ಪೂರು 8447288475
ಸುಮಿತಾ ಮುರಗೋಡ 9873000333
ಶಶಿಕಾಂತ್ ಪಾಟೀಲ್ 9650182413
ಬಾಬುರಾಜ್ ಪೂಜಾರಿ 9818807696
ತ್ಯಾಗೇಶ್ ಮೂರ್ತಿ 9868393961
ಸಂತೋಷ್ ಜೆ. 9911235783

**ವಿಶೇಷ ಆಹ್ವಾನಿತರು**
ಡಾ. ಶರತ್ ಎಸ್. ಜವಳಿ
ಡಾ. ಪುರುಷೋತ್ತಮ ಬಿಳಿಮಲೆ
ಎನ್.ಎಂ. ಸರೋಜ
ರಾಧಾ ಕೌಜಲಗಿ
ಎಂ. ಶಿವರಾಮ ರೈ
ಪಿ. ರಾಜಣ್ಣ

**ಕಾವಲು ಸಮಿತಿ**
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ


## ನೇರ ಮಾತು

ಭಾಷಾವಾರು ಪ್ರಾಂತ್ಯಗಳ ರಚನೆಯ ನಂತರ ಆಯಾಯ ರಾಜ್ಯಗಳು ತಮ್ಮ ತಮ್ಮದೇ ರಾಜ್ಯಭಾಷೆಗಳ ಮೂಲಕ ಆಡಳಿತ ನಡೆಸಲು ಆರಂಭಿಸಿದವು. ಕರ್ನಾಟಕದಲ್ಲಿಯೂ ಕನ್ನಡವೇ ಆಡಳಿತ ಭಾಷೆಯಾಗಿ ಜ್ಯಾರಿಗೆ ಬಂದರೂ ವಾಸ್ತವವಾಗಿ ಕನ್ನಡದಲ್ಲಿ ಕೆಲಸಗಳು ನಡೆಯುತ್ತಿಲ್ಲವಾದುದರಿಂದ ಆರಂಭದಲ್ಲಿ ಕನ್ನಡ ಕಾವಲು ಸಮಿತಿಯನ್ನು ರಚಿಸಲಾಯಿತು. ನಂತರ ಅದು ಕನ್ನಡ ಅಭಿವೃದ್ಧಿ ಪ್ರಾಧಿಕಾರವಾಗಿ ಮಾರ್ಪಟ್ಟು ಸ್ವಾಯತ್ತೆಯನ್ನು ಪಡೆಯಿತಲ್ಲದೇ ಶಾಸನಬದ್ಧ ಸ್ಥಾನಮಾನವನ್ನು ಪಡೆದಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆರಂಭದ ನಂತರ ಸುಮಾರು ಇಪ್ಪತ್ತೈದು ವರ್ಷಗಳಲ್ಲಿ ಬಹಳಷ್ಟು ಕನ್ನಡದ ಕೆಲಸಗಳು ನಡೆದಿವೆ. ಸರೋಜಿನಿ ಮಹಿಷಿ ವರದಿಯ ಶಿಫಾರಸ್ಸುಗಳ ಅನುಷ್ಟಾನಕ್ಕಾಗಿ ಪ್ರಯತ್ನ ಪಡಲಾಗಿದೆ. ಅಲ್ಲದೇ ಶಿಕ್ಷಣ ಮತ್ತು ಮಾಧ್ಯಮ ನೀತಿಗಳನ್ನೂ ಕೂಡ ಸರಕಾರಕ್ಕೆ ಸಲ್ಲಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಈಗಿನ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಹಿಂದಿನ ಅಧ್ಯಕ್ಷರುಗಳ ಉತ್ತಮ ಕಾರ್ಯಕ್ರಮಗಳನ್ನು ಮುಂದುವರಿಸುತ್ತಾ ಕನ್ನಡದ ಕುರಿತು ಆಗಬೇಕಿರುವ ಕೆಲಸಗಳನ್ನು ಮಾಡಲು ಮತ್ತು ಕನ್ನಡಕ್ಕೆ ಕೇಂದ್ರ ಸರಕಾರದಿಂದ ಸಿಗಬೇಕಾದ ಸವಲತ್ತುಗಳನ್ನು ಪಡೆಯಲು ತ್ವರಿತ ರೀತಿಯಲ್ಲಿ ಕಾರ್ಯೋನ್ಮುಖರಾಗಿದ್ದಾರೆ. ಕೇಂದ್ರ ಸರ್ಕಾರದ ಸಂಬಂಧಪಟ್ಟ ಸಚಿವರನ್ನು ಮತ್ತು ಅಧಿಕಾರಿಗಳನ್ನು ಭೇಟಿಯಾಗಿ ದಾಖಲೆ ಸಹಿತ ಅವರಿಗೆ ಮನವರಿಕೆ ಮಾಡುವ ಪ್ರಯತ್ನವನ್ನು ಅತ್ಯಂತ ಮುತುವರ್ಜಿಯಿಂದ ಮಾಡುತ್ತಿದ್ದಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಗಡಿನಾಡಿನ ಕನ್ನಡಿಗರ ಕುರಿತಾದ ವರದಿಯನ್ನು ಈಗಾಗಲೇ ಸರ್ಕಾರಕ್ಕೆ ಸಲ್ಲಿಸಿರುತ್ತದೆ. ಅದೇ ರೀತಿ ಹೊರನಾಡಿನ ಕನ್ನಡಿಗರ ಸವಾಲುಗಳನ್ನು ಕೂಡಾ ಅಧ್ಯಯನ ಮಾಡಬೇಕಾಗಿದೆ. ದೆಹಲಿ ಕರ್ನಾಟಕ ಸಂಘವು ರಾಷ್ಟ್ರ ರಾಜಧಾನಿಯಲ್ಲಿ ಕರ್ನಾಟಕದ ರಾಯಭಾರಿ ಕೆಲಸವನ್ನು ಬಹುಮಟ್ಟಿಗೆ ಅನೌಪಚಾರಿಕವಾಗಿ ಮಾಡುತ್ತಾ ಬಂದಿದೆ. ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಕನ್ನಡ ಭಾಷಾ ಪೀಠವನ್ನು ಸ್ಥಾಪಿಸುವಲ್ಲಿ ಮಾಡಿದ ಪ್ರಯತ್ನಗಳು ಅಲ್ಲದೇ ದೆಹಲಿಯ ಕೇಂದ್ರ ಸರಕಾರದ ಸಚಿವರು, ಉನ್ನತಾಧಿಕಾರಿಗಳು ಮೊದಲಾದವರ ಜತೆ ಸಂಪರ್ಕಿಸಿ ಕರ್ನಾಟಕಕ್ಕೆ ಸಂಬಂಧಿಸಿದ ಇನ್ನಿತರ ಕೆಲಸ ಕಾರ್ಯಗಳನ್ನು ಮಾಡಿಸಲು ಕೂಡಾ ಪ್ರಯತ್ನಗಳನ್ನು ನಡೆಸುತ್ತಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಂಘದ ಇಂತಹ ಕಾರ್ಯಗಳನ್ನು ಗಮನಿಸಿಯೇ ಈ ಸಲ ಕೇಂದ್ರ ಸರಕಾರದ ಸಚಿವರನ್ನು ಮತ್ತು ಸಂಸದರನ್ನು ಭೇಟಿಯಾಗುವ ನಿಯೋಗದಲ್ಲಿ ಸಂಘಕ್ಕೂ ಪ್ರಾತಿನಿಧ್ಯವನ್ನು ಕೊಟ್ಟಿದ್ದಾರೆ. ದೆಹಲಿಯಲ್ಲಿ ಕರ್ನಾಟಕದ ಕೆಲಸಗಳಿಗಾಗಿ ಅಲ್ಲಿನ ಎಲ್ಲಾ ಕೇಂದ್ರ ಸಚಿವರು ಮತ್ತು ಸಂಸದರು ಒಟ್ಟಾಗಿ ಇಂತಹ ನಿಯೋಗದ ಜೊತೆಗೆ ಪ್ರತಿನಿಧಿಸಿ ಸಂಬಂಧಪಟ್ಟ ಸಚಿವರ ಮೇಲೆ ಕರ್ನಾಟಕದ ಪರವಾದ ಒತ್ತಡವನ್ನು ಹೇರುವ ಮತ್ತು ಆ ಮೂಲಕ ಕನ್ನಡಕ್ಕೆ ಹಾಗೂ ಕರ್ನಾಟಕಕ್ಕೆ ಆಗಬೇಕಾದ ಕೆಲಸಗಳನ್ನು ಮಾಡಿಸಿಕೊಂಡು, ನ್ಯಾಯ ಒದಗಿಸುವ ಕೆಲಸ ಮಾಡಬೇಕು. ಈ ಸಲ ನಿಯೋಗವು ಸಲ್ಲಿಸಿದ ಬೇಡಿಕೆಗಳಿಗೆ ಪೂರಕವಾಗಿ ಸ್ಪಂದಿಸಿ ಸಲ್ಲಿಸಿದ ಎಲ್ಲಾ ಬೇಡಿಕೆಗಳನ್ನು ಈಡೇರಿಸುವ ಭರವಸೆಯನ್ನು ಕೇಂದ್ರ ಸರ್ಕಾರದ ಸಚಿವರುಗಳು ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘದೊಂದಿಗೆ ಮಾಡುವ ಇಂತಹ ಪ್ರಯತ್ನಗಳು ನಮ್ಮ ನಾಡಿಗೆ ಪ್ರಯೋಜನಕಾರಿಯಾಗಲಿ ಎಂದು ಹಾರೈಸುವೆನು. ಸಂಘದ ಸದಸ್ಯರಿಗೆಲ್ಲರಿಗೂ ಹೊಸವರ್ಷದ ಹಾರ್ದಿಕ ಶುಭಾಶಯಗಳು. ಅ

***ವಸಂತ ಶೆಟ್ಟಿ ಬೆಳ್ಳಾರೆ, ಅಧ್ಯಕ್ಷರು***

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಜನವರಿ, 2018ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 21 ಜನವರಿ, 2018ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 28 ಜನವರಿ, 2018ರಂದು ಬೆಳಿಗ್ಗೆ 11 ಗಂಟೆಯಿಂದ.

**ಡಾ. ಭೀಮ್ ಭಟ್ M.D. (AYU)** ಅವರಿಂದ ಉಚಿತ ಆಯುರ್ವೇದ ವೈದ್ಯಕೀಯ ಸಲಹೆ ಭಾನುವಾರ 28 ಜನವರಿ, 2018ರಂದು ಸಾಯಂಕಾಲ 4 ಗಂಟೆಯಿಂದ.



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿರಿ. ಫೋನ್ : 9560653021/ 9560563203, 011–26109615 / 26104818



DELHI KARNATAKA *SANGHA* Rao Tularam Marg, Sector-12, R K Puram, New Delhi-110022.
Phone: 011-26109615. 011-26104818 email:dksangha@gmail.com

## ಮುನ್ನೋಟ

ಆತ್ಮೀಯ ಸದ್ಯರುಗಳಿಗೆ ಹೊಸ ವರ್ಷ ಹಾಗೂ ಮಕರ ಸಂಕ್ರಾಂತಿಯ ಹಾರ್ದಿಕ ಶುಭಾಶಯಗಳು.

ಡಿಸೆಂಬರ್ ತಿಂಗಳ 9 ಮತ್ತು 10ರಂದು ಕರ್ನಾಟಕ ಸಂಘ ಮಂಡ್ಯ ಆಯೋಜಿಸಿದ 'ಮಂಡ್ಯ ಜಿಲ್ಲಾ ಉತ್ಸವ' ದಲ್ಲಿ 80ಕ್ಕಿಂತ ಹೆಚ್ಚು ಕಲಾವಿದರು 'ಪಾದುಕಾ ಕಿರೀಟ', 'ಜಲಗಾರ' ಮತ್ತು 'ಶೂದ್ರತಪಸ್ವಿ' ಮೂರು ನಾಟಕಗಳ ಪ್ರದರ್ಶನ ನೀಡುವ ಮೂಲಕ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು. ಕಾರಣಾಂತರಗಳಿಂದ ಮುಂದೂಡಲಾಗಿದ್ದ 'ಚಳಿಗಾಲದ ಆಹಾರ ಮೇಳ'ವನ್ನು ಫೆಬ್ರವರಿ ಅಥವಾ ಮಾರ್ಚ್ ತಿಂಗಳಲ್ಲಿ ಆಯೋಜಿಸಲಾಗುವುದು.

ಸಂಘದ ಸಂವಿಧಾನ ತಿದ್ದುಪಡಿಗಾಗಿ ಸರ್ವ ಸದಸ್ಯರ ವಿಶೇಷ ಮಹಾಸಭೆ ಈಗಾಗಲೇ ನಡೆದಿದ್ದು, ಅಂದಿನ ನಿರ್ಣಯಗಳ ಅನುಮೋದನೆಗಾಗಿ ಜನವರಿ 21ರಂದು ಸರ್ವ ಸದಸ್ಯರ ಸಭೆಯನ್ನು ಕರೆಯಲಾಗಿದೆ ಮತ್ತು ಅದೇ ದಿನ ಮಧ್ಯಾಹ್ನ 2.00ಗಂಟೆಗೆ ಕೇಂದ್ರ ಸಂಗೀತ ನಾಟಕ ಪ್ರಶಸ್ತಿಗಳನ್ನು ಪಡೆದಿರುವ ಕರ್ನಾಟಕದ ಖ್ಯಾತ ಸುಗಮ ಸಂಗೀತ ಗಾಯಕಿ ರತ್ನಮಾಲಾ ಪ್ರಕಾಶ್, ಪ್ರಸಿದ್ಧ ವಯೋಲಿನ್ ವಾದಕ ಮೈಸೂರು ಎಂ. ಮಂಜುನಾಥ್, ಯಕ್ಷಗಾನ ಕಲಾವಿದ ಕೆ. ಗೋವಿಂದ ಭಟ್ ಮತ್ತು ತೊಗಲು ಗೊಂಬೆಯಾಟದ ಕಲಾವಿದ ದತ್ತಾತ್ರೇಯ ಅರಳಿಕಟ್ಟೆ ಇವರಿಗೆ ಅಭಿನಂದನಾ ಕಾರ್ಯಕ್ರಮ ಜೊತೆಗೆ ಗೋವಿಂದ ಭಟ್ ಮತ್ತು ತಂಡದಿಂದ 'ಶ್ರೀಕೃಷ್ಣ ಸುಧನ್ವ ಕಾಳಗ' ಯಕ್ಷಗಾನ ಪ್ರದರ್ಶನ ನಡೆಯಲಿದೆ ಬಂದು ಆನಂದಿಸಿ.

ಜನವರಿ 28 ಮತ್ತು 29ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಜರುಗಲಿರುವ ವಚನ ಸಂಗೀತೋತ್ಸವದಲ್ಲಿ ಕರ್ನಾಟಕದಿಂದ 120ಕ್ಕೂ ಹೆಚ್ಚು ಕಲಾವಿದರು ಬಂದು ಕಾರ್ಯಕ್ರಮವನ್ನು ನೀಡಲಿದ್ದಾರೆ. 28ರಂದು ಭಾನುವಾರ ಪೂರ್ತಿ ಸಂಘದಲ್ಲಿ ನಡೆದರೆ, 29ರಂದು ನೋಯ್ಡಾದ ಕನ್ನಡಿಗರಿಗೆ ಜೆ.ಎಸ್.ಎಸ್. ನೋಯ್ಡಾದಲ್ಲಿ ಆಯೋಜನೆ ಮಾಡಲಾಗಿದೆ. ಅ

*ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ*

## ದೆಹಲಿ ಕರ್ನಾಟಕ ಸಂಘದ ಮುಂಬರುವ ಕಾರ್ಯಕ್ರಮಗಳು

**2018 ಜನವರಿ 21** — ಭಾನುವಾರ, ಬೆಳಿಗ್ಗೆ : 11.00 ಗಂಟೆಗೆ

ದೆಹಲಿ ಕರ್ನಾಟಕ ಸಂಘದ ಸಂವಿಧಾನ ತಿದ್ದುಪಡಿಗಾಗಿ
ಎರಡನೇ ಸರ್ವ ಸದಸ್ಯರ ಸಭೆ

**2018 ಜನವರಿ 21** — ಭಾನುವಾರ, ಅಪರಾಹ್ನ : 2.00 ಗಂಟೆಗೆ

2016ನೇ ಸಾಲಿನ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ಮತ್ತು ಶ್ರೀಕೃಷ್ಣ ಸುಧನ್ವ ಕಾಳಗ ಯಕ್ಷಗಾನ ಪ್ರದರ್ಶನ

**2018 ಜನವರಿ 28** — ಭಾನುವಾರ, ಬೆಳಿಗ್ಗೆ : 10.00 ಗಂಟೆಗೆ

ವಚನ ಸಂಗೀತೋತ್ಸವ
ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಂಟಿ ಕಾರ್ಯಕ್ರಮ

**2018 ಜನವರಿ 29** — ಸೋಮವಾರ, ಸಂಜೆ : 4.00 ಗಂಟೆಗೆ

ವಚನ ಸಂಗೀತೋತ್ಸವ
ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಜಂಟಿ ಕಾರ್ಯಕ್ರಮ. ಸ್ಥಳ : ಜೆ.ಎಸ್.ಎಸ್. ನೋಯ್ಡಾ

## ದೆಹಲಿ ಕರ್ನಾಟಕ ಸಂಘದಿಂದ ಮನೆಬಾಗಿಲಿಗೆ ಕಾರ್ಯಕ್ರಮ

**2018 ಜನವರಿ 26** — ಶುಕ್ರವಾರ, ಸಂಜೆ : 4.00 ಗಂಟೆಗೆ

ಸಾಂಸ್ಕೃತಿಕ ಕಾರ್ಯಕ್ರಮಗಳು
ಸ್ಥಳ : ಭೀವಾಡಿ

## ದೆಹಲಿ ಕರ್ನಾಟಕ ಸಂಘದ- ಪ್ರಕಟಣೆಗಳು

- ದೆಹಲಿ ಕನ್ನಡ ಸಂಪುಟ
- ಸಿಡಿಲಿನ ಬಡಿತ ಹಾಗೂ ಏನಿದೆ ಈ ಮುದುಕನ ಗುಟ್ಟು?
- ರಾಜಧಾನಿಯಲ್ಲಿ ಕರ್ನಾಟಕ
- ಜರ್ನಿ ಟು ವಾರ್ಧಾ–ಇಂಗ್ಲಿಷ್
- ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ–ನಾಟಕ
- ದೇವರು ಎದ್ದು ಬಂದಾಗ–ನಾಟಕ
- ನಾನು–ನೀನು ಕವನ ಸಂಕಲನ
- ರಂಗಿನೋಕುಳಿ–ಕವನ ಸಂಕಲನ
- ನಮ್ಮಿಬ್ಬರ ನಡುವೆ–ಕವಿತೆಗಳು

**ಅಭಿಮತ ಪ್ರಧಾನ ಸಂಪಾದಕರು**
ಬಾಲಕೃಷ್ಣ ನಾಯ್ಕ್ ಡಿ.

**ಅಭಿಮತ ಸಂಪಾದಕ ಮಂಡಳಿ**
ಸಖಾರಾಮ ಉಪ್ಪೂರು, ಚಂದ್ರಶೇಖರ್ ಎನ್.ಪಿ., ಎಸ್. ಕುಮಾರ್

ಸಂಪುಟ 28 ಸಂಚಿಕೆ 4
ಜನವರಿ 2018

ಅಭಿಮತ

## ಸಂಪಾದಕರ ಟಿಪ್ಪಣಿಗಳು

ಮುಖಪುಟ ಚಿತ್ರ
ಬಾಲಕೃಷ್ಣ ನಾಯ್ಕ್ ಡಿ.

# ಹಿಂದಿಯನ್ನು ವಿಶ್ವಸಂಸ್ಥೆಯ ಅಧಿಕೃತ ಭಾಷೆಯನ್ನಾಗಿ ಮಾಡುವುದು ಸಮಂಜಸವೇ?

ಭಾರತದಂತಹ ಒಂದು ವಿಶಾಲವಾದ ಮತ್ತು ವೈವಿಧ್ಯಮಯವಾದ ದೇಶದಲ್ಲಿ ಯಾವುದೇ ಭಾಷೆಯ ಭವಿಷ್ಯವನ್ನು ನಿರ್ಣಯಿಸುವುದು ಅದಕ್ಕೆ ದೊರೆಯುವ ಅಧಿಕೃತ ಸ್ಥಾನಮಾನದಿಂದ ಅಲ್ಲ ಬದಲು ಆ ಭಾಷೆಯು ಸಾಮಾಜಿಕವಾಗಿ ಎಷ್ಟು ಸ್ವೀಕಾರವಾಗಿದೆ ಎಂಬುದರಿಂದ ಆಗಿದೆ. ಅದಕ್ಕೆ ಹಲವು ನಿದರ್ಶನಗಳು ನಮ್ಮ ದೇಶದಲ್ಲಿ ಕಂಡು ಬರುತ್ತವೆ. ಹಿಂದಿ ಭಾಷೆಯನ್ನೇ ತೆಗೆದುಕೊಂಡರೂ ವಾಸ್ತವವಾಗಿ, ಅದು ಭಾರತದ ಹಲವು ಅಧಿಕೃತ ಭಾಷೆಗಳಲ್ಲಿ ಒಂದಾಗಿದೆ ಅಷ್ಟೇ. ಹಿಂದಿಯನ್ನು ಒಂದು ರಾಷ್ಟ್ರಭಾಷೆಯನ್ನಾಗಿ ಮಾಡದೇ ಅದನ್ನು ಇಂಗ್ಲೀಷ್ ಜೊತೆಗೆ ಲಿಂಕ್ ಭಾಷೆ ಎಂದು ಪರಿಗಣಿಸಲಾಗಿದೆ. ನಿಜವಾಗಿ ನೋಡಿದರೆ ಭಾರತದಲ್ಲಿ ಇತರ ಎಲ್ಲಾ ಭಾಷೆಗಳಿಗಿಂತ ಹೆಚ್ಚು ಪ್ರಾಬಲ್ಯವಿರುವುದು ಇಂಗ್ಲೀಷ್ ಭಾಷೆಗೆ. ಯಾಕೆಂದರೆ ಅದೊಂದು ಜ್ಞಾನವನ್ನು ಒದಗಿಸುವ ಭಾಷೆಯಾಗಿದೆ. ಅರಿವನ್ನು ಪಡೆದಾಗ ನಾವು ಸಬಲರಾಗುತ್ತೇವೆ. ಹಾಗಾಗಿ ಇಂಗ್ಲೀಷ್ ಒಂದು ಸಬಲೀಕರಣದ ಭಾಷೆಯಾಗಿ ರೂಪುಗೊಂಡಿದೆ. ಇಡೀ ಭಾರತೀಯ ಆಡಳಿತಾತ್ಮಕ ಮತ್ತು ಶೈಕ್ಷಣಿಕ ವ್ಯವಸ್ಥೆಯು ಇಂಗ್ಲೀಷ್ ಮೇಲೆ ಆಧಾರಿತವಾಗಿದೆ.

ಇದೀಗ ಹಿಂದಿ ಭಾಷೆಯನ್ನು ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆಯನ್ನಾಗಿ ಮಾಡಲು ಭಾರತ ಸರಕಾರವು ಸುಮಾರು ನಾನೂರು ಕೋಟಿ ರೂಪಾಯಿ ವೆಚ್ಚಮಾಡುವ ಯೋಜನೆ ಹಾಕಿಕೊಂಡಿದೆ. ಹಿಂದಿಗೆ ದೇಶದ ರಾಷ್ಟ್ರೀಯ ಸ್ಥಾನಮಾನವನ್ನು ಪಡೆದುಕೊಳ್ಳದೆಯೇ ವಿಶ್ವಸಂಸ್ಥೆಯಲ್ಲಿ ಅಧಿಕೃತ ಸ್ಥಾನಕ್ಕೆ ಹೋಗುವುದು ಗೊಂದಲದ ವಿಚಾರವಾಗಿದೆ. ಹಿಂದಿಯನ್ನು ವಿಶ್ವಸಂಸ್ಥೆಯ ಒಂದು ಅಧಿಕೃತ ಭಾಷೆಯನ್ನಾಗಿ ಮಾಡುವುದು ಹಿಂದಿ ಪ್ರದೇಶದಲ್ಲಿ ಉತ್ಸಾಹದ ಬೆಂಬಲವನ್ನು ಪಡೆದರೂ ಬೇರೆ ಭಾಷೆಗಳನ್ನು ಆಡುವ ಪ್ರದೇಶಗಳಲ್ಲಿ ಹಿಂದಿ ವಿರೋಧಿ ಚಳುವಳಿಗಳು ಮುಂದುವರಿಯುತ್ತಿವೆ. ಭಾರತದಲ್ಲಿ ಹಿಂದಿಗೆ ಅನಧಿಕೃತವಾಗಿ ಮೊದಲ ಸ್ಥಾನವನ್ನು ನಮ್ಮ ವ್ಯವಸ್ಥೆಗಳು ಕೊಡುತ್ತಿವೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಭಾರತದ ಸಿನಿಮಾರಂಗವೆಂದರೆ ಕೇವಲ ಹಿಂದಿ ಚಿತ್ರರಂಗವನ್ನಷ್ಟೇ ಬಿಂಬಿಸಲಾಗುತ್ತದೆ. ಹಿಂದಿಯನ್ನು ವಿಶ್ವಸಂಸ್ಥೆಯ ಅಧಿಕೃತ ಭಾಷೆಯನ್ನಾಗಿ ಮಾಡುವುದರ ಕುರಿತು ಈಗಾಗಲೇ ಸಂಸತ್ತಿನಲ್ಲಿ ವಿರೋಧ ವ್ಯಕ್ತವಾಗಿದೆ. ಹಿಂದಿ ವಿಶ್ವಸಂಸ್ಥೆಯ ಒಂದು ಅಧಿಕೃತ ಭಾಷೆಯಾಗಿ, ಮುಂದೆ ಭಾರತದ ಪ್ರಧಾನಿ ಓರ್ವ ಹಿಂದಿಯೇತರ ಪ್ರದೇಶದವರಾಗಿದ್ದು ಹಿಂದಿಯ ಗಂಧಗಾಳಿ ಗೊತ್ತಿಲ್ಲದವರಾದರೆ ಅವರು ವಿಶ್ವಸಂಸ್ಥೆಯಲ್ಲಿ ಭಾರತವನ್ನು ಪ್ರತಿನಿಧಿಸುವಾಗ ಅವಮಾನ ಗೊಳಗಾಗಬೇಕಾಗಬಹುದು. ಒಂದೆಡೆ ಹಿಂದಿಯನ್ನು ವಿಶ್ವಸಂಸ್ಥೆಯಲ್ಲಿ ಅಧಿಕೃತ ಭಾಷೆಯನ್ನಾಗಿಸುವ ಪ್ರಯತ್ನವಾಗುತ್ತಿರುವಂತೆ ದೇಶದಾದ್ಯಂತ ಇಂಗ್ಲೀಷ್ ಶಾಲೆಗಳನ್ನು ತೆರೆಯುವ ಕೆಲಸಗಳು ನಡೆಯುತ್ತಿರುವ ವಿರೋಧಾಭಾಸವನ್ನು ಕಾಣಬಹುದು.

ಭಾರತದ ಸಂಸತ್ತಿನಲ್ಲಿಯೂ ಭಾರತದ ಎಲ್ಲಾ ಭಾಷೆಗಳನ್ನು ಅಧಿಕೃತ ಭಾಷೆಯನ್ನಾಗಿ ಇನ್ನೂ ಮಾಡಿಲ್ಲ. ಸಾಹಿತ್ಯದ ಮೂಲಕ ಮಾತ್ರವಲ್ಲದೇ ಲಕ್ಷಗಟ್ಟಲೇ ಜನರ ಆಡುನುಡಿಯಾಗಿ ಬಹಳಷ್ಟು ಭಾಷೆಗಳು ಭಾರತದಲ್ಲಿ ಈಗಲೂ ಪ್ರಬಲವಾಗಿವೆ. ಕೆಲವೊಂದು ಭಾಷೆಗಳ ಮೂಲಕ ನಮ್ಮ ಜನಪ್ರತಿನಿಧಿಗಳು ತಮ್ಮ ಚರ್ಚೆಗಳನ್ನು ಸಂಸತ್ತಿನಲ್ಲಿ ಮಾಡುವ ಅವಕಾಶಗಳಿದ್ದರೂ ಇತರರು ಮಾಡಿದ ಭಾಷಣಗಳನ್ನು ನಮ್ಮದೇ ಭಾಷೆಯಲ್ಲಿ ಕೇಳುವ ಸೌಲಭ್ಯ ಇನ್ನೂ ಕೂಡಾ ನಮ್ಮ ಸಂಸತ್ತಿನಲ್ಲಿ ಇಲ್ಲ. ಅಂದರೆ ಸಂಸತ್ತಿನ ಸದಸ್ಯರು ತಮ್ಮ ಭಾಷೆಗಳಲ್ಲಿ ಮಾತನಾಡಿದಾಗ, ಭಾಷಣಗಳನ್ನು ಹಿಂದಿ ಮತ್ತು ಇಂಗ್ಲೀಷ್‌ಗೆ ಮಾತ್ರವೇ ಅನುವಾದಿಸಲಾಗುತ್ತದೆ. ಆದ್ದರಿಂದ, ಮಲಯಾಳಂ ಭಾಷಣಕಾರರ ಭಾಷಣವನ್ನು ಬಂಗಾಳಿಗೆ ಅನುವಾದಿಸುವುದಿಲ್ಲ. ತಮಿಳು ಮಾತಾಡುವ ಸಂಸತ್ತಿನ ಸದಸ್ಯರು ತಮಿಳು ಭಾಷೆಗೆ ಅನುವಾದಗೊಂಡ ಗುಜರಾತಿ ಭಾಷಣವನ್ನು ಕೇಳಲು ಸಾಧ್ಯವಾಗುವುದಿಲ್ಲ.

ಲೋಕಸಭೆಯಲ್ಲಿ ವೃತ್ತಿಯಲ್ಲಿರುವ ಅಭಿಮತ ಸಂಪಾದಕ ಮಂಡಳಿಯ ಎನ್.ಪಿ. ಚಂದ್ರಶೇಖರ್ ಅವರು ಸಂಸತ್‌ನಲ್ಲಿ ಮೊತ್ತ ಮೊದಲಿಗೆ ಕನ್ನಡದಲ್ಲಿ ಭಾಷಣ ಮಾಡಿದ ಜೆ.ಎಚ್. ಪಟೇಲ್ ಅವರ ಕುರಿತು ಈ ಸಂಚಿಕೆಯಲ್ಲಿ ಅಪರೂಪದ ಒಂದು ಲೇಖನವನ್ನು ಬರೆದಿದ್ದಾರೆ. ದೇಶದ ರಾಜಧಾನಿಯಲ್ಲಿ ಕನ್ನಡದ ಕೆಲಸಗಳನ್ನು ಸುಪ್ತವಾಗಿ ಮಾಡುವ ವ್ಯಕ್ತಿಗಳನ್ನು ಸಂಘವು ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಿದೆ. ಈ ಹೊಸ ವರ್ಷದಲ್ಲಿ ಕನ್ನಡದ ಇನ್ನಷ್ಟು ಚಟುವಟಿಕೆಗಳು ನಡೆಯಲಿ ಎಂದು ಹಾರೈಸುವೆವು. ಅ

ಬಾಲಕೃಷ್ಣ ನಾಯ್ಕ್ ಡಿ.




# ಸಂವಿಧಾನ ತಿದ್ದುಪಡಿಗಾಗಿ ವಿಶೇಷ ಸರ್ವ ಸದಸ್ಯರ ಸಭೆ



ದೆಹಲಿ ಕರ್ನಾಟಕ ಸಂಘದ ಸಂವಿಧಾನ ತಿದ್ದುಪಡಿಗಾಗಿ ವಿಶೇಷ ಸರ್ವ ಸದಸ್ಯರ ಸಭೆಯು ನವೆಂಬರ್ 5, 2017ರಂದು ಸಂಘದ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು.

ಸಂಘದ ಅಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ಸರ್ವ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು. ಸಂವಿಧಾನ ತಿದ್ದುಪಡಿ ಸಮಿತಿಯ ಅಧ್ಯಕ್ಷರಾದ ಶ್ರೀ ಪಿ.ಎಸ್. ಶೆಟ್ಟಿ, ಸಂಚಾಲಕರಾದ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಇ.ಸಿ. ವಿದ್ಯಾಸಾಗರ್, ಶ್ರೀ ಬಿ.ಎಲ್. ಸುರೇಶ್, ಶ್ರೀ ಅನಂತರಾಮ್ ಭಟ್ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.





ಸಂಘದ ಮಾಜಿ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ, ಮಾಜಿ ಕಾರ್ಯದರ್ಶಿ ಶ್ರೀ ಎಸ್. ಕೃಷ್ಣ ಭಟ್, ಶ್ರೀ ಆರ್. ರೇಣುಕುಮಾರ್, ಮಾಜಿ ಕೋಶಾಧಿಕಾರಿಗಳಾದ ಶ್ರೀ ಈಶ್ವರ ಮಡಿವಾಳ್, ಶ್ರೀ ಕೆ.ಆರ್. ರಾಮಮೂರ್ತಿ, ಡಾ. ವೈ. ಅವನೀಂದ್ರನಾಥ್ ರಾವ್ ಸದಸ್ಯರುಗಳಾದ ಶ್ರೀ ಎನ್.ಎ. ಮಾಧವ, ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಚೆನ್ನು ಎಸ್. ಮಠದ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀ ಪ್ರದೀಪ್ ಕುಮಾರ್, ಶ್ರೀ ರಾಜಕುಮಾರ್, ಶ್ರೀ ನಾರಾಯಣ ಬಿ., ಶ್ರೀ ಶ್ರೀಹರಿ, ಶ್ರೀ ಎ.ಟಿ. ಶ್ರೀನಿವಾಸ್, ಶ್ರೀ ನರಸಿಂಹ ಮೂರ್ತಿ, ಮೊದಲಾದವರು ಸೂಕ್ತ ಸಲಹೆ ಹಾಗೂ ಅಭಿಪ್ರಾಯಗಳನ್ನು ಮಂಡಿಸಿದರು. ಸಲಹೆ ಸೂಚನೆಗಳನ್ನು ಸ್ವೀಕರಿಸಿದ ಸಂವಿಧಾನ ತಿದ್ದುಪಡಿ ಸಮಿತಿಯು ಅಂತಿಮವಾಗಿ ಪರಿಷ್ಕರಿಸಿದ ತಿದ್ದುಪಡಿಯನ್ನು ಅನುಮೋದಿಸಲು ಎರಡನೇ ವಿಶೇಷ ಸರ್ವ ಸದಸ್ಯರ ಸಭೆಯು ಇದೇ ಜನವರಿ 21ರಂದು ನಡೆಯಲಿದೆ. ಅ



**ಅಭಿಮತ ವರದಿ**




# ದೆಹಲಿ ಕರ್ನಾಟಕ ಸಂಘದಿಂದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ

ದೆಹಲಿ ಕರ್ನಾಟಕ ಸಂಘ ಈ ವರ್ಷದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿ ವೇತನ ವಿತರಣೆ ಹಾಗೂ ಭಾಷಾ ಬಾಂಧವ್ಯ ಸ್ಥಳೀಯ ಕಲಾವಿದರಿಂದ ವಿವಿಧ ಭಾಷೆಗಳ ನೃತ್ಯ ಕಾರ್ಯಕ್ರಮವನ್ನು ಇದೇ ಡಿಸೆಂಬರ್ 3ರಂದು ಹಮ್ಮಿಕೊಂಡಿತ್ತು. ಈ ಕಾರ್ಯಕ್ರಮಕ್ಕೆ ಮಂಗಳೂರಿನ ಎಸ್.ಡಿ.ಎಂ. ಲಾ ಕಾಲೇಜಿನ ಮಾಜಿ ಪ್ರಾಂಶುಪಾಲರಾದ ಶ್ರೀ ರಾಜೇಂದ್ರ ಶೆಟ್ಟಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಪರವೂರಲ್ಲಿ ಬಂದು ಸಾಧನೆಯನ್ನು ಮಾಡಿ, ಕನ್ನಡದ ಸೇವೆಯನ್ನು ಮಾಡಿ, ಪರವೂರಿನ ಕನ್ನಡಿಗರಿಂದ ಸನ್ಮಾನಗೊಳ್ಳುತ್ತಿರುವ ಹಿರಿಯರನ್ನು ನೋಡಿ ಸಂತಸ ವ್ಯಕ್ತಪಡಿಸಿದರು. ನಾವು ಊರಿನಲ್ಲಿದ್ದು ಎಲ್ಲಾ ರೀತಿಯ ಸಾಧನೆಗಳನ್ನು ಮಾಡಲು ಸಾಧ್ಯ ಇದ್ದರೂ ಏನೂ ಮಾಡದೆ ಸುಮ್ಮನೆ ಇರುವಾಗ, ಇಂತಹ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸುವುದು ಮುಜುಗರ ಆಗುತ್ತದೆ ಎಂದರು.

ಮನುಷ್ಯ ಅನಿವಾರ್ಯವಾಗಿ ಸಮಾಜಜೀವಿ. ಸಮಾಜ ಎಂಬ ಶಬ್ದಕ್ಕೆ ಇಂಗ್ಲಿಷ್‌ನಲ್ಲಿ ಕಮ್ಯುನಿಟಿ ಎಂದು ಹೇಳುತ್ತೇವೆ. ಕಮ್ಯುನಿಟಿ ಎಂಬ ಶಬ್ದವನ್ನು ಬಿಡಿಸಿದರೆ ನಿಮಗೆ, ಅದರೊಳಗೆ ಕಮ್ಯುನಿಕೇಶನ್ ಕಾಣುತ್ತದೆ. ಯಾವುದೇ ಕಮ್ಯುನಿಕೇಶನ್ ಸೃಷ್ಟಿಯಾಗಬೇಕಾದರೆ, ಅದರಲ್ಲೊಂದು ಕಮ್ಯುನಿಕೇಶನ್ ಬೇಕಾಗುತ್ತದೆ. ಈ ಕಮ್ಯುನಿಕೇಶನ್ ಬೇರೆ ಯಾವುದೂ ಅಲ್ಲ, ಅದು ಭಾಷೆ. ಹಾಗಾಗಿ ನಮ್ಮನ್ನು ಒಟ್ಟುಗೂಡಿಸುವುದಾಗಲಿ, ನಮ್ಮ ಸಂಬಂಧಗಳನ್ನು ವಿಮರ್ಶಿಸುವುದಾಗಲಿ, ಅದಕ್ಕೊಂದು ಬೆಲೆಯನ್ನು ಕೊಡುವುದಾಗಲಿ ಅದು ಭಾಷೆ ಎಂದು ಅವರು ವಿವರಿಸಿದರು. ನಾವು ಎಲ್ಲಿ ಹೋದರೂ ಭಾಷೆಯ ಪರಿಮಳ ನಮ್ಮಲ್ಲಿ ಉಳಿದುಹೋಗುತ್ತದೆ. ಅದು ನಮ್ಮ ಬಿಡುವುದಿಲ್ಲ 'ಎಲ್ಲಾದರು ಇರು, ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎಂದು ಹೇಳುತ್ತೇವೆ. ಯಾಕೆಂದರೆ ಇದು ಕನ್ನಡದ ಬಗ್ಗೆ ಒಂದು ವಿಶೇಷ ಮಮತೆಯಿಂದ ಹೇಳುತ್ತಾ ಇದ್ದೇನೆ. ಕನ್ನಡಿಗರು ಎಲ್ಲಿಯೇ ಹೋಗಲಿ, ಅವರು ಹೊಂದಿಕೊಳ್ಳುತ್ತಾರೆ. ಇಡೀ ಜೀವನದ ದೊಡ್ಡ ಆತಂಕ ಏನು ಅಂತ ಹೇಳಿದ್ರೆ ನಮಗೆ ಹೊಂದಾಣಿಕೆ ಬರುವುದಿಲ್ಲ. ಎಲ್ಲಾ ಘರ್ಷಣೆಗಳ ಹಿಂದೆ ಇರುವುದು ಘರ್ಷಣೆ ಹೊಂದಾಣಿಕೆ ಇಲ್ಲದಿರುವುದೊಂದು ಮಾತ್ರ. ನೀವು ಸರಿಯಾಗಿ ಆಲೋಚನೆ ಮಾಡಿ, ನಾವು ಹೊಂದಿಕೊಳ್ಳಲಿಕ್ಕೆ ತಯಾರಿಲ್ಲ. ಆದರೆ ಕನ್ನಡದ ಜನ ಎಲ್ಲೇ ಹೋಗಲಿ, ಅವರು ಬರೇ ಹೊಂದಿಕೊಳ್ಳುವುದಲ್ಲ, ಎಲ್ಲಿದ್ದಾರೆ ಅಲ್ಲಿಯವರೆಗೆ ಸಹಕಾರ ಕೊಡುತ್ತಾರೆ ಎಂದು ಶ್ರೀ ಶೆಟ್ಟಿ ಅವರು ಹೇಳಿದರು.

ಬದುಕಿನಲ್ಲಿ ನಾವು ಏನು ಅನುಭವಿಸಿದ್ದೇವೆ, ಮುಂದಿನ ಪೀಳಿಗೆಗೆ ನಾವು ಇದನ್ನು ಏನು ಹೇಳಬಹುದು? ಈ ವಿಷಯ ಬಂದಾಗ ನನಗೆ ಎಲ್ಲೋ ಕಾಣುತ್ತದೆ, ನಾವೆಲ್ಲ ಒಂದಲ್ಲ ಒಂದು ರೀತಿಯಲ್ಲಿ ನಮ್ಮ ಬೇರುಗಳನ್ನು ಮರೆಯುತ್ತಾ ಇದ್ದೇವೆ, ನಮ್ಮ ಮನೆಗಳನ್ನು ಮರೆಯುತ್ತಾ ಇದ್ದೇವೆ. ನಮ್ಮ ನದಿಗಳಲ್ಲಿ ಈಜಾಡಿದ್ದನ್ನು, ಹಣ್ಣಿನ ಮರಗಳಲ್ಲಿ ತೂಗಾಡಿದ್ದನ್ನು, ಬೆಳದಿಂಗಳನ್ನು ಮರೆಯುತ್ತಾ ಇದ್ದೇವೆ. ಇಂತಹ ಒಂದು ಪರಕೀಯ ವಾತಾವರಣದಲ್ಲಿ ಬೆಳೆಯುತ್ತಾ ಇದ್ದು, ಸಂಬಂಧಗಳ ಬೆಲೆಯನ್ನು ಕಳೆದುಕೊಳ್ಳುತ್ತಾ ಇದ್ದೇವೆ. ಇದು ಬಹಳ ದೊಡ್ಡ ದುರ್ದೆಸೆ ನಮ್ಮಲ್ಲಿ. ಒಬ್ಬರಿಮದ ಒಬ್ಬರು ದೂರವಾಗುತ್ತ ಇದ್ದೇವೆ. ಇಂದು ಸಂಬಂಧಗಳಲ್ಲಿ

## ವಿದ್ಯಾರ್ಥಿ ವೇತನ ವಿತರಣೆ

ದೆಹಲಿ ಕರ್ನಾಟಕ ಸಂಘದಿಂದ ನೀಡಲಾಗುವ ವಿದ್ಯಾರ್ಥಿವೇತನವನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಯಿತು. ಒಂದರಿಂದ ಹನ್ನೆರಡನೇ ತರಗತಿಗಳಲ್ಲಿ ಅಧ್ಯಯನ ನಡೆಸುತ್ತಿರುವ ಸಹನಾ ಮಷಿತ, ಸಂಚಿತಾ, ಅದಿತಿ ಪೂಜಾರಿ, ಅಮೃತ ಜಿ ಹಲ್ಕರ್, ಅರವಿಂದ ಕುಮಾರ್ ಬಿರಾದಾರ, ಜೆ. ರಿಷಿ, ಆಶೀರ್ವಾದ ಎ. ಪೂಜಾರಿ, ರಬಿಯತ್ ಬಾನು, ಬಿ.ಎನ್. ದೀಪಾಂಕನ್ ಅವರಿಗೆ ನೀಡಲಾಯಿತು.

**ಸಂಘದ ಮಾಜಿ ಅಧ್ಯಕ್ಷರುಗಳ ಸ್ಮರಣಾರ್ಥ** ನೀಡಲಾದ ವಿದ್ಯಾರ್ಥಿ ವೇತನಗಳನ್ನು ಪಡೆದವರು–

ಶ್ರೇಷ್ಠಾ ಎಚ್. ತೇಲಿ (**ನರಹರಿ ರಾವ್ ಸ್ಮರಣಾರ್ಥ**), ಮಹೇಶ್ ಆರ್ (**ವಿ.ಕೆ. ಆರ್.ವಿ. ರಾವ್**), ಮಹೇಶ್ ಕುಮಾರ್ ನಿಂಬಾಳ್(**ಎ.ಪಿ. ಕುಮಟಾಕರ್**), ನವಯುಗ್ ಶ್ರೀರಾಮ್ (**ಎ.ವಿ. ಪೈ**), ಅಂಜು (**ರಾಘವನ್**), ಕೆ. ದೀಪ್ತಿಕಾ ಗಣೇಶ್ (**ಕೃಷ್ಣಮೂರ್ತಿ ರಾವ್**), ಸಾಯಿಪ್ರಸಾದ್ ಬಿ (**ಜಿ.ವೈ. ಕೃಷ್ಣನ್**), ಉಷಾ ಸಿ (**ಗೋಪಾಲ ಶಾಸ್ತ್ರಿ**), ಪ್ರಸನ್ನ ಬಿರಾದಾರ (**ಐ. ರಾಮ ಮೋಹನ ರಾವ್**).

ಸಂಘದ ಮಾಜಿ ಅಧ್ಯಕ್ಷ **ಕೆ.ಆರ್. ನಾಗರಾಜ** ಅವರ **ಸ್ಮರಣಾರ್ಥ** ವಿದ್ಯಾರ್ಥಿ ವೇತನವನ್ನು ಹರ್ಷಿತ್ ಮತ್ತು ಗೌರವ್ ಅವರಿಗೆ ವಿತರಿಸಲಾಯಿತು. ದಿ. ಶ್ರೀ ಈಶ್ವರಪ್ಪ ಮುರಗೋಡ ಮತ್ತು ದಿ. ಶ್ರೀ ಅಶ್ವಥ್ ಸ್ಮಾರಕ ವಿದ್ಯಾರ್ಥಿ ವೇತನವನ್ನು ಎಂ. ಮನೋಹರ್ ಅವರಿಗೆ ನೀಡಲಾಯಿತು.

ಇದೇ ಸಂದರ್ಭದಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ ಸೇರಿದ 37 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ನೀಡಿ ಪ್ರೋತ್ಸಾಹಿಸಲಾಯಿತು.

ಯಾವ ರುಚಿಯೂ ಇಲ್ಲ. ಎಲ್ಲಿ ಹೋದರೂ ನಮಗೆ ಪ್ರಯೋಜನ ಬೇಕು. ಜನ ಬೇಕಿಲ್ಲ. ನಿಜವಾದ ಭದ್ರತೆ ಇರುವುದು ಸಂಬಂಧದಲ್ಲಿ. ಎಲ್ಲಿ ಪ್ರೀತಿ, ವಿಶ್ವಾಸ ಇದೆ ಅಲ್ಲಿ ಮಾತ್ರ ಭದ್ರತೆ ಇದೆ ಎಂದರು.

ಹಳ್ಳಿಗೆ ಅಜ್ಜನ ಮನೆಗೆ ಬಂದ ಮಕ್ಕಳು ಆಡುವುದಿಲ್ಲ. ಫೋನ್ ಅಥವಾ ಟ್ಯಾಬ್‌ನಲ್ಲಿ ಆಟ ಆಡಿಕೊಂಡು ಒಂದು ಮೂಲೆಯಲ್ಲಿ ಕೂತಿರುತ್ತಾರೆ. ನಮ್ಮ ಸಮಯದಲ್ಲಿ ಆಟ ಆಡಲು ಒಂದು ಕೋಲು ಇದ್ದರೆ ಸಾಕಾಗುತ್ತಿತ್ತು. ಈಗ ಎಷ್ಟು ಆಟಿಕೆಗಳನ್ನು ಕೊಡಿ ಮಕ್ಕಳಿಗೆ ಸಮಧಾನ ಇಲ್ಲ. ನಾವು ಅಹಂಕಾರದ ಕೋಟೆಯೊಳಗೆ ಸಿಕ್ಕಿಕೊಂಡಿದ್ದೇವೆ. ಹಾಗಾಗಿ ನಮಗೆ ಒಬ್ಬರೊಂದಿಗೆ ಒಬ್ಬರು, ಬೆರೆಯಲಿಕ್ಕೆ ಆಗ್ತಾ ಇಲ್ಲ. ಈ ಬೆರೆಯುವಂತಹ ವಾತಾವರಣವನ್ನು ಸೃಷ್ಟಿಸಿ ನಿಮ್ಮ ಮಕ್ಕಳಿಗೆ 'ಅಜ್ಜ-ಅಜ್ಜಿ'ಯರ ಪ್ರೀತಿಯಿಂದ ವಂಚನೆಯನ್ನು ಮಾಡಬೇಡಿ ಎಂದು ಹಿತನುಡಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ವೈಜನಾಥ ಹೆಗಣೆ ಅವರು ತಮ್ಮನ್ನು ಹುಡುಕಿ ದೆಹಲಿ ಕರ್ನಾಟಕ ಸಂಘದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿರುವುದು ತುಂಬಾ ಸಂತೋಷ ತಂದಿದೆ ಎಂದರು.

ಚೆನ್ನು ಎಸ್. ಮಠದ ಅವರು ಮಾತನಾಡುತ್ತ ಈ ಸಂಜೆ ನನಗೆ ನಿಜಕ್ಕೂ ಸಂತಸವನ್ನು ತಂದಿದೆ. ಯಾಕೆಂದರೆ 1979ರಲ್ಲಿ ದೆಹಲಿಗೆ ಕಾಲಿಟ್ಟ ದಿನದಿಂದಲೇ ಸಂಘಕ್ಕೆ ಮೊದಲ ಭೇಟಿ ನೀಡಿದೆ. ಅಂದಿನಿಂದ ಇಲ್ಲಿಯವರೆಗೆ ಸಂಘಕ್ಕಾಗಿ ನಿರಂತರವಾಗಿ ಕೆಲಸವನ್ನು ಮಾಡುತ್ತಲೇ ಬಂದಿದ್ದೇನೆ. ಈ ಸಂಘ ನನಗೆ 'ಇನ್ನೊಂದು ಮನೆ' ಅನ್ನೋ ಹಾಗೆ ಎಂದರು. ನಮ್ಮ ಮನೆಯಲ್ಲಿ ನಾನು ಹೇಗೆ ಸಹಾಯ ಮಾಡುತ್ತೇನೋ ಅದೇ ರೀತಿ ಸಂಘಕ್ಕೆ ಸಹಾಯ ಹಸ್ತ ನೀಡಿದ್ದೇನೆ ಈ ಪ್ರಶಸ್ತಿ ನನಗೆ ಹರ್ಷ ತಂದಿದೆ ಎಂದರು.

ಶೇಖರ್ ಎನ್. ಬಂಗೇರಾ ಅವರು ಮಾತನಾಡುತ್ತಾ ಕನ್ನಡದವರು ಕೊಟ್ಟ ಡ್ಯೂಟಿ ಅಂತ ಹೇಳಿ ನಾನು ಸಂಘದ, ಒಂದು ಕನ್ನಡದ ಸಂಸ್ಥೆಯಾಗಿ ರೆಸ್ಟೋರೆಂಟ್ ನಡೆಸಿಕೊಂಡು ಬಂದು ಎಲ್ಲರ ಪ್ರೀತಿಗೆ ಪಾತ್ರರಾಗಿ ಇಂತಹ ಆಶೀರ್ವಾದ ಕೊಟ್ಟು ನನ್ನನ್ನು ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಸನ್ಮಾನಿಸಿದ್ದೀರಿ. ಇನ್ನು ಮುಂದೆ ಕೂಡಾ ಈ ಸಂಘ ದೆಹಲಿ ಕನ್ನಡಿಗರಿಗಷ್ಟೇ ಮಾತ್ರವಲ್ಲ ಹೊರಗಿನವರಿಗೂ ಕೂಡಾ ದಾರಿದೀಪವಾಗಲಿ ಎಂದು ಹಾರೈಸಿದರು.

ದೆಹಲಿಯಲ್ಲಿ ಕನ್ನಡಕ್ಕಾಗಿ ಸೇವೆ ಮಾಡಿದ ರಂಗಕರ್ಮಿ, ಖ್ಯಾತ ಚಿತ್ರ ಕಲಾವಿದ ಶ್ರೀ ಚೆನ್ನು ಎಸ್. ಮಠದ, ಖ್ಯಾತ ಹೋಟೆಲು ಉದ್ಯಮಿ ಮತ್ತು ಸಮಾಜ ಸೇವಕರಾದ ಶ್ರೀ ಶೇಖರ್ ಎನ್. ಬಂಗೇರ, ಸೌಜನ್ಯ ಪ್ರಿಂಟಿಂಗ್ ಪ್ರೆಸ್‌ನ ಮಾಲೀಕರಾದ ಶ್ರೀ ವೈಜನಾಥ್ ಎನ್. ಹೆಗಣೆ ಅವರುಗಳಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಮುಖ್ಯ ಅತಿಥಿಗಳಾದ ಶ್ರೀ ರಾಜೇಂದ್ರ ಶೆಟ್ಟಿ ಅವರು ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಅವರು ವಹಿಸಿದ್ದರು. ಹಳೆಯ ಕಟ್ಟಡದಲ್ಲಿರುವಾಗ ದೆಹಲಿ ಕರ್ನಾಟಕ ಸಂಘ ಹೇಗೆ ನಡೆಯುತ್ತಿತ್ತು. ದೆಹಲಿ ಕರ್ನಾಟಕ ಸಂಘಕ್ಕೆ ಆದಾಯ ಇರಲಿಲ್ಲ, ನಾವು ಕಾರ್ಯಕ್ರಮಗಳನ್ನು ಮಾಡಬೇಕಾದಾಗ ಬೇರೆ ಬೇರೆ ಆಡಿಟೋರಿಯಂ ಅಥವಾ ಪಾರ್ಕ್‌ನಲ್ಲಿ ಸೇರುತ್ತಾ ಇದ್ದೆವು. ಅಂತಹ ಸಂದರ್ಭದಲ್ಲಿ ಕರ್ನಾಟಕದಿಂದ ಯಾರೇ ಒಬ್ಬ ಬರಲಿ, ಅವರಿಗೆ ಹೆಚ್ಚಿನ ಎಲ್ಲಾ ಸೌಲಭ್ಯಗಳನ್ನು ಶೇಖರ್ ಬಂಗೇರಾ ಅವರ ಕ್ಯಾಂಟೀನ್ ಕೊಡುತ್ತಾ ಇತ್ತು. ಸಂಘ ಅಲ್ಲ ಎಂದರು.

ಸಂಘದ ನೂತನ ಕಟ್ಟಡ ಕಟ್ಟುವ ಸಂದರ್ಭದಲ್ಲಿ ವೈಜನಾಥ್ ಹೆಗಣೆಯವರು ಅಭಿಮತ ಪತ್ರಿಕೆಯನ್ನು ಚೆನ್ನಾಗಿ ತರಲು ಕೊಟ್ಟ ಕೊಡುಗೆಯನ್ನು ಸ್ಮರಿಸಿದರು.

ಚೆನ್ನು ಎಸ್. ಮಠದ ಅವರು ಸಂಘದ ಹಿರಿಯ ಸದಸ್ಯರು ಅಂದಿನಿಂದ ಇಂದಿನವರೆಗೆ ಅಭಿಮತ ಇರಬಹುದು, ನಾಟಕ ಇರಬಹುದು, ಆರ್ಟ್‌ಗ್ಯಾಲರಿ ಇರಬಹುದು ಅಥವಾ ಇನ್ನಿತರ ಕಾರ್ಯಕ್ರಮಗಳಿರಬಹುದು ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ ಎಂದು ವಸಂತ ಶೆಟ್ಟಿ ಬೆಳ್ಳಾರೆಯವರು ತಿಳಿಸಿದರು.

ಭಾಷಾ ಬಾಂಧವ್ಯದ ಬಗ್ಗೆ ಅವರು ಮಾತನಾಡುತ್ತಾ ಸಂಘವು ನಿರಂತರವಾಗಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ, ಸಂಘಕ್ಕೆ ಮುಂದಿನ ಪೀಳಿಗೆಗಳು ಬರುವುದು ಕಡಿಮೆಯಾದ್ದಂತಹ ಸಂದರ್ಭದಲ್ಲಿ ಅವರನ್ನು ಸಂಘಕ್ಕೆ ಕರೆಸಿಕೊಳ್ಳಬೇಕು ಎಂಬ ಉದ್ದೇಶದಿಂದ ನೀವು ಯಾವ ಭಾಷೆಯಲ್ಲಿ ಬೇಕಾದರೂ ಕಾರ್ಯಕ್ರಮವನ್ನು ಕೊಡಿ, ಮಕ್ಕಳು ಇಲ್ಲಿ ಬರಬೇಕು, ನೀವು ಕಾರ್ಯಕ್ರಮವನ್ನು ಹಿಂದಿ, ಪಂಜಾಬಿ, ಬಂಗಾಳಿ, ತಮಿಳು ಯಾವುದೇ ಭಾಷೆಯಲ್ಲಿ ಮಾಡಿ ನಿಮಗೊಂದು ಅವಕಾಶ. ಬಂದು ಕುಣಿಯುವ ಮೂಲಕ ಮುಂದಿನ ಬಾರಿ ನೀವು ಕನ್ನಡದ ಹಾಡಿಗೆ ಹೆಜ್ಜೆ ಹಾಕಬೇಕು ಎನ್ನುವುದೇ ನಮ್ಮ ಉದ್ದೇಶ ಎಂದು ಹೇಳಿದರು.

ಸಂಸತ್ತಿನಲ್ಲಿ ಪಟೇಲ್ ವಿಷಯದ ಬಗ್ಗೆ ಮಾತನಾಡುತ್ತ ಪಟೇಲರು ಮಾಡಿದ ಸಾಧನೆಯಿಂದ ಕನ್ನಡ ಗಟ್ಟಿಯಾಗಿದೆ ಎಂದು ನಾವು ಹೆಮ್ಮೆಯಿಂದ ಹೇಳಬಹುದು. ಹೇಗೆ ಅವರಿಗೆ ನಮನವನ್ನು ಸಲ್ಲಿಸಬೇಕು ಎಂದು ನನಗೆ ಅರ್ಥ ಆಗ್ತಾ ಇಲ್ಲ ಎಂದು ವಸಂತ ಶೆಟ್ಟಿ ಅವರು ಹೇಳಿದರು. 50 ವರ್ಷಗಳ ಹಿಂದೆ ಪಟೇಲರು ಕನ್ನಡದ ಪ್ರೇಮವನ್ನು ತೋರಿಸಿ ಗಟ್ಟಿಯಾಗಿ ಕನ್ನಡದಲ್ಲಿ ಮಾತನಾಡಿ ಇವತ್ತು ನಾವು ಗಟ್ಟಿಯಾಗಿ ಮಾತನಾಡುವ ಹಾಗೆ ಮಾಡಿ ಕೊಟ್ಟಿದ್ದಾರೆ. ಪಟೇಲರು 1967ರಲ್ಲಿ ಮಾತನಾಡಿದರು, ತದನಂತರ ಈ ಬಾರಿ ಲೋಕಸಭೆಗೆ ಚುನಾಯಿತರಾಗಿ ಬಂದಂತಹ ಕರ್ನಾಟಕದ ಎಲ್ಲಾ ಸಂಸದರು ಕನ್ನಡದಲ್ಲೇ ಪ್ರಮಾಣ ವಚನವನ್ನು ಮಾಡಿದ್ದಾರೆ. ಇದಕ್ಕೆ ಹಿಂದೆ ಕೂಡಾ ಕೆಲವರು ಮಾಡಿದ್ದಾರೆ. ಹೆಚ್ಚೇಕೆ ವಿಶ್ವಸಂಸ್ಥೆಯಲ್ಲಿ ಅನಂತಕುಮಾರ್ ಅವರು ಪ್ರಪ್ರಥಮ ಬಾರಿಗೆ ಕನ್ನಡದಲ್ಲಿ ಭಾಷಣ ಮಾಡಿದ್ದಾರೆ. ನಮಗೆಲ್ಲ ಹೆಮ್ಮೆಯ ವಿಚಾರ ಎಂದರು.

ಇದೇ ಸಂದರ್ಭದಲ್ಲಿ ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಸಮಾಜವಾದೀ ಚಿಂತಕ, ಧೀಮಂತ ನಾಯಕ ದಿವಂಗತ ಜೆ.ಹೆಚ್. ಪಟೇಲ್ ಅವರು ಸಂಸತ್ತಿನಲ್ಲಿ 1967ರಲ್ಲಿ ಮಾರ್ದನಿಸಿದ ಕನ್ನಡ ಕಹಳೆಗೆ 2017 ನೇ ವರ್ಷಕ್ಕೆ ಐವತ್ತು ವಸಂತಗಳು ಪೂರೈಸುತ್ತಿರುವ ಸಂದರ್ಭದಲ್ಲಿ 'ಕನ್ನಡದ ಕಹಳೆಗೆ 50ರ ಸಂಭ್ರಮ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಂಸತ್ತಿನಲ್ಲಿ ಪಟೇಲ್ ಕುರಿತು ಶ್ರೀ ಚಂದ್ರಶೇಖರ್ ಎನ್.ಪಿ. ಅವರು ಮಾತನಾಡಿ ಇದು ಕನ್ನಡಿಗರಿಗೆ ಅತ್ಯಂತ ಅಭಿಮಾನದ ಸಂಗತಿ ಮಾತ್ರವಲ್ಲ ಸಂಭ್ರಮಾಚರಣೆಯ ಸಂಗತಿ ಕೂಡ ಹೌದು. ಕಾರಣ ಇಂಗ್ಲಿಷ್ ಮತ್ತು ಹಿಂದಿಯನ್ನು ಬಿಟ್ಟರೆ ಉಳಿದೆಲ್ಲ ಭಾರತೀಯ ಭಾಷೆಗಳಲ್ಲಿಯೇ ಮೊದಲ ಬಾರಿಗೆ ಕನ್ನಡದ ಧ್ವನಿ ಭಾರತದ ಸಂಸತ್ತಿನಲ್ಲಿ ಕೇಳಿಸಿದ್ದು ಜೆ.ಹೆಚ್.ಪಟೇಲರಿಂದ. ಹಾಗಾಗಿ ಭಾರತೀಯ ಸಂಸತ್ತಿನ ಇತಿಹಾಸದಲ್ಲಿ ಇಂದೊಂದು ಕ್ರಾಂತಿಕಾರಿ ಘಟ್ಟ. ಇದಕ್ಕೆ ಕಾರಣರಾದವರು ಕರ್ನಾಟಕದವರು, ಕನ್ನಡಿಗರು ಎಂಬುದು ಅತ್ಯಂತ ಸಂತೋಷದಯಕವಾದ ಸಂಗತಿ. ಹಾಗಾಗಿ ನಮ್ಮ ಭಾಷೆಯನ್ನು ಅಭಿಮಾನದಿಂದ ಪ್ರಜಾಪ್ರಭುತ್ವದ ದೇಗುಲ ಎಂದೇ ಖ್ಯಾತವಾದ ಸಂಸತ್ತಿನಲ್ಲಿ ಎಷ್ಟೇ ವಿರೋಧ ಎದುರಾದರೂ ಕೂಡ ಬಳಕೆ ಮಾಡಿ, ಕನ್ನಡಕ್ಕೆ ನಾಡಿನ ಒಳಗೆ ಮತ್ತು ಹೊರಗೆ ಹೆಚ್ಚಿನ ಕಸುವನ್ನು ತಂದುಕೊಡಲು ಪ್ರಯತ್ನಿಸಿದ ಮಹನೀಯರಾದ ಪಟೇಲ್ ಅವರಂತೆ ಇಂದಿನ ದಿನಗಳಲ್ಲೂ ನಾವು ನಮ್ಮ ಕನ್ನಡ ಭಾಷೆಯನ್ನು ಅಭಿಮಾನದಿಂದ ಬೆಳೆಸೋಣ ಬಳಸೋಣ ಎಂದು ಅಭಿಪ್ರಾಯ ಪಟ್ಟರು.

ವಿಶಿಷ್ಟ ಕನ್ನಡಿಗರಿಗೆ ನೀಡಿದ ಅಭಿನಂದನಾ ಪತ್ರವನ್ನು ಜಂಟಿ ಕಾರ್ಯದರ್ಶಿ ಟಿ.ಪಿ. ಬೆಳ್ಳಿಯಪ್ಪ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಡಾ. ಎಂ.ಎಸ್. ಶಶಿಕುಮಾರ್ ಹಾಗೂ ಸಂತೋಷ್ ಜೆ ಅವರು ವಾಚಿಸಿದರು.

ಸಭಾ ಕಾರ್ಯಕ್ರಮದ ನಂತರ ಭಾಷಾ ಬಾಂಧವ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀಮತಿ ಜಲಜಾರಾಜು ಅವರ ಹಾಡಿನೊಂದಿಗೆ ಆರಂಭವಾಯಿತು. ಭಾಷಾ ಬಾಂಧವ್ಯ ಕಾರ್ಯಕ್ರಮದಲ್ಲಿ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್, ಜನಕಪುರಿ ಮಹಿಳಾ ಮಂಡಳಿ, ಸಂದೀಪ್ ಶೆಟ್ಟಿ ಮತ್ತು ತಂಡ, ಗುರ್‌ಗಾಂವ್, ದಿವ್ಯ ಮತ್ತು ತಂಡ, ಸಾಬುದರ್ಗಾ ಮತ್ತು ತಂಡ, ಗುರ್‌ಗಾಂವ್, ಸಂತೋಷ್ ಜೆ ಮತ್ತು ತಂಡ, ಗುರ್‌ಗಾಂವ್, ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡಗಳು ತಮ್ಮ ನೃತ್ಯ ಕಾರ್ಯಕ್ರಮವನ್ನು ಪ್ರದರ್ಶಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ವಂದಿಸಿದರು. ಕಾರ್ಯಕ್ರಮವನ್ನು ಉಪಾಧ್ಯಕ್ಷೆ ಆಶಾಲತ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯೆ ಪೂಜಾ ಪಿ. ರಾವ್ ಅವರು ನಿರೂಪಿಸಿದರು.

ದೆಹಲಿ ಕರ್ನಾಟಕ ಸಂಘದ ಸದಸ್ಯರಾದ ಶ್ರೀ ಶ್ರೀನಿವಾಸ ಚಿಕ್ಕೆರೂರು ಮತ್ತು ಶ್ರೀಮತಿ ವೃಂದಾ ಚಿಕ್ಕೆರೂರು ಅವರ ಸುಪುತ್ರಿ ಕು. ನಿಧಿ ಚಿಕ್ಕೆರೂರು ಅವರು ಯು.ಪಿ.ಎಸ್.ಸಿ. ಪ್ರಿಲಿಮಿನರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಈಗ ಮೆಯಿನ್ಸ್ ಬರೆದಿದ್ದಾರೆ. ಅವರನ್ನು ಕೂಡಾ ಈ ಸಂದರ್ಭದಲ್ಲಿ ಗೌರವಿಸಲಾಯಿತು. ಅ

*ಅಭಿಮತ ವರದಿ*



# ದೆಹಲಿ ಕರ್ನಾಟಕ ಸಂಘದಿಂದ ವಿಶಿಷ್ಠ ಕನ್ನಡಿಗ ಪ್ರಶಸ್ತಿ ವಿಜೇತರು



ಚನ್ನಯ್ಯ ಶಿದ್ರಾಮಯ್ಯ ಮಠದ ಮೂಲತಃ ಧಾರಾವಾಡದವರಾದ ಇವರು 1979ರಿಂದ ದೆಹಲಿಯಲ್ಲಿ ವಾಸವಾಗಿದ್ದು ಭಾರತ ಸರಕಾರದ ಕೃಷಿ ಮಂತ್ರಾಲಯದಲ್ಲಿ 33 ವರುಷಗಳ ಸುದೀರ್ಘ ಸೇವೆ ಸಲ್ಲಿಸಿ, ಜಂಟಿ ನಿರ್ದೇಶಕ ಹುದ್ದೆಯಿಂದ ನಿವೃತ್ತರಾಗಿದ್ದಾರೆ. ಮಾನವ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯಲ್ಲದೆ, ಪತ್ರಿಕಾರಿತಾ ಡಿಪ್ಲೋಮ ಹೊಂದಿರುವ ಇವರು ಲೇಖಕ, ಸಂಪಾದಕ, ವ್ಯಂಗ್ಯ ಚಿತ್ರಕಾರ ಹಾಗೂ ರಂಗಕರ್ಮಿಯಾಗಿ ದೆಹಲಿಯ ಅನೇಕ ಸಂಘ ಸಂಘ ಸಂಸ್ಥೆಗಳಿಗೆ ವಿವಿಧ ಕಾರ್ಯಕ್ರಮಗಳು ನರೆವೇರಿಸುವಲ್ಲಿ ಸಹಕರಿಸಿದ್ದಾರೆ. ಇದಲ್ಲದೇ, ದೆಹಲಿ ಕರ್ನಾಟಕ ಸಂಘಕ್ಕೆ ಮೂರು ಬಾರಿ ಜಂಟಿ ಕಾರ್ಯದರ್ಶಿಯಾಗಿ, ಎರಡು ಬಾರಿ ಸದಸ್ಯರಾಗಿ, ದೆಹಲಿ ಕನ್ನಡ ಶಾಲೆಗೆ ಒಂದು ಬಾರಿ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ, ಬಸವ ಇಂಟರ್ ನ್ಯಾಷನಲ್ ಸೆಂಟರ್‌ಗೆ ಉಪಾಧ್ಯಕ್ಷರಾಗಿ ಅಲ್ಲದೆ ಇನ್ನಿತರ ಅನೇಕ ಸಂಘ ಸಂಸ್ಥೆಗಳಿಗೆ ಸೇವೆ ಸಲ್ಲಿಸಿದ್ದಾರೆ. ಚನ್ನಾರ್ಟ್ಸ್ ಎಜ್ಯುಕೇಶನ್ ಸಂಸ್ಥೆ, ಧಾರವಾಡದ ಅಧ್ಯಕ್ಷರಾಗಿದ್ದಾರೆ.

ಬಹುಮುಖ ಪ್ರತಿಭೆಯ ಇವರು 33 ವರ್ಷ ಕೃಷಿ ಮಂತ್ರಾಲಯದ ಇಂಗ್ಲೀಷ್ ಪತ್ರಿಕೆಗಳಿಗೆ ಸಂಪಾದಕರಾಗಿ ಸೇವೆ ಸಲ್ಲಿಸಿದ ಇವರು ಸತತವಾಗಿ 18 ವರುಷ ದೆಹಲಿ ಕರ್ನಾಟಕ ಸಂಘದ 'ಅಭಿಮತ' ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಹಲವಾರು ಪ್ರಕಟಣೆಗಳಿಗೆ ಮುಖಪುಟ ರಚಿಸಿದ್ದಾರೆ. ಇದಲ್ಲದೆ ಹಲವಾರು ವರುಷ ಕನ್ನಡಿಗರು ಹಾಗು ಕನ್ನಡೇತರರಿಗೆ ಕನ್ನಡ ಕಲಿಸಿದ್ದಾರೆ. ಇವರು ಅನುವಾದಿಸಿದ ಕನ್ನಡ ಪುಸ್ತಕಗಳು ನ್ಯಾಷನಲ್ ಬುಕ್ ಟ್ರಸ್ಟ್ ನಿಂದಲೂ ಪ್ರಕಟಗೊಂಡಿವೆ. ಇವರು ಬರೆದ ಲೇಖನಗಳು, ಕವಿತೆಗಳು ಚಿತ್ರಗಳು ಅಭಿಮತವಲ್ಲದೆ ವಿವಿಧ ಕವನ ಸಂಕಲನಗಳು ಹಾಗೂ ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕಾಲೇಜು ದಿನಗಳಿಂದಲೇ ವ್ಯಂಗ್ಯ ಚಿತ್ರಕಲೆಯನ್ನು ಹವ್ಯಾಸವಾಗಿ ಬೆಳೆಸಿಕೊಂಡ ಇವರು ರಚಿಸಿದ ವ್ಯಂಗ್ಯ ಚಿತ್ರಗಳು ಮಯೂರ, ಮಲ್ಲಿಗೆ, ತುಷಾರ, ಕಸ್ತೂರಿ ಹಾಗೂ ಅನೇಕ ಪತ್ರಿಕೆಗಲ್ಲಿ ಪ್ರಕಟಗೊಂಡಿವೆ. ಕನ್ನಡ, ಹಿಂದಿ ಹಾಗು ಇಂಗ್ಲಿಷ್ ಮೂರೂ ಭಾಷೆಗಳಲ್ಲಿ ಬರೆಯಬಲ್ಲ ಇವರ ಕೃತಿಗಳು, ರಚಿಸಿದ ವ್ಯಂಗ್ಯ ಚಿತ್ರಗಳು, ಚಿತ್ರಕಥೆಗಳು ಧರ್ಮಯುಗ್, ಇಲಸ್ಟ್ರೇಟೆಡ್ ವೀಕ್ಲಿ, ಹಿಂದುಸ್ತಾನ್ ಟೈಮ್ಸ್‌ನ ಇವಿನಿಂಗ್ ನ್ಯೂಸ್, ಗ್ರಾಫಿತಿ, ಸೋವಿಯೆತ್ ರಷ್ಯಾದಿಂದ ಪ್ರಕಟವಾಗುತ್ತಿದ್ದ ಮಿಷಾ, ಮಾಟಿ ಮುದೀರ್, ಹೋಂ ಸೈನ್ಸ್, ಇಂಟೆನ್ಸಿವ್ ಅಗ್ರಿಕಲ್ಚರ್, ಅಗ್ರಿಕಲ್ಚರಲ್ ಎಕ್ಸಟೆನ್ಶನ್ ರೆವಿವ, ಸೈನಿಕ ಸಮಾಚಾರ್, ಸಂಯುಕ್ತ ಕರ್ನಾಟಕ, ದೆಹಲಿ ವಾರ್ತೆ ಹಾಗು ಇನ್ನು ಅನೇಕ ಪತ್ರಿಕೆಗಲ್ಲಿ ಪ್ರಕಟಗೊಂಡಿವೆ. ಈ ವರೆಗೆ ಮೂರು ನಾಟಕಗಳನ್ನು ರಚಿಸಿ ಸ್ವತಃ ನಿರ್ದೇಶಿಸಿ ಅಭಿನಯಿಸಿ ಪ್ರದರ್ಶನ ನೀಡಿದ್ದಾರೆ. ಕೃಷಿ ಮಂತ್ರಾಲಯದ ವಿಡಿಯೋ ಪ್ರೊಡಕ್ಷನ್‌ಗೂ ಸೇವೆ ಸಲ್ಲಿಸಿ ಹಲವಾರು ಕೃಷಿ ದರ್ಶನದ ಕಾರ್ಯಕ್ರಮಗಳಿಗೂ ಕೊಡುಗೆ ನೀಡಿದ್ದಾರೆ. ಇತ್ತೀಚಿಗೆ ಎನಿಮೇಟೆಡ್ ಪ್ರಚಾರ ಫಿಲಂಗೂ ಕೆಲಸ ಮಾಡಿ ಅನುಭವ ಪಡೆದುಕೊಂಡಿದ್ದಾರೆ.

ಶಾಲೆಗೆ ಸೇರುವದಕ್ಕೆ ಮುನ್ನವೇ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಇವರು ಚಿತ್ರಕಲೆಯನ್ನು ಹವ್ಯಾಸವಾಗಿ ಬೆಳೆಸಿಕೊಂಡು ಸ್ವಯಂ ಕಲಿತು ಶಾಲಾ ಕಾಲೇಜು ದಿನಗಳಲ್ಲಿಯೇ ಅನೇಕ ಸ್ಪರ್ಧೆಗಳಲ್ಲಿ ಬಹುಮಾನ ಪಡೆದು 1974 ರಲ್ಲಿ "ನವ ದೆಹಲಿ ಯಂಗ್‌ಸ್ಟರ್ಸ್ ಕ್ಲಬ್" ಆಯೋಜಿಸಿದ "ಅಖಿಲ ಭಾರತೀಯ ಪೊರ್ಟ್ರೇಟ್ ಪೇಂಟಿಂಗ್ ಕಾಂಪಿಟೀಷನ್"ನಲ್ಲಿ ಪ್ರಶಸ್ತಿ ವಿಜೇತರಾಗಿದ್ದಾರೆ. ಈವರೆಗೆ ಅನೇಕ ಪ್ರತಿಷ್ಠಿತ ಕಲಾ ಪ್ರದರ್ಶನಗಳಲ್ಲಿ ಇವರು ರಚಿಸಿದ ಕಲಾಕೃತಿಗಳು ಪ್ರದರ್ಶನಗೊಂಡಿವೆ. ಚಿತ್ರಕಲೆಯಲ್ಲದೆ ಬಾಲ್ಯದಿಂದಲೇ ಮೂರ್ತಿ ಕೆತ್ತನೆ, ಮಣ್ಣು, ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮೂರ್ತಿ ತಯಾರಿಸುವುದನ್ನೂ ರೂಢಿಸಿಕೊಂಡು ಹಲವಾರು ಕೃತಿಗಳನ್ನು ಸೃಷ್ಟಿಸಿದ್ದಾರೆ. ಇವರ ಮಿನಿಯೇಚರ್ ಕೆತ್ತನೆಯ ಕಲಾಕೃತಿಗಳನ್ನು ಕಾಲೇಜು ದಿನಗಲ್ಲಿಯೇ ಪ್ರದರ್ಶನ ನೀಡಿದ್ದಾರೆ. ರಂಗವಲ್ಲಿ ಬಿಡಿಸುವಲ್ಲಿಯೂ ಇವರು ನಿಪುಣರು.

ಮೊದಲ ತರಗತಿಯಲ್ಲಿ ಓದುತ್ತಿದ್ದಾಗಲೇ ವಾರ್ಷಿಕೋತ್ಸವಗಳಲ್ಲಿ ಜಾದೂಗಾರ್, ಬುಡುಬುಡುಕೆಯವ ಹೀಗೆ ಅನೇಕ ಪಾತ್ರಗಳನ್ನು ಅಭಿನಯಿಸುತಾ ಬೆಳೆದ ಇವರು ಏಳನೇ ತರಗತಿಯಲ್ಲಿ ಓದುತ್ತಿರುವಾಗ ನಾಟಕ ತರಬೇತಿಗೆ ಸೇರಿ ಟಿ.ಪಿ. ಕೈಲಾಸಂ ಅವರ 'ಪೋಲಿ ಕಿಟ್ಟಿ' ನಾಟಕದಲ್ಲಿ ಅಭಿನಯಿಸಿ ಪ್ರಶಂಸೆ ಪಡೆದರು. ಎಂಟನೇ ತರಗತಿಯಲ್ಲಿ ಓದುತ್ತಿರುವಾಗಲೇ ನಾಟಕದ ಪಿತಾಮಹ ಶ್ರೀರಂಗರು ನೀಡಿದ ತರಬೇತಿಯಲ್ಲಿ ಜ್ಞಾನ ಪಡೆದರು. ಇವರು ಅಭಿನಯಿಸಿದ ಎನ್.ಕೆ. ಕುಲಕರ್ಣಿಯವರ "ಏಕೋದರರು" ನಾಟಕ ಅನೇಕ ಬಾರಿ ಪ್ರದರ್ಶನಗೊಂಡಿತು. ಕಾಲೇಜು ದಿನಗಳಲ್ಲಿ ಸ್ವತಃ ನಾಟಕ ರಚಿಸಿ ನಿರ್ದೇಶಿಸಿ ಆಡಿದರು. 1977ರಲ್ಲಿ ಸಮುದಾಯದ ತಿರುಗಾಟದಲ್ಲಿ ಭಾಗವಹಿಸಿದರು.

ಮುಂದೆ 1993ರಲ್ಲಿ ನೌಕರಿಯ ಪ್ರಯುಕ್ತ ದೆಹಲಿಗೆ ಬಂದಾಗ ಹೊಸ ಪರಿಸರಕ್ಕೆ ತಮ್ಮನ್ನು ಪರಿಚಯಿಸಲು ಕೆಲಸಮಯ ಬೇಕಾಯಿತು. ನಿಧಾನವಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸುತಾ ದೆಹಲಿಯ ಅನೇಕ ಕನ್ನಡ ಸಂಸ್ಥೆಗಳಿಗೆ ವಿವಿಧ ಕಾರ್ಯಕ್ರಮಗಳಲ್ಲಿ ಸೇವೆ ನೀಡಿ ಕನ್ನಡ ಜನ ಸಮುದಾಯಕ್ಕೆ ಚಿರಪರಿಚಿತರಾದರು. ಇವರು ಅಭಿನಯಿಸಿದ "ಕಮಲಿ", "ಕೊಳ್ಳಿ", "ದೇವರು ಎದ್ದು ಬಂದಾಗ" ಹಾಗೂ ಇವರೇ ಬರೆದು ನಿರ್ದೇಶಿಸಿದ "ಅಮ್ಮ" ನಾಟಕ ಪ್ರಮುಖವಾದವುಗಳು. 1982ರಿಂದ ದೆಹಲಿಯ ಸಾಂಸ್ಕೃತಿಕ ವಲಯ "ಮಂಡಿ ಹೌಸ್" ಪರಿಸರಕ್ಕೆ ಪ್ರವೇಶಿಸಿ ಅನೇಕ ಹಿರಿಯ ಕಲಾವಿದರೊಂದಿಗೆ ಕೆಲಸ ಮಾಡಿ ಕಲಿಯುವ ಅವಕಾಶ ದೊರಕಿಸಿಕೊಂಡರು . ಇತ್ತೀಚಿಗೆ ದೆಹಲಿಯ "ರಾಷ್ಟ್ರೀಯ ನಾಟಕ ಶಾಲೆ", "ಶ್ರೀರಾಮ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್"ನ ರೆಪರ್ಟರಿಗಳಿಗೆ ಕೆಲಸ ಮಾಡಿ ಕನ್ನಡ ನಾಟಕಗಳಾದ "ತುಘಲಕ್", "ಅಗ್ನಿ ಮತ್ತು ಮಳೆ", "ಹಿಟ್ಟಿನ ಹುಂಜ" ಹಿಂದಿ ಅವತರಣಿಕೆಗಳಿಗೆ ಹಾಗೂ ಸಂಸ್ಕೃತದ "ಪ್ರತಿಮಾ ನಾಟಕಂ" ಇಂಗ್ಲೀಷನ "ಅಪ್ಪೋಯಿಂಟ್ಮೆಂಟ್ ವಿಥ್ ಡೆತ್"ನ ಸುಪ್ರಸಿದ್ಧ ನಿರ್ದೇಶಕರಿಗೆ ವೇಷಭೂಷಣ ಹಾಗೂ ರಂಗಸಜ್ಜಿಕೆಯ ರಂಗ ಕರ್ಮಿಯಾಗಿ ಸೇವೆ ನೀಡುತ್ತಿದ್ದಾರೆ.



**ಶ್ರೀ ಶೇಖರ್ ಎನ್. ಬಂಗೇರ**

ಇವರು ಮೂಲತಃ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ಮೇಲ್ಪಾಲ್ ಹಳ್ಳಿಯವರು. ಇವರ ತಂದೆ ಶ್ರೀ ಮೇಲ್ಪಾಲ್ ನೀಲಯ್ಯ ಪೂಜಾರಿ ಚಿಕ್ಕಮಗಳೂರಿನಲ್ಲಿ ಕಾಫಿ ಎಸ್ಟೇಟ್ ಮತ್ತು ಹೋಟೆಲ್ ಮಾಲೀಕರಾಗಿದ್ದರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮೇಲ್ಪಾಲಿನಲ್ಲಿ, ಪ್ರೌಢಶಿಕ್ಷಣ ಹಾಗೂ ಕಾಲೇಜು ವಿದ್ಯಾಭ್ಯಾಸವನ್ನು ಕಾರ್ಕಳದಲ್ಲಿ ಮುಗಿಸಿದರು. ಕಾರ್ಕಳದ ಪ್ರತಿಷ್ಠಿತ ಭುವನೇಂದ್ರ ಕಾಲೇಜಿನಲ್ಲಿ ತಮ್ಮ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿದ ನಂತರ 1970ರ ದಶಕದಲ್ಲಿ ಅವರ ತಂಗಿ ಹಾಗೂ ಬಾವನವರ ಕರಕುಶಲ ವಸ್ತುಗಳ ರಫ್ತು ವ್ಯಾಪಾರದ ಸಹಾಯಕ್ಕಾಗಿ ನವದೆಹಲಿಗೆ ಬಂದರು. ಮೊದಲು ಇವರು ತಮ್ಮ ವೃತ್ತಿ ಜೀವನವನ್ನು ಉಣ್ಣೆ ಬಟ್ಟೆಯ ರಫ್ತು ಕಂಪನಿಯಲ್ಲಿ ಪ್ರಾರಂಭಿಸಿದರು. ನಂತರ ಉಣ್ಣೆ ಬಟ್ಟೆಯ ರಫ್ತು ವ್ಯವಹಾರದಲ್ಲಿ ಅವರು ತಮ್ಮ ಸ್ವಂತ ಉದ್ಯೋಗವನ್ನು ಪ್ರಾರಂಭಿಸಿದರು. ಅಂದಿನ ದಿನಗಳಲ್ಲಿ ದೆಹಲಿಯಲ್ಲಿ ದಕ್ಷಿಣ ಭಾರತೀಯರ ತಿಂಡಿ-ತಿನಿಸುಗಳಿಗೆ ಹೆಚ್ಚಿನ ಬೇಡಿಕೆ ಇರುವುದನ್ನು ಮನಗಂಡು ಹೋಟೆಲ್ ಉದ್ಯಮಕ್ಕೆ ಇಳಿದರು. 1982ರಲ್ಲಿ ಶ್ರೀ ಬಿ.ಜಿ. ಆಚಾರ್ಯ, ಡಾ. ಸರೋಜಿನಿ ಮಹಿಷಿ ಮತ್ತು ಶ್ರೀ ರಾಮಚಂದ್ರ ರಾವ್ ಅವರ ಸಹಕಾರದಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಕನ್ನಡಿಗರಿಗಾಗಿ ಚಿಕ್ಕ ಉಪಹಾರ ಗೃಹವೊಂದನ್ನು ಪ್ರಾರಂಭಿಸಿದರು. ಇಂದು 'ನೈವೇದ್ಯಂ' ಹೆಸರಿನಲ್ಲಿ ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿ ಹೋಟೆಲ್‌ಗಳನ್ನು ನಡೆಸುತ್ತಾ ಈ ಉದ್ಯಮದಲ್ಲಿ ಹೆಸರುಗಳಿಸಿದ್ದಾರೆ. ಇವರು ತಮ್ಮ ಉದ್ಯೋಗದ ಜೊತೆಗೆ ಕರ್ನಾಟಕದ ಭಾಷೆ, ಸಂಸ್ಕೃತಿ, ಕಲೆ, ಸಾಹಿತ್ಯಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ.

**ಶ್ರೀ ವೈಜನಾಥ ಹೆಗಣೆ**



ಇವರು ಮೂಲತಃ ಬೀದರ್ ಜಿಲ್ಲೆಯ ಭಾತಂಬಾದವರು. ಬಿ.ಎ. ಶಿಕ್ಷಣ ಪಡೆದಿರುವ ಇವರು 1974ರಲ್ಲಿ ದೆಹಲಿಗೆ ಬಂದರು. ತಮ್ಮ ವೃತ್ತಿ ಜೀವನವನ್ನು ಥಾಮ್ಸನ್ ಪ್ರೆಸ್‌ನಿಂದ ಆರಂಭಿಸಿದರು. ಅಲ್ಲಿ ಎರಡು ಮೂರು ವರ್ಷ ಕೆಲಸ ಮಾಡಿ ಮುದ್ರಣದಲ್ಲಿ ಪರಿಣಿತಿಯನ್ನು ಹೊಂದಿ 1989ರಲ್ಲಿ ಪಾಲುದಾರಿಕೆಯಲ್ಲಿ ಮುದ್ರಣ ಪ್ರೆಸ್ ಪ್ರಾರಂಭಿಸಿ, ಮುದ್ರಣದಲ್ಲಿ ಗುಣಮಟ್ಟದ ಕೆಲಸಮಾಡಿ 2000ದಲ್ಲಿ ತಮ್ಮ ಸ್ವಂತ ಈಗಿರುವ ಸೌಜನ್ಯ ಪ್ರಿಂಟಿಂಗ್ ಪ್ರೆಸ್ ಪ್ರಾರಂಭಿಸಿ ಮುದ್ರಣ ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಗಳಿಸಿದ್ದಾರೆ. ದೆಹಲಿಯ ಅನೇಕ ಕನ್ನಡಿಗರ ಮುದ್ರಣ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಿಕೊಡುತ್ತಿದ್ದಾರೆ. ಮುದ್ರಣದ ಜೊತೆಗೆ ಕನ್ನಡದ ಬೆಳವಣಿಗೆಗೆ ಕೆಲಸ ಮಾಡುತ್ತಿದ್ದಾರೆ.

**ಡಾ. ಎಸ್. ರಾಘವೇಂದ್ರ ರಾವ್**



ಇವರು ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಮಂತ್ರಾಲಯದಲ್ಲಿ ವಿಜ್ಞಾನಿಯಾಗಿದ್ದು ನವದೆಹಲಿಯ ಭಾರತೀಯ ಕೃಷಿ ವಿಶ್ವವಿದ್ಯಾಲಯದಿಂದ 1982ರಲ್ಲಿ ಕೃಷಿ ವಿಜ್ಞಾನದಲ್ಲಿ ಎಂ.ಎಸ್.ಸಿ. ಮತ್ತು 1987ರಲ್ಲಿ ಪಿ.ಎಚ್.ಡಿ. ಪದವಿ ಪಡೆದಿದ್ದಾರೆ. 1959 ಜೂನ್ ಒಂದರಂದು ಜನಿಸಿದ ಇವರು ಆಸ್ಟ್ರೇಲಿಯಾ, ಜಪಾನ್ ಸೇರಿದಂತೆ ದೇಶ ವಿದೇಶಗಳಲ್ಲಿ ಜೈವಿಕ ತಂತ್ರಜ್ಞಾನ ಕುರಿತ ಶಿಕ್ಷಣ, ಸಂಶೋಧನೆ ಮತ್ತು ಉತ್ಪಾದನೆಗಾಗಿ ಕೊಡುಗೆ ನೀಡಿದ್ದಾರೆ. ಸರಕಾರದ ಉನ್ನತ ಸಮಿತಿಯ ಸದಸ್ಯರಾಗಿ ಮತ್ತು ಈ ಸಂಬಂಧ ಕೇಂದ್ರ ಸಚಿವರಾಗಿದ್ದ ಶ್ರೀ ಕಪಿಲ್ ಸಿಬ್ಬಲ್ ಅವರ ವಿಶೇಷ ಕರ್ತವ್ಯ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಕೃಷಿ, ಅಹಾರ, ಜೈವಿಕ ತಂತ್ರಜ್ಞಾನ ಕುರಿತು ಮೂವತ್ತಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ದೇಶವಿದೇಶದ ವೈಜ್ಞಾನಿಕ ನಿಯತಕಾಲಿಕಗಳಲ್ಲಿ ಪ್ರಕಟಿಸಿರುವ ಇವರು ಏಶ್ಯಾದಲ್ಲಿ ಜೈವಿಕ ವಿಜ್ಞಾನ ಮತ್ತು ಅಭಿವೃದ್ಧಿಯ ಸವಾಲುಗಳು ಮತ್ತು ಅವಕಾಶಗಳ ಕುರಿತು ಮತ್ತು ಪ್ರಾಣಿಗಳ ಜೈವಿಕ ತಂತ್ರಜ್ಞಾನದ ಕುರಿತು ಕೂಡಾ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರು ಭಾರತದ ವಿವಿಧ ಸಮಾವೇಶಗಳಲ್ಲಿ ಅಲ್ಲದೇ ಅಮೇರಿಕಾ, ಜಪಾನ್, ಬ್ರೆಜಿಲ್, ಆಸ್ಟ್ರೇಲಿಯಾ, ಫ್ರಾನ್ಸ್, ಅರ್ಜೆಂಟಿನಾ, ದಕ್ಷಿಣ ಕೊರಿಯಾ, ಇಟಲಿ, ಫಿಲಿಫೈನ್ಸ್ ಮೊದಲಾದ ದೇಶಗಳಲ್ಲಿ ಸುಮಾರು ಅರುವತ್ತಕ್ಕಿಂತಲೂ ಹೆಚ್ಚು ಕಡೆ ವೈಜ್ಞಾನಿಕ ವಿಚಾರಗಳ ಕುರಿತು ಸಂಶೋಧನಾತ್ಮಕ ಪ್ರಬಂಧಗಳನ್ನು ಮಂಡಿಸಿರುತಾರೆ. ಇವರು ಜೈವಿಕ ತಂತ್ರಜ್ಞಾನ ಕುರಿತ ಸರಕಾರದ ಸುದ್ದಿ ಪತ್ರಿಕೆಯ ಸ್ಥಾಪಕ ಸಂಪಾದಕರು. ತಮ್ಮ ಔದ್ಯೋಗಿಕ ರಂಗದಲ್ಲಿ ಸಂಶೋಧನೆಯ ಮೂಲಕ ಅಮೂಲ್ಯ ಕೊಡುಗೆ ನೀಡಿದ್ದಾರೆ.



# ಸಂಸತ್ತಿನಲ್ಲಿ ಜೆ.ಹೆಚ್. ಪಟೇಲರು ಮೊಳಗಿಸಿದ

# ಕನ್ನಡದ ಸಿರಿನುಡಿಗೆ ತುಂಬಿತು ಐವತ್ತು

ಭಾರತದ ಪ್ರಜಾಪ್ರಭುತ್ವದ ದೇಗುಲ ಎಂದೇ ಹೆಮ್ಮೆಯಿಂದ ಕರೆಸಿಕೊಳ್ಳುವ ಸಂಸತ್ತು ನಮ್ಮ ದೇಶದ ಪರಮೋಚ್ಚ ಶಾಸಕಾಂಗ ಸಂಸ್ಥೆ. ದೇಶದ ಜ್ವಲಂತ ಸಮಸ್ಯೆಗಳನ್ನು ಕುರಿತು ಪ್ರಶ್ನಿಸುವ ಹಾಗೂ ಚರ್ಚಿಸುವ, ದೇಶದ ಸಮಗ್ರ ಆಡಳಿತಕ್ಕೆ ಅನುಕೂಲವಾಗುವ ಕಾನೂನುಗಳನ್ನು ರೂಪಿಸುವ, ಈ ಹಿಂದೆ ರೂಪುಗೊಂಡಿರುವ ಕಾನೂನುಗಳಲ್ಲಿನ ತೊಡಕುಗಳನ್ನು ನಿವಾರಿಸಿ ಇಂದಿನ ದಿನಮಾನದ ಅಗತ್ಯಕ್ಕನುಗುಣವಾಗಿ ರೂಪಿಸಲು ಅಂತಹ ಹಳೆಯ ಕಾನೂನುಗಳಿಗೆ ತಿದ್ದುಪಡಿ ತರುವ–ಮೊದಲಾದ ಅನೇಕ ಮಹತ್ವದ ಕಾರ್ಯಗಳಲ್ಲಿ ಸಂಸತ್ತಿನ ಲೋಕಸಭೆ (ಕೆಳಮನೆ) ಮತ್ತು ರಾಜ್ಯಸಭೆ (ಮೇಲ್ಮನೆ) ಎರಡೂ ಸದನಗಳು ನಿರ್ಣಾಯಕ ಪಾತ್ರವಹಿಸುತ್ತವೆ.

ಇಂತಹ ಸಂದರ್ಭದಲ್ಲಿ ಜನಪ್ರತಿನಿಧಿಗಳು ತಾವು ಪ್ರತಿನಿಧಿಸುವ ಕ್ಷೇತ್ರದ ಅಥವಾ ರಾಜ್ಯದ ಬೇಡಿಕೆಗಳು, ಸಮಸ್ಯೆಗಳು ಅದಕ್ಕೂ ಮಿಗಿಲಾಗಿ ದೇಶಕ್ಕೆ ಅಗತ್ಯವಾಗಿರುವ ಕಾನೂನು ರಚನೆ ಕುರಿತು ಚರ್ಚೆ ಮಾಡುವಾಗ ತಮ್ಮ ಅನುಭವ, ಅನಿಸಿಕೆ ಇತ್ಯಾದಿಗಳನ್ನು ಹಂಚಿಕೊಳ್ಳುವ ಅವಕಾಶಕ್ಕಾಗಿ ತಮ್ಮದೇ ಆದ ರೀತಿಯಲ್ಲಿ ಪ್ರಯತ್ನಿಸುವುದು ಸದನದ ಒಳಗೆ ಸಾಮಾನ್ಯವಾಗಿ ಕಂಡುಬರುವ ದೃಶ್ಯ ಒಂದೆಡೆಯಾದರೆ, ತಮಗೆ ಚರ್ಚೆಗೆ ಅವಕಾಶ ದೊರೆತಾಗ (ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಂಸದರು ಪ್ರಯತ್ನಿಸಿದರೂ ಸಮಯಾವಕಾಶ ದೊರೆಯುವುದೂ ತೀರಾ ವಿರಳ ಎನ್ನುವುದು ಬೇರೆ ಮಾತು) ಸದನದೊಳಗೆ ಚರ್ಚಿಸುವ ಸಂದರ್ಭದಲ್ಲಿ ಭಾರತದ ಸಂವಿಧಾನದ ಮಾನ್ಯತೆಗಳಿಸಿರುವ ತಮ್ಮ ಮಾತೃ ಭಾಷೆಯಲ್ಲಿ ಅತ್ಯಂತ ಆಕರ್ಷಕವಾಗಿ ಮಾತನಾಡಿ ಸರ್ಕಾರದ ಹಾಗೂ ದೇಶದ ಜನರ ಗಮನ ಸೆಳೆಯುವ, ತಾವು ಪ್ರತಿನಿಧಿಸುವ ಕ್ಷೇತ್ರದ ಜನರಿಗೆ ಸ್ಪಂದಿಸುವ ಮತ್ತು ತಮ್ಮ ತಾಯ್ನುಡಿಗೆ ಗೌರವ ಸಲ್ಲಿಸುವ ಜೊತೆಗೆ ತಮ್ಮ ಮಾತೃ ಭಾಷೆ ಸಂಸತ್ತಿನ ಕಲಾಪಗಳ ಧ್ವನಿಸುರಳಿಯಲ್ಲಿ ದಾಖಲಾಗಬೇಕೆಂಬ ಹಂಬಲ, ಕುತೂಹಲ ಪ್ರತಿಯೊಬ್ಬ ಮಾನ್ಯ ಸಂಸದರಿಗೂ ಸಹಜವಾಗಿರುವಂತಹದೇ ಆಗಿದೆ.

ಇಂದು ಭಾರತದ ಸಂಸತ್ತಿನಲ್ಲಿ ಸಂವಿಧಾನದ ಮಾನ್ಯತೆ ಪಡೆದ ಎಲ್ಲ ಭಾರತೀಯ ಭಾಷೆಗಳ ಸ್ವರ ಮಾಧುರ್ಯ ಕೇಳುವಂತಾಗಲು ಕಾರಣಕರ್ತರಾದವರು ನಮ್ಮ ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಸಮಾಜವಾದಿ ಚಿಂತಕ ಮತ್ತು ಧೀಮಂತ ನಾಯಕ ಜೆ.ಹೆಚ್. ಪಟೇಲ್ ಎಂಬುದು ಕನ್ನಡಿಗರಾದ ನಮಗೆ ಆಪ್ಯಾಯಮಾನ. ಕನ್ನಡಿಗರಷ್ಟೇ ಅಲ್ಲ ಭಾರತದ ಎಲ್ಲ ಭಾಷಿಕರು ಅತ್ಯಂತ ಹೆಮ್ಮೆ ಪಡಬೇಕಾದ ಒಂದು ಐತಿಹಾಸಿಕ ಘಟನೆ ಜರುಗಿದ್ದು 1967ರಲ್ಲಿ. ಹಾಗಾಗಿ ಜೆ.ಹೆಚ್. ಪಟೇಲರು ಅಂದು ತಮಗೆ ಎದುರಾದ ಎಲ್ಲ ಅಡಚಣೆಗಳನ್ನು ಮೆಟ್ಟಿನಿಂತು ಹಠತೊಟ್ಟು ಕನ್ನಡದ ಶ್ರೀಕಾರವನ್ನು ಸಂಸತ್ತಿನ ಒಳಗೆ ಮೊಳಗಿಸಿ ಈ 2017ಕ್ಕೆ ಸರಿಯಾಗಿ ಐವತ್ತು ವರ್ಷಗಳು ತುಂಬುತ್ತಿವೆ.

ವರ್ಣರಂಜಿತ ರಾಜಕಾರಣಿ ದಿವಂಗತ ಜೆ.ಹೆಚ್. ಪಟೇಲರು 1967ರಲ್ಲಿ ಸಂಯುಕ್ತ ಸಮಾಜವಾದಿ ಪಕ್ಷದಿಂದ ಸ್ಪರ್ಧಿಸಿ ನಾಲ್ಕನೇ ಲೋಕಸಭೆಗೆ ಆಯ್ಕೆಯಾದ ಆ ಸಂದರ್ಭ ದೇಶದ ಉತ್ತರದ ಹಾಗೂ ದಕ್ಷಿಣದ ರಾಜ್ಯಗಳಲ್ಲಿ ಹಿಂದಿ ಮತ್ತು ಹಿಂದಿಯೇತರ ಭಾಷೆಗಳ ವಿಷಯವಾಗಿ ಬಹುದೊಡ್ಡ ಆಂದೋಲನಗಳು, ಧರಣಿ, ಸತ್ಯಾಗ್ರಹಗಳು, ಚಳುವಳಿಗಳು ನಿರಂತರವಾಗಿ ನಡೆಯುತ್ತಿದ್ದು ದೇಶದ ಸಮಗ್ರತೆ, ಐಕ್ಯತೆಗೆ ಸವಾಲನ್ನು ಒಡ್ಡುತ್ತಿವೆಯೇನೋ ಎಂಬಂತಹ ಆತಂಕಕಾರಿ ಸನ್ನಿವೇಶ ನಿರ್ಮಾಣಗೊಂಡಿತ್ತು.

ಭಾರತದ ಸಂವಿಧಾನದಲ್ಲಿ ಉಲ್ಲೇಖಿಸಿದಂತೆ 1965ರ ಜನವರಿ 26ರವರೆಗೆ ಮಾತ್ರ ಇಂಗ್ಲಿಷ್‌ನ್ನು ಉಳಿಸಿಕೊಂಡು ಅನಂತರ ಕೇಂದ್ರ ಸರ್ಕಾರವು ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳೊಡನೆ ಆಡಳಿತಾತ್ಮಕ ಉದ್ದೇಶಕ್ಕಾಗಿ ಹಿಂದಿ ಮತ್ತು ಭಾರತೀಯ ಭಾಷೆಗಳನ್ನು ಮಾತ್ರ ಬಳಸಬೇಕು ಎಂಬ ಅಂಶವನ್ನು ಎತ್ತಿ ಹಿಡಿದು ಇಂಗ್ಲಿಷ್‌ನ ಬದಲಾಗಿ ಹಿಂದಿಯಲ್ಲಿಯೇ ಎಲ್ಲ ಆದೇಶಗಳೂ, ಸುತ್ತೋಲೆಗಳು ಪ್ರಕಟವಾಗಬೇಕು ಎಂದು ಒತ್ತಾಯಿಸಿ ಕಮ್ಯುನಿಸ್ಟ್ ಪಕ್ಷಗಳು, ಪ್ರಜಾ ಸೋಷಲಿಸ್ಟ್ ಪಾರ್ಟಿ ಮತ್ತು ಸೋಷಲಿಸ್ಟ್ ಪಾರ್ಟಿಗಳು ವಿಲೀನದಿಂದಾಗಿದ್ದ ಸಂಯುಕ್ತ ಸೋಷಲಿಸ್ಟ್ ಪಾರ್ಟಿ ಮತ್ತಿತರರು ಚಳುವಳಿಗಿಳಿದಿದ್ದ ಕಾಲಘಟ್ಟ ಅದಾಗಿತ್ತು.

> ಮೂಲತಃ ಸಮಾಜವಾದಿ ಸಿದ್ಧಾಂತವನ್ನು ಒಪ್ಪಿ ಅಪ್ಪಿಕೊಂಡಿದ್ದ ಅವರಿಗೆ ಸಮಾಜವಾದೀ ಧುರೀಣ ಡಾ. ಲೋಹಿಯಾ ಅವರ ಮೂಲ ಮಂತ್ರ "ಅಂಗ್ರೇಜಿ ಹಠಾವೋ" ಎಂಬ ತತ್ವಕ್ಕೆ ಅನುಗುಣವಾಗಿ ಲೋಕಸಭೆಯಲ್ಲಿ ಕನ್ನಡದ ಸಿರಿನುಡಿಯ ಕಹಳೆಯನ್ನು ಮೊಳಗಿಸಿದರು.
> "ನಾವು ಕೂಡ ಮನುಷ್ಯರು ಮತ್ತು ನಮಗೆ ಕನ್ನಡವೆಂಬ ಒಂದು ಭಾಷೆಯೂ ಇದೆ"

ಸಮಾಜವಾದಿ ಧುರೀಣರಾಗಿದ್ದ ಡಾ. ರಾಮ ಮನೋಹರ ಲೋಹಿಯಾ ಅವರ ಅಂಗ್ರೇಜಿ ಹಠಾವೋ (Banish English) ಎಂಬ ಘೋಷಣೆಯೊಂದಿಗೆ ಹಿಂದಿ ಪ್ರಾಬಲ್ಯವುಳ್ಳ ಉತ್ತರದ ರಾಜ್ಯಗಳಲ್ಲಿ ಹೋರಾಟ ತೀವ್ರ ಸ್ವರೂಪ ಪಡೆದಿತ್ತು.

1963ರಲ್ಲಿ ಹಿಂದಿಯನ್ನು ದೇಶದ ಅಧಿಕೃತ ಭಾಷೆಯನ್ನಾಗಿ ಘೋಷಿಸುವ "ಅಧಿಕೃತ ಭಾಷಾ ಮಸೂದೆಗೆ" ಸಂಸತ್ತಿನ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಸನ್ಮಾನ್ಯ ಪ್ರಧಾನ ಮಂತ್ರಿಗಳು "ಹಿಂದಿಯನ್ನು ಹೇರಿಕೆ ಮಾಡಲಾಗುವುದಿಲ್ಲ, ಹಾಗೆಯೇ ಸಂವಿಧಾನದಲ್ಲಿ ಉಲ್ಲೇಖಿಸಿರುವಂತೆ ಇಂಗ್ಲಿಷ್ ಬಳಕೆಗೆ ಇರುವ ಕಾಲದ ನಿರ್ಬಂಧವನ್ನು ತೆಗೆದು ಹಾಕುವುದಾಗಿ ಹಿಂದಿ ವಿರೋಧಿ ನಾಯಕರುಗಳಿಗೆ ಭರವಸೆ ನೀಡಿದ್ದರು. ಆದರೆ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು 1964ರಲ್ಲಿ ನಿಧನರಾದ ನಂತರ ದಕ್ಷಿಣದಲ್ಲಿ ಹಿಂದಿ ಏರಿಕೆ ವಿರುದ್ಧದ ಚಳುವಳಿ ಮತ್ತಷ್ಟು ಕಾವು ಪಡೆದು 1965ರ ಜನವರಿ 17ರಂದು ಮದ್ರಾಸ್‌ನಲ್ಲಿ ಹಿಂದಿ ವಿರೋಧಿ ಸಮ್ಮೇಳನ ನಡೆಯಿತು. ಇದರೊಂದಿಗೆ ಹಿಂದಿ ವಿರೋಧಿ ಹೋರಾಟ ಮತ್ತಷ್ಟು ಬಿರುಸುಗೊಂಡಿತ್ತು. 1963ರ ಅಧಿಕೃತ ಭಾಷಾ ಕಾಯ್ದೆಗೆ ತಿದ್ದುಪಡಿ ತರಬೇಕು

ಆ ಮೂಲಕ ಹಿಂದಿಯ ಜೊತೆ ಇಂಗ್ಲಿಷ್ ಬಳಕೆಗೆ ಶಾಸನಾತ್ಮಕ ಮಾನ್ಯತೆ ನೀಡಬೇಕೆಂದು ಚಳುವಳಿಗಳು ನಡೆಯುತ್ತಿದ್ದವು. ಹಿಂದಿ ಹೇರಿಕೆಯಾಗಬಾರದು ಬದಲಾಗಿ ಇಂಗ್ಲಿಷ್‌ನ್ನು ಕೂಡ ಬಳಸಿ ಆಡಳಿತದ ವ್ಯವಹಾರಗಳನ್ನು ಸುಸೂತ್ರವಾಗಿ ನಡೆಸಬೇಕು ಎಂಬ ವಾದವನ್ನು ಮುಂದಿಟ್ಟುಕೊಂಡು English Ever, Hindi Never ಎಂಬ ಘೋಷಣೆ ಮದ್ರಾಸ್ ರಾಜ್ಯದೆಲ್ಲೆಡೆ ಮೊಬ್ಬರಿಸ ತೊಡಗಿತ್ತು.

ಮತ್ತೊಂದೆಡೆ 1966ರ ಕೊಠಾರಿ ಶಿಕ್ಷಣ ಆಯೋಗ ಈ ಹಿಂದೆ 1961ರಲ್ಲಿ ನಡೆದ ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಎಲ್ಲ ಭಾರತೀಯ ಭಾಷೆಗಳಿಗೆ ಸಮಾನ ಅವಕಾಶ ಒದಗಿಸಿಕೊಡುವ ಆಶಯದೊಂದಿಗೆ ಸ್ವೀಕರಿಸಿದ ನಿರ್ಣಯದಂತೆ "ತ್ರಿಭಾಷಾ ಸೂತ್ರ"ವನ್ನು ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿತು.

ಇಂತಹ ಸನ್ನಿವೇಶದಲ್ಲಿ ನಾಲ್ಕನೇ ಲೋಕಸಭೆಗೆ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ 1967ರಲ್ಲಿ ಶಿವಮೊಗ್ಗದಿಂದ ಜೆ.ಹೆಚ್. ಪಟೇಲ್ ಅವರು ಸಂಸತ್ತಿಗೆ ಆಯ್ಕೆಯಾಗಿ ಬಂದರು.

ಮೂಲತಃ ಸಮಾಜವಾದಿ ಸಿದ್ಧಾಂತವನ್ನು ಒಪ್ಪಿ ಅಪ್ಪಿಕೊಂಡಿದ್ದ ಅವರಿಗೆ ಸಮಾಜವಾದೀ ಧುರೀಣ ಡಾ. ಲೋಹಿಯಾ ಅವರ ಮೂಲ ಮಂತ್ರ "ಅಂಗ್ರೇಜಿ ಹಟಾವೋ" ಎಂಬ ತತ್ವಕ್ಕೆ ಅನುಗುಣವಾಗಿ ಲೋಕಸಭೆಯಲ್ಲಿ ಕನ್ನಡದ ಸಿರಿನುಡಿಯ ಕಹಳೆಯನ್ನು ಮೊಳಗಿಸಿದರು.

"ನಾವು ಕೂಡ ಮನುಷ್ಯರು ಮತ್ತು ನಮಗೆ ಕನ್ನಡವೆಂಬ ಒಂದು ಭಾಷೆಯೂ ಇದೆ":

ಪಾರ್ಲಿಮೆಂಟಿನಲ್ಲಿ ಪಟೇಲರ ಕನ್ನಡವನ್ನು ಮೊದಲು ಮೊಳಗಿಸಿದ್ದು 1967 ಮಾರ್ಚ್ 30ರಂದು ನಡೆದ ದೇಶದ ಆಹಾರ ಸಮಸ್ಯೆ ಕುರಿತ ಚರ್ಚೆಯಲ್ಲಿ. ಕನ್ನಡದಲ್ಲಿ ಮಾತನಾಡ ತೊಡಗಿದ ಪಟೇಲರಿಗೆ ಆರಂಭದಲ್ಲಿಯೇ ಅನೇಕ ವಿಘ್ನಗಳು ಎದುರಾದವು. ಇತರೆ ಪಕ್ಷದ, ಹಾಗೂ ಕನ್ನಡೇತರ ಸಂಸತ್ ಸದಸ್ಯರುಗಳು ಹಿಂದಿ ಅಥವಾ ಇಂಗ್ಲಿಷ್ ನಲ್ಲಿಯೇ ಭಾಷಣ ಮಾಡಲು ಸೂಚಿಸುವಂತೆ ಅಂದಿನ ಲೋಕಸಭೆಯ ಅಧ್ಯಕ್ಷರಾಗಿದ್ದ ಮಾನ್ಯ ನೀಲಂ ಸಂಜೀವರೆಡ್ಡಿ ಮತ್ತು ಪೀಠವನ್ನು ಅಲಂಕರಿಸಿದ್ದ ಉಪಾಧ್ಯಕ್ಷರು ಒತ್ತಾಯಿಸಿದರು. ಕೊನೆಗೆ ಕನ್ನಡ ಬಲ್ಲವರೇ ಆಗಿದ್ದ ಮಾನ್ಯ ಅಧ್ಯಕ್ಷರು ಪಟೇಲರಿಗೆ ತಮ್ಮ ಮಾತೃಭಾಷೆಯಲ್ಲಿ ಮಾತನಾಡಲು ಅನುಮತಿ ನೀಡಿದರು. ಹೀಗೆ ಸಂಸತ್ತಿನಲ್ಲಿ ಮೊದಲ ಬಾರಿಗೆ ಭಾರತದ ಸಂವಿಧಾನದ ಎಂಟನೇ ಪರಿಚ್ಛೇದ ದಲ್ಲಿ ಸೇರ್ಪಡೆಗೊಂಡಿರುವ ಭಾರತೀಯ ಭಾಷೆಗಳಲ್ಲಿ ಒಂದಾದ ಕನ್ನಡ ಅನುರಣಿಸಿದ್ದು ನಿಜಕ್ಕೂ ಸಂಭ್ರಮಿಸುವ ಸಂಗತಿ. ಆಹಾರದ ಸಮಸ್ಯೆಯನ್ನು ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ಜೆ.ಹೆಚ್. ಪಟೇಲರು' ಸಮಗ್ರ ಆಹಾರ ಕೊರತೆಯ ಸಮಸ್ಯೆಯ ಬಗ್ಗೆ ಒಂದು ರಾಷ್ಟ್ರೀಯ ಸಮಿತಿಯನ್ನು ನೇಮಿಸುವಂತೆಯೂ, ಮೈಸೂರು ರಾಜ್ಯದ ಬಳ್ಳಾರಿ, ಗುಲ್ಬರ್ಗಾ, ವಿಜಾಪುರ ಮತ್ತು ಮೈಸೂರು ಜಿಲ್ಲೆಗಳನ್ನು ಬರಗಾಲಪೀಡಿತ ಪ್ರದೇಶವೆಂದು ಘೋಷಿಸುವಂತೆಯೂ, ಮೈಸೂರು ರಾಜ್ಯದ ನೀರಾವರಿ ವ್ಯವಸ್ಥೆಯನ್ನು ಉತ್ತಮಪಡಿಸುವುದು, ಅವಶ್ಯಕ ವಸ್ತುಗಳನ್ನು ಅಗ್ಗದ ಬೆಲೆಗೆ ವಿತರಿಸುವಂತೆಯೂ, ಆಹಾರ ನಿಗಮದ ಸಂಗ್ರಹಣಾ ನೀತಿಯನ್ನು ವೈಜ್ಞಾನಿಕ ವಿಧಾನದಲ್ಲಿ ಅನುಷ್ಠಾನಗೊಳಿಸುವಂತೆಯೂ ಸಲಹೆ ನೀಡಿರುವುದಲ್ಲದೆ ಮನುಷ್ಯ ಮತ್ತು ಪ್ರಾಣಿಗಳಿಗಿಬ್ಬರಿಗೂ ಆಹಾರದ ಅಗತ್ಯವಿದೆ. ಆದರೆ ಮನುಷ್ಯನಿಗೆ ಆಹಾರದೊಂದಿಗೆ ಅಭಿಪ್ರಾಯ ವ್ಯಕ್ತಪಡಿಸಲು ಭಾಷೆಯು ಅವಶ್ಯಕ. "ನಾವು ಕೂಡ ಮನುಷ್ಯರು ಮತ್ತು ನಮಗೆ ಕನ್ನಡವೆಂಬ ಒಂದು ಭಾಷೆಯೂ ಇದೆ" ಎಂದು ಕನ್ನಡದಲ್ಲಿ ಹಾಗೆಯೇ ಇತರ ಭಾರತೀಯ ಭಾಷೆಗಳಲ್ಲಿ ಮಾತನಾಡಲು ಅವಕಾಶ ಮಾಡಿಕೊಡುವುದರ ಮಹತ್ವವನ್ನು ಅತ್ಯಂತ ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಸೂಚಿಸಿದ್ದಾರೆ.

**ಬುದ್ಧಿಗೆ ಕೆಲಸ ಕೊಡದೆ ಬೌದ್ಧಿಕ ಪಾರ್ಶ್ವವಾಯು ಪೀಡಿತವಾಗಿದೆ :**

ಎರಡನೇ ಬಾರಿಗೆ 1967ರ ಆಗಸ್ಟ್ 7ರಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಆಯುಕ್ತರ ವಾರ್ಷಿಕ ವರದಿಗಳ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಾ "ಮೂರು ಸಾವಿರದ ಐದುನೂರು ವರ್ಷಗಳಿಂದ ಶೇಕಡ ಎಂಭತ್ತಕ್ಕೂ ಹೆಚ್ಚು ಜನರಿಗೆ ಬುದ್ದಿಗೆ ಕೆಲಸ ಕೊಡದೆ ಬೌದ್ಧಿಕ ಪಾರ್ಶ್ವವಾಯು ಪೀಡಿತವಾಗಿದೆ" ಎಂದು ಕುಟುಕುವ ಮೂಲಕ ಭಾರತೀಯ ಸಮಾಜದಲ್ಲಿ ಶೋಷಿತ ವರ್ಗಗಳ. ತಳಸಮುದಾಯಗಳ ವೇದನೆ ಸಂಕಟಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರಲ್ಲದೆ ಅಂದಿನ ಭಾರತ ಸರ್ಕಾರದ ಒಟ್ಟು 51 ಸದಸ್ಯರ ಮಂತ್ರಿಮಂಡಲದಲ್ಲಿ ಕೇವಲ ಇಬ್ಬರು ಮಾತ್ರ ಪರಿಶಿಷ್ಟ ಜಾತಿಯವರಿದ್ದಾರೆ. ಸಮಾನ ಅವಕಾಶದ ತತ್ವದಂತಾದರೂ ಕೊನೆಯ ಪಕ್ಷ ಪರಿಶಿಷ್ಟ ವರ್ಗದ ಹತ್ತು ಜನರಾದರೂ ಮಂತ್ರಿಗಳಾಗಿರಬೇಕಿತ್ತು" ಎಂದು ಹೇಳುವ ಮೂಲಕ ತಮ್ಮ ಸಮಾಜವಾದಿ ಚಿಂತನೆಯ ಪ್ರತಿಪಾದನೆಯ ಅಗತ್ಯವನ್ನು ಎತ್ತಿಹಿಡಿದಿದ್ದಾರೆ.

ಮೂರನೇ ಬಾರಿಗೆ ಪಟೇಲರು ಮಾತನಾಡಿದ್ದು 1967ರ ಡಿಸೆಂಬರ್ 7ರಂದು ಅಧಿಕೃತ ಭಾಷಾ ಕಾಯ್ದೆ–1963ರ ತಿದ್ದುಪಡಿ ವಿಧೇಯಕದ ಮೇಲೆ ನಡೆದ ಚರ್ಚೆಯಲ್ಲಿ. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ನಮ್ಮ ರಾಜ್ಯಾಂಗದಲ್ಲಿ ನಮಗೆ ಸಮಾನ ಅವಕಾಶ, ಸ್ಥಾನಮಾನ ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯ ಕೊಟ್ಟಿದ್ದರೂ ಕೂಡಾ ಲೋಕಸಭೆಯಲ್ಲಿ ಅಂತಹ ವಾಕ್ ಸ್ವಾತಂತ್ರ್ಯ ನಮಗೆ ಇಲ್ಲವಾಗಿದೆ' ಎನ್ನುವ ಮೂಲಕ ತಮ್ಮ ಕನ್ನಡ ಭಾಷಣಕ್ಕೆ ವ್ಯಕ್ತವಾದ ವಿರೋಧಗಳ ಬಗ್ಗೆ ಅಸಮಾಧಾನವನ್ನು ತೋಡಿಕೊಳ್ಳುತ್ತಾರೆ. ಅಲ್ಲದೆ ಆ ತಿದ್ದುಪಡಿ ಕಾಯ್ದೆ ಮೂಲಕ ಇಂಗ್ಲಿಷನ್ನು ದೆಹಲಿಯಲ್ಲಿ ಮಾತ್ರವಲ್ಲದೆ ಭಾರತದ ಎಲ್ಲ ರಾಜ್ಯಗಳಲ್ಲೂ ಅಧಿಕೃತವಾಗಿ ಶಾಶ್ವತಗೊಳಿಸುವ ಹವಣಿಕೆಯಾಗಿದೆ. ಇದು ಸಂವಿಧಾನ ಬಾಹಿರ ಎಂದು ಹಿಂದಿ ಮತ್ತು ಭಾರತೀಯ ಭಾಷೆಗಳ ಜೊತೆಗೆ ಇಂಗ್ಲಿಷನ್ನು ಕೂಡ ಮುಂದುವರೆಸುತ್ತಿರುವುದಕ್ಕೆ ತಮ್ಮವಿರೋಧ ವ್ಯಕ್ತಪಡಿಸಿದ್ದಾರೆ.

ಅವರ ಈ ವಿರೋಧ ಸಮಾಜವಾದಿ ಪಕ್ಷದ ಸಿದ್ಧಾಂತದ "ಭಾರತೀಯ ಭಾಷೆಗಳಿಗೆ ಮಾತ್ರ ನಮ್ಮ ದೇಶದಲ್ಲಿ ಅವಕಾಶ ಇರಬೇಕು, ಇಂಗ್ಲಿಷ್ ಬಳಸಬಾರದು ಎಂಬುದಕ್ಕೆ ಅನುಗುಣವಾಗಿಯೇ ಇತ್ತು. ಮಾನ್ಯ ಪಟೇಲರಿಗೆ ಕನ್ನಡದಲ್ಲಿ ಮಾತನಾಡಲು ಇತರರು ಅಡ್ಡಿಪಡಿಸಿದಾಗ ಅವರ ನೆರವಿಗೆ ಧಾವಿಸಿ ಅವರ ಬೇಡಿಕೆಯನ್ನು ಪರಿಗಣಿಸುವಂತೆ ಒತ್ತಾಯಿಸುತ್ತಿದ್ದವರಲ್ಲಿ ಜಾರ್ಜ್ ಫರ್ನಾಂಡೀಸ್ ಮತ್ತು ಮಧು ಲಿಮಯ ಅವರು ಪ್ರಮುಖರು ಅಷ್ಟೆ ಅಲ್ಲದೆ ಅವರಿಬ್ಬರೂ ಪಟೇಲರ ಭಾಷಣವನ್ನು ಅನುವಾದಿಸುವಲ್ಲಿ ನೆರವಾಗುತ್ತಿದ್ದರು.

ಜೆ.ಹೆಚ್. ಪಟೇಲ್ ಅವರು ಅಂದು ಕನ್ನಡದಲ್ಲಿಯೇ ಮಾತನಾಡಬೇಕೆಂದು ತೆಗೆದುಕೊಂಡ ಕ್ರಾಂತಿಕಾರಕ ನಿರ್ಧಾರದ ಫಲವಾಗಿಯೇ ಇಂದು ಸಂಸತ್ತಿನಲ್ಲಿ ಕನ್ನಡವೂ ಸೇರಿದಂತೆ ಸಂವಿಧಾನಾತ್ಮಕ ಮಾನ್ಯತೆ ಪಡೆದ ಎಲ್ಲ ಭಾಷೆಗಳಲ್ಲಿ ಏಕಕಾಲಿಕ (Simultaneous Interpretation ) ಭಾಷಾಂತರ ವ್ಯವಸ್ಥೆ ಇದ್ದು ಸಂಸತ್ತಿನಲ್ಲಿ ಭಾರತೀಯ ಭಾಷೆಗಳ ಇಂಪನ್ನು ಸವಿಯಲು ಸಾಧ್ಯವಾಗಿದೆ.

ನಮ್ಮ ರಾಜ್ಯದ ಸಂಸದರೂ ಕೂಡ ಪ್ರತಿಯೊಂದು ಅಧಿವೇಶನದಲ್ಲೂ ಕನ್ನಡದಲ್ಲಿ ಮಾತನಾಡುವ ಅವಕಾಶಕ್ಕಾಗಿ ಪ್ರಯತ್ನಿಸುತ್ತ ಸಿಕ್ಕ ಎಲ್ಲ ಅವಕಾಶಗಳಲ್ಲೂ ಕನ್ನಡದ ಕಲರವವನ್ನು ಕೇಳಿಸುತ್ತಾ ಬರುತ್ತಿದ್ದಾರೆ. ಇಂತಹ ಒಂದು ಐತಿಹಾಸಿಕವಾದ ಕನ್ನಡದ ಕೈಂಕರ್ಯವನ್ನು ಸಾಧಿಸಿದ ಅಪರೂಪದ ಸಮಾಜವಾದಿ ನಾಯಕ ಜೆ.ಹೆಚ್. ಪಟೇಲರನ್ನು ಒಮ್ಮೆ ಮನದಾಳದಿಂದ ಸ್ಮರಿಸಿ ನಮಿಸೋಣ. ಅ

*ಚಂದ್ರಶೇಖರ ಎನ್.ಪಿ.*




ದೆಹಲಿ ಕರ್ನಾಟಕ ಸಂಘ
ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ
ವಿದ್ಯಾರ್ಥಿ ವೇತನ ವಿತರಣೆ




ದೆಹಲಿ ಕರ್ನಾಟಕ ಸಂಘ
ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ
ವಿದ್ಯಾರ್ಥಿ ವೇತನ ವಿತರಣೆ
ಭಾಷಾ ಬಾಂಧವ್ಯ

# ಭಾಷಾ ಬಾಂಧವ್ಯ
# ಸ್ಥಳೀಯ


ದೆಹಲಿ ಕರ್ನಾಟಕ ಸಂಘ
ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ
ವಿದ್ಯಾರ್ಥಿ ವೇತನ ವಿತರಣೆ








## ಕಾರ್ಯಕ್ರಮದಲ್ಲಿ
## ಪ್ರತಿಭೆಗಳು











# ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು

ದೆಹಲಿ ಕರ್ನಾಟಕ ಸಂಘದ 2017–18ನೇ ಸಾಲಿನ ವಿವಿಧ ಆಟೋಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳು ಡಿಸೆಂಬರ್ 10 ಮತ್ತು 17, 2017ರಂದು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮೈದಾನದಲ್ಲಿ ನಡೆಯಿತು.

ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್, ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ಅವರು ಶಿಸ್ತುಬದ್ಧವಾಗಿ ನಡೆಸಿಕೊಟ್ಟರು. ಕನ್ನಡ ಶಾಲೆಯ ಶಾರೀರಿಕ ಶಿಕ್ಷಕರಾದ ಶ್ರೀ ಶಿವರಾಮ್ ಅವರು ಸಹಕರಿಸಿದರು.

ಡಿಸೆಂಬರ್ 10ರಂದು ನಡೆದ ಕೇರಂ ಮತ್ತು ಚೆಸ್ ಸ್ಪರ್ಧೆಗಳನ್ನು ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ತ್ಯಾಗೇಶ್ ಮೂರ್ತಿ ಅವರು ನಡೆಸಿಕೊಟ್ಟರು. ಅದೇ ದಿನ ನಡೆದ ಭಕ್ತಿ ಗೀತೆ, ಭಾವಗೀತೆ, ಕನ್ನಡ ರೈಮ್ಸ್, ಫ್ಯಾನ್ಸಿ ಡ್ರೆಸ್, ಸ್ಮರಣಶಕ್ತಿ ಪರೀಕ್ಷೆ, ಡ್ರಾಯಿಂಗ್ ಸ್ಪರ್ಧೆಗಳನ್ನು ಶ್ರೀಮತಿ ಪೂಜಾ ಪಿ. ರಾವ್, ಶ್ರೀಮತಿ ಜಮುನಾ ಸಿ. ಮಠದ, ಶ್ರೀಮತಿ ಸುಮಿತಾ ಮುರಗೋಡ ಅವರು ನಡೆಸಿಕೊಟ್ಟರು. ಶ್ರೀ ಚಂದ್ರಶೇಖರ ಎನ್.ಪಿ. ಅವರು ಸಹಕರಿಸಿದರು.

ಶ್ರೀ ಚೆನ್ನು ಎಸ್.ಮಠದ, ಶ್ರೀ ಅರುಣ್, ಶ್ರೀಮತಿ ರಾಜೇಶ್ವರಿ ಭಟ್, ಡಾ. ಗಾಯತ್ರಿ ಅವರುಗಳು ನಿರ್ಣಯಕರುಗಳಾಗಿದ್ದರು.

ಡಿಸೆಂಬರ್ 31ರಂದು ಎ.ಐ.ಐ.ಎಂ.ಎಸ್. ಝಿಮ್‌ಖಾನದಲ್ಲಿ ನಡೆದ ಶಟಲ್ ಬ್ಯಾಡ್ಮಿಂಟನ್ ಸ್ಪರ್ಧೆಯನ್ನು ಜಂಟಿ ಕಾರ್ಯದರ್ಶಿ ಶ್ರೀ ಟಿ.ಪಿ. ಬೆಳ್ಳಿಯಪ್ಪ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಮತ್ತು ಸದಸ್ಯರಾದ ಶ್ರೀ ಎಂ. ಶಿವಪ್ಪ ಉಪಸ್ಥಿತರಿದ್ದರು. ದಿನೇಶ್ ಪಿ., ಸನ್ಮಾನ್ ಗೌಡ, ಸಂತೋಷ್, ಪ್ರಶಾಂತ್ ನಾಯ್ಕ ಮತ್ತು ಶ್ರೇಯಸ್ ಜೋಗಿ ಅವರು ಸಹಕರಿಸಿದರು.

## ವಿವಿಧ ಸ್ಪರ್ಧೆಗಳ ಫಲಿತಾಂಶಗಳು

**ಕೇರಂ ಸಿಂಗಲ್ಸ್ :** (ಪುರುಷರು) 1. ತ್ಯಾಗೇಶ್ ಮೂರ್ತಿ 2. ಸಂಜಯ್ ಟಿ.ಸಿ.

**ಕೇರಂ ಸಿಂಗಲ್ಸ್ :**(ಮಹಿಳೆಯರು) 1. ರೂಪಾ ಕುಮಾರ್ 2. ವಿಜಯಶ್ರೀ ಆನಂದರಾಮ್

**ಕೇರಂ ಡಬಲ್ಸ್ :** (ಮಿಕ್ಸ್) 1. ಪುರುಷೋತ್ತಮ ಮತ್ತು ತಿಲಕ್ 2. ದಿನೇಶ್ ಪಿ ಮತ್ತು ಲಕ್ಷ್ಮಣ್ ಕಟ್ಟೀಮನಿ

**ಚೆಸ್ :** 1. ಪಿ. ದಿನೇಶ್ 2. ಎಚ್. ನಡಾಫ್

**ಭಕ್ತಿಗೀತೆ:** (8–13ವರ್ಷ) 1. ಅಭಿಷೇಕ್ 2. ಋತ್ವಿನ್ 3. ಸಂಚಿತಾ

**ಭಕ್ತಿಗೀತೆ:** (14–18ವರ್ಷ) 1. ವೇದ ಎಸ್. ಜಿ. 2. ವರ್ಷಾ ಕಿಣಿ 3. ಜಾಹ್ನವಿ

**ಭಾವಗೀತೆ :** (8–13ವರ್ಷ) 1. ಸಂಚಿತಾ 2. ಜೆ. ರಿಷಿ 3. ಅಭಿಷೇಕ್

**ಭಾವಗೀತೆ :** (14–18ವರ್ಷ) 1. ವೇದ ಎಸ್.ಜಿ 2. ಜಾಹ್ನವಿ 3. ಶ್ರೇಷ್ಠಾ ತೇಲಿ



**ಜಾನಪದ ಗೀತೆ :** (14–18ವರ್ಷ) 1. ವೇದ ಎಸ್.ಜಿ 2. ಜಾಹ್ನವಿ 3. ಶ್ರೇಷ್ಠಾ ತೇಲಿ

**ಭಕ್ತಿಗೀತೆ :** (19ವರ್ಷಕ್ಕಿಂತ ಮೇಲ್ಪಟ್ಟವರು) 1. ಮಮತಾ ಶಿವರಾಮ್ 2. ಕೆ.ಎಸ್. ಶ್ರೀನಿವಾಸ 3. ಮೇಘಾ ಕಿಣಿ

**ಭಾವಗೀತೆ :** (19ವರ್ಷಕ್ಕಿಂತ ಮೇಲ್ಪಟ್ಟವರು) 1. ಶ್ರೇಯಸ್ ಜೋಗಿ 2. ಕೆ.ಎಸ್. ಶ್ರೀನಿವಾಸ 3. ಶಿವಕುಮಾರ್ ಜಿ.ಎಂ.

**ಜಾನಪದ ಗೀತೆ :** (19ವರ್ಷಕ್ಕಿಂತ ಮೇಲ್ಪಟ್ಟವರು) 1. ಮೇಘಾ ಕಿಣಿ 2. ಶಿವಲೀಲಾ ಮತ್ತು ಶಿವಕುಮಾರ್ 3. ಕೆ.ಎಸ್. ಶ್ರೀನಿವಾಸ

**ಫ್ಯಾನ್ಸಿ ಡ್ರೆಸ್ :** (6ವರ್ಷಕ್ಕಿಂತ ಕೆಳಗಿನವರು) 1. ಸೃಷ್ಟಿ ಪೂಜಾರಿ 2. ರೋಶ್‌ನಿ ಗೌಡ 3. ಶಾರದಾ ಮತ್ತು ಶ್ರೇಯಾ

**ಕನ್ನಡ ಪದ್ಯ :** (6ವರ್ಷಕ್ಕಿಂತ ಕೆಳಗಿನವರು) 1. ಸೃಷ್ಟಿ ಪೂಜಾರಿ 2. ರೋಶ್‌ನಿ ಗೌಡ 3. ಪರಿಣಿತಿ ಮಣೆ

**ಕನ್ನಡ ಪದ್ಯ :** (6–10 ವರ್ಷ) 1. ಹಿತಶ್ರೀ 2. ಪ್ರಾಪ್ತಿ 3. ಆದಿತ್ಯ ಮತ್ತು ಮಧುಸೂದನ

**ಪಿಕ್ ಅಂಡ್ ಸ್ಪೀಕ್ :** (10–18 ವರ್ಷ) 1. ಕ್ಷಿತಿಜ್ 2. ಶ್ರೇಷ್ಠಾ 3. ರಚನಾ

**ಪಿಕ್ ಅಂಡ್ ಸ್ಪೀಕ್ :** (19 ವರ್ಷಕ್ಕಿಂತ ಮೇಲ್ಪಟ್ಟವರು) 1. ಹೇಮಶ್ರೀ ಚಂದ್ರಶೇಖರ್ 2. ಶೋಭಾ ನಾಗರಾಜ 3. ರೇಖಾ

**ಸ್ಮರಣಶಕ್ತಿ ಪರೀಕ್ಷೆ :** (11–14 ವರ್ಷ) 1. ಶ್ರೇಷ್ಠಾ ತೇಲಿ 2. ಶ್ರೀಧನ್ 3. ಸಂಜಯ್ ಜೆ.

**ಸ್ಮರಣಶಕ್ತಿ ಪರೀಕ್ಷೆ :** (7–10ವರ್ಷ) 1. ಸಾತ್ವಿಕ್ 2. ಸೂಕ್ಷ್ಮ ಮತ್ತು ಸೃಜನ್ ರಂಗನಾಥ್ 3. ಮದುಸೂಧನ

**ಚಿತ್ರಬರೆಯುವ ಸ್ಪರ್ಧೆ :** (10 ವರ್ಷಕ್ಕಿಂತ ಕೆಳಗಿನವರು) 1. ಸೃಜನ್ ಪಾಟಿಲ್ 2. ಕೀರ್ತನ 3. ರಿಯಾಚಂದ್ರ

**ಚಿತ್ರಬರೆಯುವ ಸ್ಪರ್ಧೆ :** (10–18 ವರ್ಷ) 1. ಭಾರ್ಗವ 2. ಸೌಮ್ಯಶ್ರೀ 3. ಪೃಥ್ವಿರಾಜ್ ಸಮಾಧಾನಕರ ಬಹುಮಾನ : ಪ್ರಮೋದ್ ಕುಮಾರ್ ಮತ್ತು ಕುಶಾಲ್ ಎಂ.

**ಕ್ಲಾಸಿಕಲ್ ಡಾನ್ಸ್ :** (10–18ವರ್ಷ) 1. ರಮ್ಯ ಎಂ.ಎಸ್. 2. ರಚನಾ 3. ಪ್ರಿಯಾಂಕ

**ಜಾನಪದ ನೃತ್ಯ :** (10–18 ವರ್ಷ) 1. ಹಿತಶ್ರೀ 2. ಸೌಮ್ಯಶ್ರೀ 3. ಶ್ರುತಿ ಮತ್ತು ವೃದ್ಧಿ ಕಟ್ಟೀಮನಿ



**ಥ್ರೋಬಾಲ್ :** (ಮಹಿಳೆಯರು) 1. ದೆಹಲಿ ತುಳು ಸಿರಿ 2. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ.

**ಶಾಟ್‌ಪುಟ್ :** (35ವರ್ಷ ಕೆಳಗಿನ, ಮಹಿಳೆಯರು) 1. ತೃಶಾಲ್ ಸನ್ಮಾನ್ 2. ವಂದನಾ ಶೆಟ್ಟಿ 3. ಶಾಂತಾ ಶ್ರೀನಿವಾಸ

**ಶಾಟ್‌ಪುಟ್ :** (36ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಪುಷ್ಪಲತಾ ಬಿ.ಎನ್. 2. ಜಯಲಕ್ಷ್ಮೀ ರಾಜಕುಮಾರ್ 3. ಭಾಗ್ಯಶ್ರೀ ಪ್ರಭಾಕರನ್

**ಶಾಟ್‌ಪುಟ್ :** (35ವರ್ಷಕ್ಕಿಂತ ಕೆಳಗಿನ ಪುರುಷರು) 1. ಪ್ರದೀಪ್ ಕುಮಾರ್ 2. ಸಂಜಯ್ ಟಿ.ಸಿ. 3. ಮನಿಶ್ ಪೂಜಾರಿ

**ಶಾಟ್‌ಪುಟ್ :** (36–49ವರ್ಷ ಪುರುಷರು) 1. ವೈ.ಎಂ. ಹೆಗ್ಡೆ 2. ಅನಿಲ್ ಗದ್ದೆ 3. ಪುರುಷೋತ್ತಮ

**ಸೂಜಿದಾರ :** (ಕಾಮನ್) 1. ಸನ್ಮಾನ್ ಎನ್.ಎಂ. 2. ರಂಜಿತ್ 3. ಗಜಾನನ ಶರ್ಮ

**ನಿಂಬೆ ಮತ್ತು ಚಮಚ :** (21–36ವರ್ಷ ಮಹಿಳೆಯರು) : 1. ರೂಪಾ ಕುಮಾರ್ 2. ಶೋಭಾ ನಾಗರಾಜ 3. ಮೇಘಾ ಗಜಾನನ

**ನಿಂಬೆ ಮತ್ತು ಚಮಚ :** (37 ವರ್ಷ ಮೇಲ್ಪಟ್ಟ ಮಹಿಳೆಯರು) : 1. ಮಂಜುಳಾ ಜಕ್ಕಪ್ಪ ಮತ್ತು ಸುಜಾತ ಮೂರ್ತಿ 2. ಹೇಮಲತಾ ಬಿ.ಕೆ 3. ಶಾಂತ

**ಲಗೋರಿ :** (ಮಿಕ್ಸ್–2ಪುರುಷರು+2ಮಹಿಳೆಯರು) : 1. ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ 2. ನಾಡಪ್ರಭು ಕೆಂಪೇಗೌಡ ಫೌಂಡೇಶನ್ ತಂಡ

**ರಿಲೆ :** (11–15ವರ್ಷ 4X100 ಮೀಟರ್) : 1. ಹರ್ಷಿತ್, ಲಕ್ಷಯ್ ನಾಗರಾಜ, ಅಭಿಷೇಕ್, ರೋಹನ್ 2. ಸೂರಜ್, ಪೃಥ್ವಿರಾಜ್, ಪ್ರಮೋದ್, ಸೂರ್ಯ 3. ಸುದೀಪ್, ಸುಮಿತ್, ಕುಶಾಲ್, ಸುಮಂತ್

**ರಿಲೆ :** (4X100 ಮೀಟರ್ ಪುರುಷರು) : 1. ಲಿಖಿತ್, ಸಾಯಿಕುಮಾರ್, ಆಕಾಶ್, ಧ್ರುವ್ ಕಾಮ್‌ಶೆಟ್ಟಿ 2. ಸಂತೋಷ್, ಸಂಜಯ್ ಟಿ.ಸಿ., ಗಜಾನನ ಶರ್ಮಾ, ತಿಲಕೇಶ್ 3. ಶ್ರೀಧನ್, ಕೃಷ್ಣ, ಸ್ವರೂಪ್, ಸೂರ್ಯ

**ರಿಲೆ :** (4X100 ಮೀಟರ್) 1. ಪ್ರೇರಣಾ ರಾವ್, ಅನನ್ಯ ರಾಧಾಕೃಷ್ಣ, ಯಶಸ್ವಿನಿ ಗೌಡ, ರಚನಾ ಜೆ 2. ಶ್ರೀವಿದ್ಯಾ, ಲಿಖಿತ, ಚಂದನಾ, ಕಾಶ್ವಿ 3. ಕನಕ, ಶುಭ, ಮೇಘಾ, ಪ್ರಿಯ

**50 ಮೀ ಓಟ :** (3–5ವರ್ಷ) 1. ಸಾಯಿ ಅಮರ್ತ್ಯ ಶೆಟ್ಟಿ 2. ಮದುಸೂಧನ್ ಚಂದ್ರಕಾಂತ 3. ಸಾಯಿಅಂಶ್ ಶೆಟ್ಟಿ

**100 ಮೀ ಓಟ :** (11–16ವರ್ಷ) 1. ಧ್ರುವ್‌ಕಾಮ್ ಶೆಟ್ಟಿ, ಸೂರಜ್ ತಿಮ್ಮಪ್ಪ 2. ಸಾಯಿಕುಮಾರ್, ಅಭಿಷೇಕ್ ಶಿವಪ್ಪ 3. ಶ್ರೀಧನ್ ಮೂರ್ತಿ, ಲಕ್ಷಯ್ ನಾಗರಾಜ

**100 ಮೀ ಓಟ :** (17ವರ್ಷ ಮೇಲ್ಪಟ್ಟವರು) 1. ಧ್ರುವ್ ಕಾಮ್‌ಶೆಟ್ಟಿ 2. ಸನ್ಮಾನ್ ಎನ್.ಎಂ. ಮತ್ತು ಸಾಯಿ ಕುಮಾರ್ 3. ಆಕಾಶ್‌ರಾಜ್

**50 ಮೀ ಓಟ :** (6–10ವರ್ಷ) 1. ಕೀರ್ತನಾ ಕಟ್ಟೀಮನಿ 2. ರಿಯಾಚಂದ್ರ 3. ಸಂಚಿತಾ ರಾಜ್‌ಕುಮಾರ್

**100 ಮೀ. ಓಟ :** (11–15 ವರ್ಷ) 1. ಪ್ರೇರಣಾ ರಾವ್ 2. ಅನನ್ಯಾ ರಾಧಾಕೃಷ್ಣ 3. ಚಂದನಾ ಗೌಡ

**200 ಮೀ. ಓಟ :** (11–16 ವರ್ಷ) 1. ಪ್ರೇರಣಾ ರಾವ್ ಮತ್ತು ಅನನ್ಯಾ ರಾಧಾಕೃಷ್ಣ 2. ಶ್ರೇಯಾ ಮಂಜುನಾಥ 3. ಕವನ

**200 ಮೀ. ಓಟ :** (ಪುರುಷರು) 1. ಧ್ರುವ್‌ಕಾಮ್ ಶೆಟ್ಟಿ 2. ಸನ್ಮಾನ್ ಗೌಡ 3. ಮಹಾದೇವ್ ಸ್ವಾಮಿ ಸಿ

**100 ಮೀ. ಓಟ :** (21–35 ವರ್ಷ ಮಹಿಳೆಯರು) 1. ಶ್ರೀದೇವಿ ಪೂಜಾರಿ 2. ಕನಕ ಸಂತೋಷ್ 3. ವಂದನಾ ಶೆಟ್ಟಿ

**100 ಮೀ. ಓಟ :** (36ವರ್ಷ ಮೇಲ್ಪಟ್ಟ ಮಹಿಳೆಯರು) 1. ಪುಷ್ಪಲತಾ ಬಿ.ಎನ್. 2. ಜಯಲಕ್ಷ್ಮಿ ರಾಜಕುಮಾರ್ 3. ವಿಮಲಾ ನಾಯಕ್ ಮತ್ತು ಪ್ರಿಯಾ ದಿನೇಶ್

**ವೇಗ ನಡಿಗೆ :** (41–49ವರ್ಷ, ಮಹಿಳೆಯರು) 1. ಪುಷ್ಪಲತಾ ಬಿ.ಎನ್. 2. ಸೌಮ್ಯ ಮಾಧವ ಎನ್.ಎ. 3. ಜಯಲಕ್ಷ್ಮೀ ರಾಜಕುಮಾರ್ ಮತ್ತು ಜಯಾಶ್ರೀನಿವಾಸ

**100 ಮೀ ಮೂರು ಕಾಲಿನ ಓಟ :** (8–12 ವರ್ಷ) 1. ಮಧುಸೂದನ ಮತ್ತು ಸಾತ್ವಿಕ್ ತೇಲಿ 2. ಆದಿತ್ಯ ಕುಮಾರ್ ಮತ್ತು ರಿಷಿ ಜೆ 3. ಸಾಯಿ ಅಮರ್ತ್ಯ ಶೆಟ್ಟಿ ಮತ್ತು ರೋಹಿತ್ ಗೌಡ

**100ಮೀ ಮೂರು ಕಾಲಿನ ಓಟ :** (8–12 ವರ್ಷ) 1. ಪೃಥ್ವಿರಾಜ್ ಕಟ್ಟೀಮನಿ ಮತ್ತು ಸೂರಜ್ ಟಿ 2. ಲಕ್ಷಯ್ ನಾಗರಾಜ ಮತ್ತು ಅಭಿಷೇಕ್ ಎಸ್. 3. ಶಾಶ್ವತ್ ಮತ್ತು ಹರ್ಷಿತ್



**100ಮೀ ಮೂರು ಕಾಲಿನ ಓಟ :** (ಮಹಿಳೆಯರು) 1. ಆಶಾ ಮಹಾದೇವ ಮತ್ತು ಜಯಲಕ್ಷ್ಮೀ ರಾಜಕುಮಾರ್ 2. ರಾಜಶ್ರೀ ಮತ್ತು ಸೌಮ್ಯ 3. ಬೃಂದಾ ಸಂತೋಷ್ ಮತ್ತು ಶುಭಾ ಸುರೇಶ್

**100ಮೀ ಮೂರು ಕಾಲಿನ ಓಟ :** (13–17 ವರ್ಷ) 1. ಶ್ರೀಧನ್ ಮತ್ತು ಲಿಖಿತ್ 2. ಪ್ರಮೋದ್ ಕುಮಾರ್ ಎಂ. ಮತ್ತು ಸೂರಜ್ ತಿಮ್ಮಪ್ಪ

**100ಮೀ ಮೂರು ಕಾಲಿನ ಓಟ :** (13–17 ವರ್ಷ) 1. ಅನನ್ಯಾ ರಾಧಾಕೃಷ್ಣ ಮತ್ತು ಪ್ರೇರಣಾ ರಾವ್ 2. ಚಂದನಾ ಗೌಡ ಮತ್ತು ಶ್ರೇಯಾ

**100ಮೀ ಮೂರು ಕಾಲಿನ ಓಟ :** (ಪುರುಷರು) 1. ಸಾಯಿ ಕುಮಾರ್ ಮತ್ತು ಧ್ರುವ್ ಕಾಮ್‌ಶೆಟ್ಟಿ 2. ಆಕಾಶ್‌ರಾಜ್ ಮತ್ತು ಲಿಖಿತ್ ಕುಮಾರ್ 3. ಕುಮಾರ್ ಸಿ. ಮತ್ತು ಸಂತೋಷ್ ಕೆ.ಕೆ.

**ಸಂಗೀತ ಕುರ್ಚಿ :** (ಮಕ್ಕಳು) 1. ಅನನ್ಯಾ ರಾಧಾಕೃಷ್ಣ 2. ಚಂದನಾ ಗೌಡ 3. ಲಕ್ಷಯ್ ನಾಗರಾಜ

**ಸಂಗೀತ ಕುರ್ಚಿ :** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಪ್ರಿಯದರ್ಶಿನಿ ಮರಿಬಸಪ್ಪ 2. ವನಿತಾ ಸುಧೀರ್ 3. ಜಯಲಕ್ಷ್ಮೀ ರಾಜಕುಮಾರ್

**ಬಕೆಟ್‌ಗೆ ಚೆಂಡು :** (6–11ವರ್ಷ) 1. ಅವನಿ ನೆಲ್ಲಿ 2. ಶ್ರುತಿ ಪ್ರಭಾಕರ್ 3. ಶೂಷ್ಮ ನಿಂಬಾಳ್

**ಬಕೆಟ್‌ಗೆ ಚೆಂಡು :** (12–20ವರ್ಷ) 1. ವೇದಾ ಎಸ್.ಜಿ. 2. ಶ್ರೀವಿದ್ಯಾ 3. ಸೌಮ್ಯಶ್ರೀ ಮತ್ತು ಚಂದನಾ ಗೌಡ

**ಬಕೆಟ್‌ಗೆ ಚೆಂಡು :** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1. ಶಿವಲೀಲಾ 2. ಮಮತಾ ಶಿವರಾಮ್ 3. ನಿರ್ಮಲಾ ನಾಗೇಶ

**ಬಕೆಟ್‌ಗೆ ಚೆಂಡು :** (11–15 ವರ್ಷ) 1. ಲಿಖಿತ್ ಕುಮಾರ್ 2. ಅಭಿಷೇಕ್ ಶಿವಪ್ಪ 3. ಭಾರ್ಗವ ಎಸ್.ಜಿ.

**ಬಕೆಟ್‌ಗೆ ಚೆಂಡು :** (5–10 ವರ್ಷ) 1. ಖುಷ್ವಿನ್ ದಯಾನಂದ 2. ಕೀರ್ತನಾ ಪ್ರಶಾಂತ್ 3. ಕುಶಾಲ್ ಮಂಜುನಾಥ್ ಬಿ.ಎಲ್.

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) 1. ರಾಘವೇಂದ್ರ ಜಾವಿಯಾ 2. ಪಿ. ದಿನೇಶ್ 3. ರವೀಂದ್ರ

**ಶಟಲ್ ಬ್ಯಾಡ್ಮಿಂಟನ್ ಸಿಂಗಲ್ಸ್ :** (15ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) 1.ಪುಷ್ಪಲತಾ ಬಿ.ಎನ್. 2. ಪ್ರೇರಣಾ ರಾವ್ 3. ಬೃಂದಾ ಸಂತೋಷ್



# ಪ್ರತಿಯೊಂದು ಮ್ಯಾರಾಥಾನ್ ಕೂಡಾ ವಿಶೇಷ ಚಾಲೇಂಜ್

ಕರ್ನಾಟಕದ ಹೊರಗಿದ್ದುಕೊಂಡೂ ತಾಯ್ನಾಡಿಗಾಗಿ ಅಲ್ಲಿನ ನೆಲ, ನುಡಿ, ನೀರುಗಳಿಗಾಗಿ ಸದ್ದರಿಯದಂತೆ ಸೇವೆ ಸಲ್ಲಿಸುತ್ತಿರುವ ಗಣ್ಯ ಮಹನೀಯರನ್ನು ಗುರುತಿಸಿ "ವಿಶೇಷ ಸನ್ಮಾನ"ದ ಗೌರವಾರ್ಪಣೆ ಮಾಡಿದ್ದು ಈ ಬಾರಿಯ 62ನೇ ಕರ್ನಾಟಕ ರಾಜ್ಯೋತ್ಸವ ಹೊರನಾಡ ಕನ್ನಡಿಗರಿಗೆ ಕೊಟ್ಟ ದೊಡ್ಡ ಕೊಡುಗೆ. ದೆಹಲಿ ಮತ್ತು ಎನ್.ಸಿ.ಆರ್ ನಲ್ಲಿ ಕೆಲವು ದಶಕಗಳಿಂದ ನೆಲೆಸಿ ಎಲೆ ಮರೆಯ ಕಾಯಿಗಳಂತೆ ತಮ್ಮ ವೃತ್ತಿ ಬದುಕಿನ ಜೊತೆ ಜೊತೆಗೆ ಕನ್ನಡ, ಕರ್ನಾಟಕಕ್ಕೂ ನಿರಂತರವಾಗಿ ಸೇವೆ ಸಲ್ಲಿಸಿಕೊಂಡು ಬರುತ್ತಿರುವ "ವಿಶೇಷ ಸನ್ಮಾನ"ದ ಗೌರವಾರ್ಪಣೆಗೆ ಪಾತ್ರರಾದ ಹಿರಿಯ ನ್ಯಾಯವಾದಿಗಳಾದ **ಡಾ. ಶರತ್ ಎಸ್. ಜವಳಿ**, ಅಂತರರಾಷ್ಟ್ರೀಯ ಖ್ಯಾತಿಯ ಆಯುರ್ವೇದ ತಜ್ಞರಾದ **ಡಾ. ಭೀಮ ಭಟ್** ಮತ್ತು ಸಾಹಿತಿ **ಪ್ರೊ. ಎಚ್.ಎಸ್. ಶಿವಪ್ರಕಾಶ್** ಮತ್ತು ಮ್ಯಾರಾಥಾನ್ ಖ್ಯಾತಿಯ **ಮಾಲಾ ಹೊನ್ನತ್ತಿ** ಅವರಿಗೆ ಅಭಿನಂದನೆಗಳು. ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘದ ಮುಖವಾಣಿ "ಅಭಿಮತ"ಕ್ಕಾಗಿ ವಿಶೇಷ ಸನ್ಮಾನಿತರಲ್ಲೊಬ್ಬರಾದ **ಮಾಲಾ ಹೊನ್ನತ್ತಿ** ಅವರನ್ನು **ಎನ್.ಪಿ. ಚಂದ್ರಶೇಖರ್** ಅವರು ಸಂದರ್ಶನ ಮಾಡಿದರು. ಸಂದರ್ಶನದ ಆಯ್ದ ಭಾಗಗಳು ಅಭಿಮತದ ಓದುಗರಿಗೆ...

ದೆಹಲಿ ಕರ್ನಾಟಕ ಸಂಘದ ಮಾಜಿ ಜಂಟಿ ಕಾರ್ಯದರ್ಶಿ ಮ್ಯಾರಾಥಾನ್ ಸಾಧಕಿ ಮಾಲಾ ಹೊನ್ನತ್ತಿ ಅವರು ಮೂಲತಃ ಕರ್ನಾಟಕದ ಹಾವೇರಿ ಜಿಲ್ಲೆಯವರು. ಅವರು ಶ್ರೀ ರಾಮರಾವ್ ಹೊನ್ನತ್ತಿ ಮತ್ತು ಶ್ರೀಮತಿ ಸೀತಾಬಾಯಿ ಹೊನ್ನತ್ತಿ ಅವರ ನಾಲ್ಕನೆ ಮಗಳು. ಇವರ ತಂದೆಯವರು ಕರ್ನಾಟಕ ರಾಜ್ಯ ಸರ್ಕಾರದ ಸೇವೆಯಲ್ಲಿ (Chief Engineer PWD) ದ್ದುದರಿಂದ ಇವರ ವಿದ್ಯಾಭ್ಯಾಸ ಕರ್ನಾಟಕ ಬೇರೆ ಬೇರೆ ನಗರಗಳಲ್ಲಿ (ಹಾವೇರಿ, ರಾಣಿಬೆನ್ನೂರು, ಹರಿಹರ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ, ರಾಯಚೂರು, ಹುಬ್ಬಳ್ಳಿ, ಧಾರವಾಡ) ನಡೆಯಿತು. ದೊಡ್ಡ ಕುಟುಂಬದಲ್ಲಿ ಏಳು ಜನ ಅಕ್ಕ-ತಂಗಿಯರು ಹಾಗೂ ಇಬ್ಬರು ಅಣ್ಣಂದಿರು. ನಮ್ಮ ಕುಟುಂಬವು ಆಧ್ಯಾತ್ಮಿಕ ಹಾಗೂ ಸಾಂಪ್ರದಾಯಿಕ ವಾತಾವರಣದಲ್ಲಿ ಬೆಳೆದ ಇವರ ಕುಟುಂಬದ ಸದಸ್ಯರೆಲ್ಲರೂ ಶೈಕ್ಷಣಿಕವಾಗಿ ಒಳ್ಳೆಯ ಸಾಧನೆ ಮಾಡಿ ವಿವಿಧ ವೃತ್ತಿಗಳಲ್ಲಿದ್ದಾರೆ. ವಿಶೇಷವೆಂದರೆ ಬಾಲ್ಯದಿಂದಲೂ ಆಟೋಟದ ಯಾವುದೇ ಗಂಧ ಗಾಳಿ ಇರದ ಆದರೆ ವಿದ್ಯಾಭ್ಯಾಸದಲ್ಲಿ ಸದಾ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದುತ್ತಾ ಹಾಗೂ ಯುನಿವರ್ಸಿಟಿಯಲ್ಲಿ ರ‍್ಯಾಂಕ್ ಪಡೆದ ಮಾಲಾ ಅವರು ಐ.ಎ.ಎಸ್., ಐ.ಪಿ.ಎಸ್. ಅಥವಾ ವೈದ್ಯಕೀಯ ವಿದ್ಯಾಭ್ಯಾಸ ಮಾಡುವ ಮಹತ್ವಾಕಾಂಕ್ಷೆ ಹೊಂದಿದ್ದರಾದರೂ ಕೂಡ ದೊಡ್ಡ ಸಂಸಾರದ ಹೊಣೆ ಸಂಪ್ರಾದಾಯಿಕ ವಾತಾವರಣ ಮುಂತಾದ ಕಾರಣಗಳಿಂದ ಅವರ ಯಾವುದೇ ಆಕಾಂಕ್ಷೆಗಳಿಗೂ ಅವಕಾಶ ಸಿಗಲಿಲ್ಲ. ಆದರೂ ಎದೆಗುಂದದೆ ಬಿ.ಎಸ್ಸಿ. ಹಾಗೂ ಎಲ್.ಎಲ್.ಬಿ. ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವ ಇವರಿಗೆ ಆರ್ಥಿಕವಾಗಿ ಸ್ವತಂತ್ರಳಾಗಿರಬೇಕೆನ್ನುವ ಹಂಬಲ ಮಾತ್ರ ತೀವ್ರವಾಗಿತ್ತು. ಏಕೆಂದರೆ ಆರ್ಥಿಕ ಸ್ವತಂತ್ರ ಇತರೆ ವಿಚಾರಗಳಲ್ಲಿ ನಮ್ಮನ್ನು ಸ್ವಾವಲಂಬಿಗಳಾಗಲು ನೆರವು ನೀಡುತ್ತದೆ ಎಂಬ ನಂಬಿಕೆ ಇವರದು. ಇಂತಹ ಸ್ವಾವಲಂಬಿ ಮನೋಭಾವವುಳ್ಳ ಮ್ಯಾರಾಥಾನ್ ಸಾಧಕಿ ಮಾಲಾ ಹೊನ್ನತ್ತಿ ಅವರನ್ನು ಅಭಿಮತ ಸಂದರ್ಶನ ಮಾಡಿದ್ದು ಈ ತಿಂಗಳ ವಿಶೇಷ.

**ಅಭಿಮತ :** ನೀವು ದೆಹಲಿಗೆ ಬಂದದ್ದು ಯಾವಾಗ? ಮೂಲತಃ ಇಲ್ಲಿಗೆ ಬರಲು ಕಾರಣ ಮತ್ತು ನಿಮ್ಮ ವೃತ್ತಿ ಬದುಕಿನ ಪರಿಚಯ ಮಾಡಿಕೊಡ್ತೀರಾ ಮೇಡಂ?

**ಮಾಲಾ ಹೊನ್ನತ್ತಿ :** ಮನೆಯಲ್ಲಿ ಸಾಕಷ್ಟು ವಿರೋಧವಿದ್ದರೂ ಕೂಡಾ, 1977ರಲ್ಲಿ ಹುಬ್ಬಳ್ಳಿಯ ದುರ್ಗದ ಬೈಲ್‌ನಲ್ಲಿರುವ ಸಿಂಡಿಕೇಟ್ ಬ್ಯಾಂಕಿನ ಶಾಖೆಯಲ್ಲಿ ಬ್ಯಾಂಕ್ ಉದ್ಯೋಗಿಯಾಗಿ ನನ್ನ ವೃತ್ತಿ ಜೀವನ ಪ್ರಾರಂಭ ಮಾಡಿದೆ. ನಂತರ ಪ್ರೊಬೆಷನರಿ ಆಫೀಸರ್ ಆಗಿ ಆಯ್ಕೆ ಆದ ಮೇಲೆ ಮುಂಬೈ, ಬೆಂಗಳೂರು ನಗರಗಳಲ್ಲಿ ತರಬೇತಿ ಪಡೆದ ನಂತರ ದಾವಣಗೆರೆಗೆ ವರ್ಗಾವಣೆ ಆಯಿತು. ಆನಂತರ ಬೆಳಗಾವಿ, ಗೋವಾ ನಗರಗಳಲ್ಲಿ ಸೇವೆ ಸಲ್ಲಿಸಿ ಅನಂತರ 1991ರಲ್ಲಿ ದೆಹಲಿ ಪೂಸಾ ಕ್ಯಾಂಪಸ್ ಬ್ರಾಂಚಿಗೆ ವರ್ಗಾವಣೆ ಆಗಿ ದೆಹಲಿಗೆ ಬಂದೆ.

**ಅಭಿಮತ :** ಬ್ಯಾಂಕ್ ಉದ್ಯೋಗಿಯಾಗಿದ್ದ ನಿಮಗೆ ಈ ಕ್ರೀಡೆ, ಆಟೋಟಗಳ ಬಗ್ಗೆ ಆಸಕ್ತಿ ಬೆಳೆಸಿಕೊಳ್ಳಲು ಹೇಗೆ ಸಾಧ್ಯವಾಯಿತು?

**ಮಾಲಾ ಹೊನ್ನತ್ತಿ :** ನನ್ನ ವೃತ್ತಿಯ ನಡುವೆ ಸಿಕ್ಕ ಬಿಡುವಿನ ಸಮಯದಲ್ಲಿ ನಾನು ಹಲವಾರು ಕ್ರೀಡೆ ಮತ್ತು ಇತರೆ ಆಟೋಟ ಕಾರ್ಯಕ್ರಮಗಳಲ್ಲಿ ಅಂದರೆ ಕರಾಟೆ, ಬ್ಯಾಡ್ಮಿಂಟನ್, ಟ್ರೆಕ್ಕಿಂಗ್, ಸ್ಕೀಯಿಂಗ್, ಪರ್ವತಾರೋಹಣ (ಮೌಂಟನಿಯರಿಂಗ್) ತೊಡಗಿಸಿಕೊಂಡು ಸಾಕಷ್ಟು ಪರಿಣಿತಿ ಪಡೆದೆ. ನನ್ನ ಈ ಎಲ್ಲಾ ಹವ್ಯಾಸಗಳಿಗೆ ಅನುಕೂಲವಾಗುವಂತೆ ಹಾಗೂ ಉತ್ತರ ಭಾರತದಲ್ಲಿ ಮೂರು ವರ್ಷದ ಸೇವೆ ಸಲ್ಲಿಸಲು ಅವಕಾಶ ಪಡೆದು ದೆಹಲಿಗೆ ಸ್ವ-ಇಚ್ಛೆಯಿಂದ ವರ್ಗಾವಣೆಯನ್ನು ಪಡೆದು ಬಂದಿದ್ದೆ. ದೆಹಲಿಗೆ ಬಂದ ನಂತರ ನನ್ನ ಪರ್ವತಾರೋಹಣ ಹವ್ಯಾಸಕ್ಕೆ ಸಾಕಷ್ಟು ಅವಕಾಶಗಳು ದೊರೆತವು. ಎವರೆಸ್ಟ್ ಶಿಖರವನ್ನೇರಿದ ಭಾರತದ ಪ್ರಥಮ ಮಹಿಳೆ ಬಚ್ಚೇಂದ್ರಿ ಪಾಲರ ಜೊತೆಗೆ ಹಲವಾರು ಪರ್ವತಾರೋಹಣ ಯಾತ್ರೆ (expedition) ಹಾಗೂ ತರಬೇತಿ ಶಿಬಿರಗಳಲ್ಲಿ ಸೇವೆ ಸಲ್ಲಿಸುವ ಅವಕಾಶ ಒದಗಿತು. ಇದಲ್ಲದೆ ಹಿಮಾಲಯದಲ್ಲಿ ಪರ್ವತಾರೋಹಣ ಮಾಡಲು ಬರುವ ವಿದೇಶಿ ತಂಡಗಳ ಜೊತೆಗೆ ಸಂಪರ್ಕಾಧಿಕಾರಿ (Liasoning officer) ಆಗಿ ಮಹತ್ತರವಾದ ಹೊಣೆಗಾರಿಕೆ ನಿಭಾಯಿಸುವ ಅವಕಾಶ ಕೂಡ ಒದಗಿಬಂತು. ಈವರೆಗೆ ಸುಮಾರು ಆರು ತರಬೇತಿ ಶಿಬಿರ ಹದಿನೈದು ಪರ್ವತಾರೋಹಣ ಯಾತ್ರೆಗಳು ಹಾಗೂ ಹಲವಾರು ಚಾರಣ (ಟ್ರೆಕ್ಕಿಂಗ್)ಗಳಲ್ಲಿ ಸೇವೆ ಸಲ್ಲಿಸುವ ಅವಕಾಶಗಳು ಒದಗಿ ಬಂದವು ಅದರಿಂದ ಅಪಾರ ಅನುಭವ ಪಡೆಯುವುದಕ್ಕೆ ಸಾಧ್ಯವಾಯಿತು. ಈ ಎಲ್ಲಾ ಅನುಭವಗಳ ಹಿನ್ನೆಲೆಯಲ್ಲಿ ಹಾಗೂ ಜನಸಾಮಾನ್ಯರಿಗೆ ಈ ಸಾಹಸ ಕ್ರೀಡೆಗಳ ಪರಿಚಯ ಮಾಡಿಕೊಡುವ ಹಾಗೂ ಆಸಕ್ತಿ ಕುದುರಿಸುವ ಸದುದ್ದೇಶದಿಂದ ಸ್ವತಃ ಈ ಕಾರ್ಯಕ್ರಮಗಳನ್ನು ಕಳೆದ ಮೂರು ವರ್ಷಗಳಿಂದ ಆಯೋಜಿಸುತ್ತಿದ್ದೇನೆ.

**ಅಭಿಮತ :** ನೀವು ಮ್ಯಾರಾಥಾನ್‌ನಲ್ಲಿ ಮಾಡಿರುವ ಸಾಧನೆ ಯುವ ತಲೆಮಾರಿಗೆ ಚೈತನ್ಯದಾಯಕವೂ, ಪ್ರೇರಕವೂ ಆಗಿದೆ. ಈ ಸಾಧನೆ ಮಾಡಲು ಈ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಹೇಗೆ ಬೆಳೆಯಿತು?

**ಮಾಲಾ ಹೊನ್ನತ್ತಿ :** ಈ ಮೊದಲೇ ಹೇಳಿದಂತೆ ಬಾಲ್ಯದಲ್ಲಾಗಲೀ ಅಥವಾ ವಿದ್ಯಾರ್ಥಿ ಜೀವನದಲ್ಲಾಗಲೀ ಯಾವುದೇ ರೀತಿಯ ಕ್ರೀಡೆಗಳ ತಿಳುವಳಿಕೆ, ಹವ್ಯಾಸ ಅಥವಾ ಅವುಗಳಲ್ಲಿ ಭಾಗವಹಿಸುವ ಅವಕಾಶಗಳಿರಲಿಲ್ಲ. ಸಿಂಡಿಕೇಟ್ ಬ್ಯಾಂಕಿನಲ್ಲಿ ವೃತ್ತಿಯಲ್ಲಿರುವಾಗ ಬೆಳಗಾವಿಯ ವೃತ್ತಿ ನಿರತ ಮಹಿಳೆಯರ ವಸತಿ ನಿಲಯ (ವರ್ಕಿಂಗ್ ವುಮನ್ ಹಾಸ್ಟೇಲ್)ದಲ್ಲಿ ವಾಸವಾಗಿದ್ದೆ. ಹಾಸ್ಟೇಲ್ ಜೀವನದಲ್ಲಿ ದೊರೆಯುವ ವೇಳೆಯ ಸದುಪಯೋಗ ಹಾಗೂ ಫಿಟ್‌ನೆಸ್‌ನ ಬಗ್ಗೆ ಸ್ವಲ್ಪಮಟ್ಟಿಗೆ ತಿಳುವಳಿಕೆ ಪಡೆದುದ್ದರಿಂದ ಕರಾಟೆ ಹಾಗೂ ಬ್ಯಾಡ್ಮಿಂಟನ್ ಕಲಿಯಲು ಪ್ರಾರಂಭಿಸಿದ್ದೆ. ಇವುಗಳಿಗೆ ಪೂರಕವಾಗಿ ಬೆಳಿಗ್ಗೆ ಜಾಗಿಂಗ್ ಹೋಗುವ ಪ್ರವೃತ್ತಿ ಬೆಳೆಸಿಕೊಂಡೆ. ಆನಂತರ ಗೋವಾಗೆ ವರ್ಗಾವಣೆ ಆದಾಗ ಅಲ್ಲಿಯ ಪ್ರಾಕೃತಿಕ ಸ್ವಚ್ಛ ವಾತಾವರಣ ಈ ಜಾಗಿಂಗ್ ಹವ್ಯಾಸವನ್ನು ಮುಂದುವರಿಸಿ ಮ್ಯಾರಾಥಾನ್ ಮಾಡಲು ಪ್ರಚೋದಿಸಿತು. ಇಡೀ ಗೋವೆಯ ಉದ್ದಗಲಕ್ಕೂ ಕಾಲ್ನಡಿಗೆಯಲ್ಲಿ ಓಡಾಡಿದ್ದೇನೆ. ಮುಂದೆ 1991ರಲ್ಲಿ ದೆಹಲಿಗೆ ವರ್ಗಾವಣೆ ಆದಾಗ ಹಾಫ್ ಮ್ಯಾರಾಥಾನ್ ಅಂದರೆ 21 ಕಿಲೋಮೀಟರ್ ಹಾಗೂ ಫುಲ್ ಮ್ಯಾರಾಥಾನ್ ಅಂದರೆ 42 ಕಿಲೋಮೀಟರ್ ಓಡುವ ಅವಕಾಶಗಳು ಒದಗಿಬಂದವು. 1993ರ ಅಕ್ಟೋಬರ್ 17ರಂದು ಮ್ಯಾರಾಥಾನ್ ಜಪಾನಿನ ಮಿಯಜ್ಞಾಕಿ ನಗರದಲ್ಲಿ ನಡೆದ ವೆಟರ್ನ್ ವರ್ಲ್ಡ್ ಮೀಟ್‌ನಲ್ಲಿ ಭಾಗವಹಿಸಿದೆ. ಅದು ನನ್ನ ಮೊದಲ ಮಾರಥಾನ್. ಆವೊತ್ತು ಪ್ರಾರಂಭವಾದ ಮ್ಯಾರಾಥಾನ್ ಓಟ ಇಂದಿಗೂ ಎಡೆಬಿಡದೆ ನಡೆಯುತ್ತಿದೆ. ಪ್ರಪಂಚದ ಅತ್ಯಂತ ಎತ್ತರವಾದ ಹಾಗೂ ಅತ್ಯಂತ ಕಠಿಣವಾದ 'ಎವರೆಸ್ಟ್ ಬೇಸ್ ಕ್ಯಾಂಪ್' ಮ್ಯಾರಾಥಾನ್‌ನಿಂದ ಹಿಡಿದು ಪ್ರಪಂಚದ ತಳಭಾಗ ಎಂದೇ ಪರಿಗಣಿತವಾಗಿರುವ ಅಂಟಾರ್ಟಿಕ ಮ್ಯಾರಾಥಾನ್‌ನ ವರೆಗೆ 20 ಫುಲ್ ಮ್ಯಾರಾಥಾನ್ ಸುಮಾರು 60 ಹಾಫ್ ಮ್ಯಾರಾಥಾನ್ ಹಾಗೂ ಎರಡು ಅಲ್ಟ್ರಾ ಮ್ಯಾರಾಥಾನ್ ಮಾಡಿರುವೆನು.

**ಅಭಿಮತ :** ಇಂದಿನ ದಿನಗಳಲ್ಲಿ ಸರ್ಕಾರದ ಪ್ರೋತ್ಸಾಹ ಕ್ರೀಡೆಗಳಿಗೆ ತಕ್ಕಷ್ಟು ಸಿಗ್ತಾ ಇಲ್ಲ. ಹಾಗಾಗಿ ನಮ್ಮ ಮಕ್ಕಳು, ಯುವಕರು ಕ್ರೀಡೆಗಳ ಬಗ್ಗೆ ಸರಿಯಾಗಿ ಆಸಕ್ತಿ ತೋರಿಸ್ತಾ ಇಲ್ಲ ಎಂಬ ಅಭಿಪ್ರಾಯ ಎಲ್ಲಾ ಕಡೆ ಇದೆ. ನಿಮ್ಮ ದೃಷ್ಟಿಯಲ್ಲಿ ಮ್ಯಾರಾಥಾನ್ ಬಗ್ಗೆ ಸರ್ಕಾರದ ಉತ್ತೇಜನ ಸಿಗುತ್ತಿದೆ ಅನ್ನಿಸುತ್ತಿದೆಯೇ?

**ಮಾಲಾ ಹೊನ್ನತ್ತಿ :** ಮಕ್ಕಳಲ್ಲಿ ಕ್ರೀಡೆ ಮತ್ತು ಆಟೋಟಗಳ ಅರಿವು ಮತ್ತು ಆಸಕ್ತಿಯನ್ನು ಮೂಲತ ವೈಯುಕ್ತಿಕ ಮಟ್ಟದಲ್ಲಿ ಕುಟುಂಬ, ಶಾಲೆಗಳಲ್ಲಿ ಬೆಳೆಸಬೇಕು. ಕ್ರೀಡಾ ಭಾವನೆ ಬೆಳೆಸಲು ಕುಟುಂಬಗಳ ಶಾಲೆಗಳ ಪಾತ್ರ ಮುಖ್ಯ. ಕಂಪನಿಗಳು ಮತ್ತು ಇತರೆ ಸಂಘಟನೆಗಳು ಅವುಗಳನ್ನು ಉತ್ತೇಜಿಸುವ ಮತ್ತು ಪ್ರೋತ್ಸಾಹಿಸುವ

ಕೆಲಸವನ್ನು ಸಾಮಾಜಿಕ ಹೊಣೆಗಾರಿಕೆಯಿಂದ ಮಾಡಬೇಕಾಗಿದೆ. ಸರ್ಕಾರಗಳು ಕ್ರೀಡೆ ಮತ್ತು ಇತರ ಚಟುವಟಿಕೆಗಳಿಗೆ ಬೇಕಾದ ಮೂಲ ಸೌಕರ್ಯಗಳನ್ನು ಒದಗಿಸುವ ಮೂಲಕ ಮಕ್ಕಳಿಗೆ, ಯುವಕರಿಗೆ, ಹಿರಿಯರಿಗೆ, ಮಹಿಳೆಯರಿಗೆ ನೆರವಾಗಬೇಕಿದೆ. ಕೆಲವು ಸಾಧಕರ ಸ್ವಂತ ಪರಿಶ್ರಮ ಮತ್ತು ಕಠಿಣ ಸಾಧನೆಯಿಂದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕೆಲವು ಪುರಸ್ಕಾರಗಳು ಬಂದಿದ್ದರು ಕೂಡ ಭಾರತದಲ್ಲಿ ಕ್ರೀಡಾ ಮನೋಭಾವ ಕಡಿಮೆ ಎಂದೇ ಹೇಳಬೇಕಿದೆ. ಕೇವಲ ಪ್ರತಿಭಾನ್ವಿತ ಯುವಕರಿಗೆ ಮಾತ್ರವೇ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ. ಆದರೆ ನನ್ನ ಪ್ರಕಾರ ಕ್ರೀಡೆ ಬರಿಯ ಪುರಸ್ಕಾರಕ್ಕೋಸ್ಕರ ಇರುವಂತಹುದಲ್ಲ. ಇದು ಆರೋಗ್ಯವರ್ಧನೆ ಮತ್ತು ಶಾರೀರಿಕ ಸ್ವಾಸ್ತ್ಯವನ್ನು ಚೆನ್ನಾಗಿ ಕಾಪಾಡಿಕೊಳ್ಳಲು ಇರುವಂತಹದು. ಹಾಗಾಗಿ ವೈಯುಕ್ತಿಕ ಆಸಕ್ತಿ, ಕೌಟುಂಬಿಕ ಮತ್ತು ಸಮಾಜದ ಪ್ರೋತ್ಸಾಹ ಮತ್ತು ಸರ್ಕಾರಗಳ ನೆರವು ಎಲ್ಲವು ಅತ್ಯಂತ ಮುಖ್ಯವಾದ ಸಂಗತಿಗಳಾಗುತ್ತವೆ.

**ಅಭಿಮತ :** ನೀವು ಇದುವರೆಗೂ ಸಾಕಷ್ಟು ಮ್ಯಾರಾಥಾನ್ ಓಟಗಳನ್ನು ಓಡಿದ್ದೀರಿ. ನಿಮಗೆ ಅತ್ಯಂತ ಮರೆಯಲಾಗದ ಕೆಲವು ಅನುಭವಗಳು ಇರುತ್ತವೆ. ಅಂತಹ ಒಂದೆರಡು ಘಟನೆಗಳನ್ನು ವಿವರಿಸುವಿರಾ?

**ಮಾಲಾ ಹೊನ್ನತ್ತಿ :** ತಾಯಿಗೆ ತನ್ನ ಎಲ್ಲಾ ಮಕ್ಕಳ ಮೇಲೆಯೂ ಒಂದೇ ಸಮನಾದ ಪ್ರೀತಿ ಇರುವಂತೆ ಕ್ರೀಡಾಪಟುವಿಗೆ ಎಲ್ಲ ಕ್ರೀಡೆಗಳ ಸ್ಪರ್ಧೆಯೂ ಒಂದು ರೀತಿಯ ಚಾಲೇಂಜ್ ಆಗಿರುತ್ತದೆ. ಅದೇ ರೀತಿ ನನ್ನ ಎಲ್ಲಾ  ಪರ್ವತಾರೋಹಣಗಳು ಹಾಗೂ ಎಲ್ಲಾ ಮ್ಯಾರಾಥಾನ್‌ಗಳು ಪ್ರಿಯವಾಗಿವೆ. ಆದರೂ ಕೂಡಾ ಜಪಾನಿನ ಮಿಯಜ್ಞಾಕಿ ಮ್ಯಾರಾಥಾನ್, ಎವರೆಸ್ಟ್ ಬೇಸ್ ಕ್ಯಾಂಪ್ ಮ್ಯಾರಾಥಾನ್ ಹಾಗೂ ಅಂಟಾರ್ಟಿಕಾ ಮ್ಯಾರಾಥಾನ್ ನನಗೆ ವಿಶಿಷ್ಟವಾಗಿವೆ. ಮಿಯಜ್ಞಾಕಿ ಮ್ಯಾರಾಥಾನ್ ನನ್ನ ಮೊದಲ ಮ್ಯಾರಾಥಾನ್ ಆಗಿರುವುದರಿಂದ ಇದರ ತಯಾರಿ ಹಾಗೂ ಜಪಾನಿನ ಪ್ರವಾಸ ಅಂತರರಾಷ್ಟ್ರೀಯ ಕ್ರೀಡಾಪಟುಗಳ ಜೊತೆಗೆ ಸರಿಸಮವಾಗಿ ಭಾಗವಹಿಸುವುದು ಒಂದು ರೀತಿಯ ಭಾವನಾತ್ಮಕವಾದ ಅನುಭವವಾಗಿತ್ತು. ಒಂದು ಮ್ಯಾರಾಥಾನಿನ ತಯಾರಿಯನ್ನು ಯಾವುದೇ ದೊಡ್ಡ ಪ್ರಾಜೆಕ್ಟ್‌ನ ತಯಾರಿಯಂತೆ ನಾವು ಪರಿಗಣಿಸಬಹುದು. ಜಪಾನಿನ ಜನಜೀವನದ ಪರಿಚಯ ಅವರ ಜೀವನಶೈಲಿ, ಕಾರ್ಯತತ್ಪರತೆ, ಸ್ನೇಹಭಾವಗಳು ಯಾರ ಮೇಲೆಯೂ ಪ್ರಭಾವಬೀರುವಂತಹವು. ಅಂತರರಾಷ್ಟ್ರೀಯ ಕ್ರೀಡಾಪಟುಗಳ ಸಾಧನೆಯಂತೂ ನಿಬ್ಬೆರಗಾಗಿ ಸುವಂತಹದ್ದು.

ಎವರೆಸ್ಟ್ ಬೇಸ್ ಕ್ಯಾಂಪಿನ ಅನುಭವ ಬಹು ಸಾಹಸಕಾರಿ. 18000 ಅಡಿ ಮೇಲೆ ಇರುವ ಬೇಸ್ ಕ್ಯಾಂಪನ್ನು ತಲುಪಲು 15 ದಿನದ ಕಾಲ್ನಡಿಗೆ  ಮಾಡಬೇಕು. ಶೂನ್ಯಕ್ಕಿಂತಲೂ ಕಡಿಮೆ ಇರುವ ತಾಪಮಾನ, ಅಸಂಖ್ಯಾತ ಎತ್ತರ ಬಿತ್ತರಗಳುಳ್ಳ ಕಣಿವೆಗಳು, 15 ಕೆ.ಜಿ ತೂಕದ ಅತ್ಯವಶ್ಯಕ ಸಾಮಗ್ರಿಗಳ ಬ್ಯಾಗನ್ನು ಬೆನ್ನ ಮೇಲೆ ಹೊತ್ತು ನಡೆಸಿದ ಆ ಪರ್ವತಾರೋಹಣ ನಿಜಕ್ಕೂ ಬದುಕಿನ ದೊಡ್ಡ ಸಾಹಸವೇ ಸರಿ. ಬೇಸ್ ಕ್ಯಾಂಪಿನ 'ಕುಂಭು ಹಿಮನದಿ' ಮುಂದೆ ಕುಳಿತಾಗ ಅದೊಂದು ಬಗೆಯ ಪ್ರಶಾಂತವಾದ ಸ್ಥಿತಿಗೆ ನಮ್ಮ ಮನಸ್ಸು ಜಾರುವ ಕ್ಷಣಗಳು ನಿಜಕ್ಕೂ ಅವಿಸ್ಮರಣೀಯ. ಅಲ್ಲಿ ದೊರೆಯುವ ಆಧ್ಯಾತ್ಮಿಕ ಭಾವ ಅವರ್ಣನೀಯ. ಅಂತಹ ವರ್ಣನಾತೀತ ಅನುಭವದೊಂದಿಗೆ ನಮ್ಮ ಮ್ಯಾರಾಥಾನ್ 18000 ಅಡಿಗಳಿಂದ ಪ್ರಾರಂಭವಾದಾಗ ಅಲ್ಲಿ ನಮಗೆ ದೊರಕುತ್ತಿದ್ದ ಆಮ್ಲಜನಕ ಪ್ರಮಾಣ 43% ಮಾತ್ರ ಮುಂದೆ ನಾವು ಕೆಳಗಿಳಿಯುತ್ತಾ 12500 ಅಡಿಯಲ್ಲಿರುವ ನಾಮ್ಚೆ ಬಜಾರ್ ಮುಟ್ಟಿದೆವು. ಆ ತಂಡದಲ್ಲಿ ಒಟ್ಟು 105 ಸದಸ್ಯರಲ್ಲಿ ನಾನೊಬ್ಬಳೆ ಭಾರತದಿಂದ ಪ್ರತಿನಿಧಿಸಿದ್ದಿದ್ದು. ಮ್ಯಾರಾಥಾನ್ ಓಟದಲ್ಲಿ ಹತ್ತು ಗಂಟೆ ಮೂವತ್ತು ನಿಮಿಷಗಳ ಸಮಯದಲ್ಲಿ ಗಡಿ ರೇಖೆಯನ್ನು ಮುಟ್ಟಿದಾಗ ಓಟಗಾರರಿಗೆ ದೊರಕುವ ಆನಂದ ನಿಜಕ್ಕೂ ಅತೀತವಾದುದು. ಅದೊಂದು ಉಲ್ಲಾಸದ ಕ್ಷಣ.

ಅಂಟಾರ್ಟಿಕಾ ಮ್ಯಾರಾಥಾನಿನ ಅನುಭವ ಬಹು ರೋಮಾಂಚಕಾರಿ. ದುಬೈ, ಸಾಹೋಪೋಲೋ ಮಾರ್ಗವಾಗಿ ಅರ್ಜೆಂಟೀನಾದ ಪುಂಟಾ ಏರಿನಾದಿಂದ ಚಾರ್ಟರ್ಡ್ ಫ್ಲೈಟ್ ಮೂಲಕ ಅಂಟಾರ್ಟಿಕಾ ಖಂಡದ ಯೂನಿಯನ್ ಗ್ಲೇಷಿಯರ್ ತಲುಪುವುದೇ ಒಂದು ದೊಡ್ಡ ಸಾಹಸ ಹಾಗೂ ಮೈ ನವಿರೇಳಿಸುವ ಅನುಭವ. ನಾವು ಹೈಸ್ಕೂಲಿನಲ್ಲಿದ್ದಾಗ ಸಮಾಜ ವಿಜ್ಞಾನದಲ್ಲಿ ಓದಿದ ಕೆಲವು ಪಾಠಗಳೆಲ್ಲವೂ ನೆನಪಿಗೆ ಬರುತ್ತಿದ್ದವು. ನಾವು ಅಂಟಾರ್ಟಿಕಾ ತಲುಪಿದಾಗ ಅದು ಅಲ್ಲಿಯ ಬೇಸಿಗೆಯ ಕಾಲ ಆದರೆ ಮೈನಸ್ 20ಡಿಗ್ರಿ ತಾಪಮಾನ! ದಿನದ 24ಗಂಟೆಯೂ ತಲೆಯ ಮೇಲೆ ಪ್ರಖರವಾದ ಸೂರ್ಯ ಕೆಳಗೆ ಪಾದದಡಿ ಮೃದುವಾದ ಕೊರೆಯುವ ಹಿಮ. ಇಂತಹ ವಾತಾವರಣದಲ್ಲಿ 42.2 ಕಿಲೋ ಮೀಟರ್‌ನ ಮ್ಯಾರಾಥಾನ್ ಮಾಡಲು ನನಗೆ 7ಗಂಟೆ 11 ನಿಮಿಷ ಹಿಡಿಯಿತು. ಈ ಪ್ರವಾಸದ ಪ್ರತಿಯೊಂದೂ ವ್ಯವಸ್ಥೆಯು ಊಟ, ಉಪಚಾರ ಮ್ಯಾರಾಥಾನಿಗೆ ಬೇಕಾಗುವ ಇನ್ನಿತರ ವ್ಯವಸ್ಥೆಗಳನ್ನು ಕರಾರುವಕ್ಕಾಗಿ ಮಾಡಿದ್ದರು. ಸುಮಾರು 40 ಅಂತರರಾಷ್ಟ್ರೀಯ ಓಟಗಾರರ ಜೊತೆಗೆ ಪಡೆದ ಈ ಅನುಭವ ಅವಿಸ್ಮರಣೀಯ.

**ಅಭಿಮತ :** ನೀವು ಹೊರನಾಡಿನಲ್ಲಿ ಬಂದು ನೆಲೆ ನಿಂತ ಮೇಲೆ ನಿಮ್ಮ ಹಾಗೂ ಕನ್ನಡ ಭಾಷೆ, ಕರ್ನಾಟಕದ ಜೊತೆಗಿನ ಭಾಂದವ್ಯವನ್ನು ಹೇಗೆ ಕಾಪಾಡಿಕೊಂಡು ಬಂದಿರಿ ಮೇಡಂ? ಅಂದರೆ ನಿಮ್ಮ ಊರು ಹಿರಿಯರು,  ಜೊತೆ ಸಂಪರ್ಕ ಸಂಬಂಧ ಇತ್ಯಾದಿಗಳ ಬಗ್ಗೆ ತಿಳಿಸ್ತೀರಾ?

**ಮಾಲಾ ಹೊನ್ನತ್ತಿ :** 'ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು' ಎನ್ನುವ ಕವಿವಾಣಿಯಂತೆ ಪ್ರಪಂಚದ ಯಾವುದೇ ಮೂಲೆಗೆ ಹೋದರೂ ಸಹ ಕನ್ನಡದ ಅಭಿಮಾನ, ಬಾಂಧವ್ಯ ಎಂದೆಂದಿಗೂ ಚಿರವಾಗಿರುವುದು. ನನ್ನ ಹೈಸ್ಕೂಲ್ ವಿದ್ಯಾಭ್ಯಾಸವೆಲ್ಲವೂ ಕನ್ನಡ ಮಾಧ್ಯಮದಲ್ಲೇ ಆಗಿರುವಾಗ ದೆಹಲಿಗೆ ಬಂದು ಹಿಂದಿಯಲ್ಲಿ ವ್ಯವಹರಿಸುವುದು ಸ್ವಲ್ಪ ಕಷ್ಟವೇ ಆಯಿತು. ಬ್ಯಾಂಕು ಹಾಗೂ ಇತರ ವ್ಯವಹಾರಗಳೆಲ್ಲವೂ ಇಂಗ್ಲೀಷ್ ಭಾಷೆಯಲ್ಲಿ ನಡೆದು, ಆ ಭಾಷೆಯಲ್ಲಿ ತಕ್ಕಮಟ್ಟಿಗೆ ನುರಿತಳಾದೆ. ಆದರೆ ಈಗ ಕನ್ನಡ, ಹಿಂದಿ, ಇಂಗ್ಲೀಷ್ ಭಾಷೆಗಳ ಒಂದು ರೀತಿಯ ಕಲಸುಮೇಲೋಗರ ಆಗಿದೆ. ಹಿಂದಿ, ಇಂಗ್ಲೀಷ್ ಸರಿಯಾಗಿ ಕಲಿಯಲಿಲ್ಲ, ಕಲಿತ ಕನ್ನಡ ಮರೆತು ಹೋಯಿತು ಅನ್ನುವಂತಾಗಿದೆ ನಮ್ಮ ಸ್ಥಿತಿ. ನಾವು ಎಷ್ಟೇ ಕನ್ನಡದ ಅಭಿಮಾನಿಗಳಾಗಿದ್ದರೂ ಸಹ ಕರ್ನಾಟಕದ ಜನವೇ ನಮ್ಮನ್ನು ಹೊರಗಿನವರಂತೆ ಕಾಣುತ್ತಾರೆ. ಮೊದಲು ಸಾಕಷ್ಟು ಕನ್ನಡ ಸಾಹಿತ್ಯದ ಅರಿವು ಹಾಗೂ ಓದುವ ಹವ್ಯಾಸ ಇದ್ದರೂ ಸಹ ಬ್ಯಾಂಕಿನ ಕೆಲಸದ ಒತ್ತಡ ಹಾಗೂ ಇತರ ಹವ್ಯಾಸಗಳಲ್ಲಿ ಕನ್ನಡ ಓದುವುದು ಸ್ವಲ್ಪ ಕಡಿಮೆಯಾಗಿತ್ತು. ಆದರೆ ಈಗ ನಿವೃತ್ತಿಯ ನಂತರ ಪುನಃ ಕನ್ನಡ ಸಾಹಿತ್ಯದ ಒಲವು ಬೆಳೆಯುತ್ತಿದೆ.

ತಂದೆ-ತಾಯಿಯವರು ದೈವಾಧೀನರಾಗಿ ಹಲವು ವರ್ಷಗಳೇ ಕಳೆದವು. ಆದರೂ ಸಹ ಅಣ್ಣ-ಅಕ್ಕ-ತಂಗಿ, ನೆಂಟರಿಷ್ಟರ ದೊಡ್ಡ ಕುಟುಂಬವಿರುವುದರಿಂದ ಮದುವೆ, ಮುಂಜಿ, ಗೃಹಪ್ರವೇಶ ಮೊದಲಾದ ಕಾರ್ಯಕ್ರಮಗಳಿಗೆ ಕರ್ನಾಟಕಕ್ಕೆ ಹೋಗುವ ಅವಕಾಶಗಳು ಸಿಗುತ್ತದೆ.

**ಅಭಿಮತ :** ಹೊರನಾಡಿನಲ್ಲಿ ಬದುಕುವ ಸಂದರ್ಭದಲ್ಲಿ ಹೊರನಾಡ ಕನ್ನಡಿಗರ ಮತ್ತು ಕನ್ನಡ ಸಂಘ, ಸಂಸ್ಥೆಗಳ ಜೊತೆಗೆ ನಿಮ್ಮ ಒಡನಾಟ ಸಂಪರ್ಕ ಇತ್ಯಾದಿಗಳನ್ನು ಕುರಿತು ತಿಳಿಸ್ತೀರಾ ಮೇಡಂ?

**ಮಾಲಾ ಹೊನ್ನತ್ತಿ :** 1991ರಲ್ಲಿ ದೆಹಲಿಗೆ ಬಂದರೂ ಸಹ ದೆಹಲಿ ಕರ್ನಾಟಕ ಸಂಘದ ಸಂಪರ್ಕದಲ್ಲಿ ಬಂದದ್ದು 1995ರಲ್ಲಿ ಆಜೀವ ಸದಸ್ಯರಾಗುವುದರ ಮೂಲಕ. ಮುಂದೆ 1996-97 ಕೆ.ಆರ್. ನಾಗರಾಜ್ ಅವರ ಅಧ್ಯಕ್ಷತೆಯಲ್ಲಿ ನಾನು ಜಂಟಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದೇನೆ. 1999-2000ರಲ್ಲಿ ಜನಕಪುರಿ ಕನ್ನಡ ಕೂಟದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ ಸೇವೆ ಸಲ್ಲಿಸಿರುತ್ತೇನೆ. ನಂತರ 2002ರಲ್ಲಿ ಗೋವಾ ರಾಜ್ಯಕ್ಕೆ ವರ್ಗವಾಗಿ ಹೋದಾಗ ಅಲ್ಲಿಯ ಕನ್ನಡ ಸಮಾಜದಲ್ಲಿ ಎರಡು ವರ್ಷ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿರುತ್ತೇನೆ. ಯಾವುದೇ ಹೊರನಾಡ ಕನ್ನಡಿಗರ ಸಂಘ ಸಂಸ್ಥೆಗಳ ಜೊತೆಗೆ ಸಂಪರ್ಕ ಇಟ್ಟುಕೊಂಡು ಅವರ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ನಮ್ಮೂರು, ನಮ್ಮ ಮನೆ, ನಮ್ಮ ಜನಗಳ ಮಧ್ಯೆ ಇದ್ದಂತಹ ಭಾವನೆ ಉಂಟಾಗುತ್ತದೆ. ಅ





# ದೆಹಲಿಯಲ್ಲಿ ಅಪರೂಪದ ಆಹೋರಾತ್ರಿ ನಾಟಕ ಪ್ರದರ್ಶನ






ಈ ಹಿಂದೆ ಆಹೋರಾತ್ರಿ 'ಯಕ್ಷಗಾನ'ದ ಸವಿಯನ್ನನುಭವಿಸಿದ ದೆಹಲಿ ಪ್ರೇಕ್ಷಕರಿಗೆ ಇದೇ ಡಿಸೆಂಬರ್ 16ರಂದು ಆಹೋರಾತ್ರಿ 'ಕುರುಕ್ಷೇತ್ರ ಅಥವಾ ಧರ್ಮರಾಜ್ಯ ಸ್ಥಾಪನೆ' ನಾಟಕದ ಪ್ರದರ್ಶನ ಜರುಗಿತು. ಪ್ರಸಕ್ತ ಪೌರಾಣಿಕ ಸಂಗೀತ ನಾಟಕ ಪ್ರದರ್ಶಿಸಿದವರು ಶ್ರೀ ರಂಗನಾಥಸ್ವಾಮಿ ಕೃಪಾ ಪೋಷಿತ ಕಲಾ ಸಂಘ, ಹೊಸಪೇಟೆ, ಮಾಗಡಿ, ರಾಮನಗರ ಜಿಲ್ಲೆ. ದೆಹಲಿ ಕರ್ನಾಟಕ ಸಂಘ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಸಹಯೋಗದೊಂದಿಗೆ ಈ ನಾಟಕ ಪ್ರದರ್ಶಿಸಲಾಯಿತು.

ಈ ಪ್ರದರ್ಶನದ ಸಂದರ್ಭದಲ್ಲಿ ನಾಟಕ ನಿರ್ದೇಶಕ ಹಾಗೂ ಹಾರ್ಮೋನಿಯಂ ವಾದಕ ಶ್ರೀ ಎಚ್.ಎಂ. ನಾರಾಯಣಪ್ಪ ಅವರನ್ನು ಸಂಘದ ಪರವಾಗಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಸಂಘದ ಹಿರಿಯ ಸದಸ್ಯೆ ಡಾ. ಅಹಲ್ಯಾ ಚಿಂತಾಮಣಿ, ಶ್ರೀ ಬಿ.ಕೆ. ಬಸವರಾಜು ಹಾಗೂ ಶ್ರೀ ರಾಜೇಶ್ ಕಂಠಯ್ಯ, ಚೀಫ್ ಎಡಿಟರ್, ಸಿ.ಎನ್.ಎನ್. ನೆಟ್‌ವರ್ಕ್18, ರಂಗಕರ್ಮಿ ಶ್ರೀ ಶಿವಾನಂದ ಇಂಗಳೇಶ್ವರ ಇವರ ಉಪಸ್ಥಿತಿಯಲ್ಲಿ ಸನ್ಮಾನಿಸಲಾಯಿತು.

ಡಾ. ಅಹಲ್ಯಾ ಚಿಂತಾಮಣಿಯವರು ಕಲಾವಿದರನ್ನುದ್ದೇಶಿಸಿ ಮಾತನಾಡುತ್ತ ತಮ್ಮ ಬಾಲ್ಯ ಕಾಲದಿಂದಲೂ ಇಂತಹ ನಾಟಕಗಳನ್ನು ನೋಡುತ್ತಾ ಬೆಳೆದಿದ್ದು. ಇಂತಹ ಪ್ರಯೋಗಗಳು ಮಾನವನ ಸಂಸ್ಕಾರ ರೂಪಿಸುವಲ್ಲಿ ಸಹಾಯಕ ಎಂದು ಹೇಳಿದರು. ಈ ರೀತಿ ಆಹೋರಾತ್ರಿ ನಾಟಕಗಳ ಪ್ರದರ್ಶನಗಳ ಸಮಯಕ್ಕೆ ಕಡಲೆಬೀಜ, ಮಂಡಕ್ಕಿ, ಚಹಾ, ಕಾಫಿ ಇತ್ಯಾದಿಗಳು ಮಾರಾಟ ಕೂಡಾ ಆಗಿನ ಕಾಲದ ಪ್ರಯೋಗಗಳಲ್ಲಿ ಆಗುತ್ತಿದ್ದುವು. ಇಂದಿನ ಪ್ರಯೋಗದಲ್ಲಿ ಅದು ಕಾಣುತ್ತ ಇಲ್ಲ. ಈ ತೆರನಾದ ಪ್ರಯೋಗಗಳು ಆಗಾಗ ನಡೆಯುತ್ತಿರಬೇಕು. ಕಲಾವಿದರು ಇಂದಿನ ಕಾಲಘಟ್ಟದಲ್ಲಿ ಈ ಕಲೆಯನ್ನು ಪೋಷಿಸಿಕೊಂಡು ಬರುತ್ತಿರುವುದಕ್ಕೆ ಅವರನ್ನು ಅಭಿನಂದಿಸಿದರು.



ಇದೇ ಸಂದರ್ಭದಲ್ಲಿ ರಂಗಕರ್ಮಿ ಶಿವಾನಂದ ಇಂಗಳೇಶ್ವರ ಅವರು ಮಾತನಾಡಿ, ಇಂದಿನ ಧಾವಂತದ ಜೀವನ ಶೈಲಿ, ನೂರಾರು ಟಿ.ವಿ. ಚಾನೆಲ್‌ಗಳ ಅಬ್ಬರದ ನಡುವೆಯೂ ವಿರಳವಾಗುತ್ತಿರುವ ಸಂಗೀತ ನಾಟಕಗಳ ಈ ಪರಂಪರೆಯನ್ನು ಉಳಿಸಿಕೊಂಡು ಮುಂದುವರಿಸಲು ಪ್ರಯತ್ನಿಸುತ್ತಿರುವ ಗ್ರಾಮೀಣ ಪ್ರದೇಶದ ಈ ತಂಡ, ಕಲಾವಿದರು ಮುಖ್ಯವಾಗಿ ಇದನ್ನು ಕಲಿಸುತ್ತಿರುವ ಗುರು-ನಿರ್ದೇಶಕರು ಅಭಿನಂದನೀಯರು. ಈ ತಂಡ ಇನ್ನು ಹೆಚ್ಚು ಹೆಚ್ಚು ಪ್ರಯೋಗಗಳನ್ನು ಸಿದ್ಧಪಡಿಸಿ ಪ್ರದರ್ಶಿಸಲಿ ಎಂದು ಶುಭ ಹಾರೈಸಿದರು.

ಇದೇ ಸಂದರ್ಭದಲ್ಲಿ ಶ್ರೀ ರಂಗನಾಥಸ್ವಾಮಿ ಕೃಪಾ ಪೋಷಿತ ಕಲಾ ಸಂಘದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರನ್ನು ಅಭಿನಂದಿಸಲಾಯಿತು.

ಈ ನಾಟಕ ಪ್ರದರ್ಶನಕ್ಕೆ ಸ್ಥಳೀಯ ಪ್ರೇಕ್ಷಕರ ಅಭಾವ ಎದ್ದು ಕಾಣುತ್ತಿತ್ತು. ಬಹುಶಃ ಚಳಿಗಾಲದ ಈ ಸಮಯ ಕಾರಣವಾಗಿರಬಹುದು. ನಾಟಕದ ಎಲ್ಲ ಪಾತ್ರಧಾರಿಗಳ ಅಭಿನಯ ಹಾಗೂ ಗಾಯನ ಪ್ರೇಕ್ಷಕರ ಮನ ತಟ್ಟಿತು. ವೇಷಭೂಷಣ ನಾಟಕಕ್ಕೆ ತಕ್ಕ ಹಾಗೆ ಇದ್ದು ಕಣ್ಮನಗಳಿಗೆ ಉಲ್ಲಾಸ ತಂದಿತು. ಒಟ್ಟಾರೆ ಒಂದು ಯಶಸ್ವೀ ಪ್ರಯೋಗ. ಅ

**ಅಭಿಮತ ವರದಿ**



# ನವದೆಹಲಿಯಲಿ ಮಂಡ್ಯ ಉತ್ಸವ






ನವೆಂಬರ್ ತಿಂಗಳಿಡೀ ಕರ್ನಾಟಕ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಿದ ದೆಹಲಿ ಕನ್ನಡಿಗರ ಉತ್ಸಾಹ ಆರುವುದಕ್ಕೆ ಮುನ್ನವೇ ಅಂದರೆ ಡಿಸೆಂಬರ್ 9 ಮತ್ತು 10ರಂದು ಎರಡು ದಿನಗಳ ಮಂಡ್ಯ ಉತ್ಸವವನ್ನು ಆಯೋಜಿಸಿದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜರ ಆಯೋಜನಾ ಶಕ್ತಿ ಅಪರಿಮಿತ ಎಂಬುದು ಮಂಡ್ಯ ಉತ್ಸವ ವೀಕ್ಷಿಸಿದ ಸದಸ್ಯರುಗಳಿಗೆ ವಿದಿತವಾಯಿತು.

ಡಿಸೆಂಬರ್ 9ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಮಂಡ್ಯ ಸಂಸದರಾದ ಶ್ರೀ ಸಿ.ಎಸ್. ಪುಟ್ಟರಾಜು ಅವರು ದೀಪ ಬೆಳಗಿಸುವುದರೊಂದಿಗೆ ಮಂಡ್ಯ ಉತ್ಸವವನ್ನು ಉದ್ಘಾಟಿಸಿದರು. ವಿಧಾನಪರಿಷತ್ ಉಪಾಧ್ಯಕ್ಷ ಶ್ರೀ ಮರಿತಿಬ್ಬೇಗೌಡ, ಶಾಸಕ ಶ್ರೀ ಟಿ.ಸಿ. ಶ್ರೀಕಂಠೇಗೌಡ ಹಾಗೂ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಉಪಸ್ಥಿತರಿದ್ದರು. ಮಂಡ್ಯ ಉತ್ಸವವನ್ನು ಉದ್ಘಾಟಿಸಿದ ಅತಿಥಿಗಳು ಎರಡು ದಿನಗಳ ಮಂಡ್ಯದ  ಗಂಡುಗಲಿಗಳ ಈ ಉತ್ಸವ ಅದ್ದೂರಿಯಾಗಿ ಸಾಗಲಿ ಎಂದು ಶುಭ ಹಾರೈಸಿದರು.

ಉದ್ಘಾಟನೆಯ ನಂತರ ವಿಚಾರ ಸಂಕಿರಣ ಪ್ರಾರಂಭವಾಯಿತು. "ಮಂಡ್ಯ ಜಿಲ್ಲಾ ರಾಜಕಾರಣ ಮತ್ತು ಅಭಿವೃದ್ಧಿ" ಕುರಿತು ಶ್ರೀ ಕೆ.ಟಿ. ಶ್ರೀಕಂಠೇಗೌಡರು ಮಾತನಾಡಿದರು. ತದನಂತರ ಮಾತನಾಡಿದ ಡಾ. ಎಚ್.ಎಸ್. ಮುದ್ದೇಗೌಡರು "ಮಂಡ್ಯ ಜಿಲ್ಲೆ–ಸಂಸ್ಕೃತಿ" ಕುರಿತು ಬಹಳ ಸ್ವಾರಸ್ಯಕರವಾಗಿ ಮಾತನಾಡಿದರು. ಭೋಜನ ವಿರಾಮದ ನಂತರ ಶ್ರೀ ಎಚ್.ಕೆ. ಚಂದ್ರಹಾಸ, ಕು. ದಿಶಾ ಜೈನ್, ನಿತ್ಯಶ್ರೀ ಮತ್ತು ತಂಡದವರಿಂದ ಸುಮಧುರ ಭಾವಗೀತೆಗಳ ಕಾರ್ಯಕ್ರಮ ನೆರವೇರಿತು.

ಸಂಜೆಯ ವೇಳೆ ಶ್ರೀ ಗಂಗಾಧರ ಸ್ವಾಮಿಯವರು ನಿರ್ದೇಶಿಸಿದ ಶ್ರೀ ಕೆ.ವಿ. ಶಂಕರ ಗೌಡರ ರಚನೆಯಾದ 'ಪಾದುಕಾ ಕಿರೀಟ'ದ ಅದ್ಭುತ ಪ್ರದರ್ಶನವನ್ನು ಕರ್ನಾಟಕ ಸಂಘ, ಮಂಡ್ಯ ತಂಡ ನೀಡಿತು. ಸುಂದರ ರಂಗಸಜ್ಜಿಕೆ, ಮನಸೂರೆಗೊಳ್ಳುವ ವೇಷಭೂಷಣದೊಂದಿಗೆ ಅತ್ಯುತ್ತಮ ನಿರ್ದೇಶನದ ಉತ್ತಮ ಅಭಿನಯ ಪ್ರದರ್ಶಿಸಿದ ಕಲಾವಿದರೆಲ್ಲರೂ ಜನಮೆಚ್ಚುಗೆ ಗಳಿಸಿದರು.

ಉತ್ಸವದ ಎರಡನೆಯ ದಿನದಂದು ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್ ಗೌಡರು 'ಮಂಡ್ಯ ಜಿಲ್ಲೆಯಲ್ಲಿ ಸಾಹಿತ್ಯ–ಶಿಕ್ಷಣ' ಕುರಿತಂತೆ ತುಂಬಾ ಸವಿಸ್ತಾರವಾಗಿ ಮಾಹಿತಿ ನೀಡಿದರು. ತದನಂತರ ಕುವೆಂಪು ಅವರ ರಚನೆಯಾದ 'ಜಲಗಾರ' ನಾಟಕ ಪ್ರದರ್ಶನಗೊಂಡಿದ್ದು, ಗಂಗಾಧರ ಸ್ವಾಮಿಯರ ನಿರ್ದೇಶನದಲ್ಲಿ ಮಂಡ್ಯದ ಸದ್ವಿದ್ಯಾ ತಂಡದ ಬಾಲ ಕಲಾವಿದರಿಂದ. ಬಾಲ ಕಲಾವಿದರು ನೀಡಿದ ಪ್ರಬುದ್ಧ ಅಭಿನಯ ನಿಜಕ್ಕೂ ನೋಡುಗರಿಗೆ ಅಚ್ಚರಿಯುಂಟು ಮಾಡಿತು.


ಭೋಜನ ವಿರಾಮದ ನಂತರ ಶ್ರೀ ಕೆಂಚೇಗೌಡ ಕಾಳೇನಹಳ್ಳಿ, ಶ್ರೀ ಸುರೇಶ್ ಕಾಸರವಾಡಿ ಹಾಗೂ ಶ್ರೀ ಪುಟ್ಟರಾಜು ಹೊಸ್ಕೆರೆಯವರ ರಂಗಗೀತೆಗಳಿಂದ ಸಭಾಂಗಣ ರಂಗೆದ್ದಿತು. ಅಲ್ಲಿಂದ, ಜಾನಪದಗೀತೆಗಳ ಸೊಗಡಿಗೆ ವೀಕ್ಷಕರನ್ನು ಕರೆದೊಯ್ದುವರು ಶ್ರೀ ಹುರಗಲವಾಡಿ ರಾಮಯ್ಯ, ಶ್ರೀಮತಿ ಮಂಜುಳಾ, ಶ್ರೀಮತಿ ದಿಶಾ ಜೈನ್, ಶ್ರೀ ಎಚ್.ಕೆ. ಚಂದ್ರಹಾಸ ಇವರು ನೀಡಿದ ಜಾನಪದ ಗೀತೆಗಳು ನಮ್ಮ ಬದಲಾಗುತ್ತಿರುವ ಜೀವನ ಶೈಲಿಯನ್ನು ಬಣ್ಣಿಸಿ ಕೇಳುಗರ ಮನಸೂರೆಗೊಂಡರು.

ಸಂಜೆ ನಾಲ್ಕು ಗಂಟೆಗೆ ಮಂಡ್ಯದ ಸಾಂಸ್ಕೃತಿಕ ಸಂಘಟನೆಗಳ ಒಕ್ಕೂಟದ ಕಲಾವಿದರಿಂದ ಆನಂದ ತುಮಕೂರು ಅವರ ನಿರ್ದೇಶನದಲ್ಲಿ ಕುವೆಂಪು ವಿರಚಿತ 'ಶೂದ್ರ ತಪಸ್ವಿ' ನಾಟಕ ಪ್ರದರ್ಶಿತಗೊಂಡಿತು.

ಸಮಾರೋಪ ಸಮಾರಂಭವು ಮಂಡ್ಯದ ಜನಪ್ರತಿನಿಧಿಗಳನ್ನು ಸನ್ಮಾನಿಸುವುದರೊಂದಿಗೆ ಎರಡು ದಿನಗಳ ಮಂಡ್ಯದ ಉತ್ಸವವು ಮುಕ್ತಾಯಗೊಂಡಿತು. ಅ

***ಚೆನ್ನು ಎಸ್.ಮಠದ***








# ಆಘಾತ

ಸಿಗರೇಟ್ ಹೊಗೆಯನ್ನು ಸುರುಳಿ ಸುರುಳಿಯಾಗಿ ಬಿಡುತ್ತ ಡಿಸೆಂಬರ್ ತಿಂಗಳ ಹಿತವಾದ ಬಿಸಿಲಿನಲ್ಲಿ ಆಫೀಸ್‌ನಲ್ಲಿ ಲಂಚ್ ಮುಗಿಸಿ ಹಾಗೆಯೇ ಬಳಿಯಿದ್ದ ಪಾರ್ಕ್ ಬಳಿಯ ರಸ್ತೆಯಲ್ಲಿ ಅಡ್ಡಾಡುತ್ತಿದ್ದ ವಿಜಯನಿಗೆ ಹೊಗೆಯ ಘಾಟು ಮೂಗಿಗೆ ಏರಿ ಒಂದು ಬಗೆಯ ಖುಷಿಯನ್ನು ನೀಡಿತು. ಎರಡು ವರ್ಷದ ಹಿಂದೆಯಷ್ಟೇ ಬಿ.ಇ. ಮುಗಿಸಿ ಸ್ಯಾಮ್‌ಸಂಗ್ ಕಂಪನಿ ಸೇರಿದ್ದ ಅವನ ಜೀವನ ಬಹಳ ಆನಂದದಾಯಕವಾಗಿ ನಡೆಯುತ್ತಿತ್ತು. ಊರಿನಲ್ಲಿದ್ದ ಅಮ್ಮ ಮತ್ತು ತಂಗಿಗೆ ಒಂದೆಷ್ಟು ಹಣ ಕಳಿಸುವುದಷ್ಟೇ ಅವನ ಜವಾಬ್ದಾರಿ. ಉಳಿದ ದುಡ್ಡನ್ನೆಲ್ಲ ತನ್ನ ಮೋಜು ಮಸ್ತಿಗೆಂದು ಖರ್ಚು ಮಾಡಿಕೊಂಡು ಹಾಯಾಗಿ ಓಡಾಡಿಕೊಂಡಿದ್ದ ಅವನಿಗೆ ಈ ವಾರದ ಕೊನೆಯಲ್ಲಿ ಯಾವ ಸಿನೇಮಾಕ್ಕೆ ಹೋಗುವುದು ರೆಸ್ಟೋರೆಂಟಿಗೆ ಹೋಗುವುದು ಎಲ್ಲಿ ಕ್ರಿಕೆಟ್ ಮ್ಯಾಚ್ ಫುಟ್‌ಬಾಲ್ ಮ್ಯಾಚ್ ಎಂಬುದನ್ನು ಬಿಟ್ಟರೆ ಬೇರೆ ಆಲೋಚನೆಯೇ ತಲೆಯಲ್ಲಿ ಇರುತ್ತಿರಲಿಲ್ಲ. ಇತ್ತೀಚೆಗೆ ಅವನಿಗೆ ಕಾರಿನ ಗೀಳು ಹತ್ತಿಸಿದ ಸ್ನೇಹಿತರಿಂದಾಗಿ ಅವನು ಹೊಸ ಕಾರ್ ಕೊಳ್ಳುವ ಆಲೋಚನೆಯಲ್ಲಿದ್ದ ಅದರ ಇ.ಎಂ.ಐ. ಎಲ್ಲ ವಿಚಾರಿಸಿ ತನಗೆ ಹೊಂದುವ ಕಾರ್ ಒಂದನ್ನು ಸೆಲೆಕ್ಟ್ ಮಾಡಿದ್ದ ಅವನು ಇನ್ನೇನು ಅದಕ್ಕೆ ಅಡ್ವಾನ್ಸ್ ಕೊಡಲು ಸಂಜೆ ಹೋಗಬೇಕಾಗಿತ್ತು. ಹೀಗೆ ರಂಗು ರಂಗಿನ ಬದುಕಿನೊಂದಿಗೆ ಖುಷಿಯಾಗಿ ಓಡಾಡಿಕೊಂಡು ಇದೇ ಯೋಚನೆಯಲ್ಲಿ ವಾಕ್ ಮಾಡುತ್ತಿದ್ದ ಅವನ ಎದುರು ದುತ್ತೆಂದು ಬೈರಾಗಿ ಒಬ್ಬ ಬಂದು ನಿಂತ. ಕಣ್ಣಿಗೆ ರಾಚುವಂತೆ ವಿಭೂತಿ, ಕುಂಕುಮ ಧರಿಸಿ ಅಘೋರಿಯಂತೆ ಕಾಣಿಸುತ್ತಿದ್ದ ಅವನು ತೀಕ್ಷ್ಣವಾದ ಸುಡುವಂಥ ಕಣ್ಣುಗಳಿಂದ ವಿಜಯನನ್ನು ನೋಡುತ್ತಾ ನಿಂತ. ಅವನನ್ನು ಕಂಡು ವಿಜಯ್ ಒಂದು ಕ್ಷಣ ಬೆಚ್ಚಿದನು. ಕೂಡಲೇ ಚೇತರಿಸಿಕೊಂಡು ಬೈರಾಗಿ ಪಕ್ಕದಲ್ಲಿ ನುಸುಳಿ ಹೋಗಲು ಪ್ರಯತ್ನಿಸಿದ. ಅವನಿಗೆ ಬೈರಾಗಿಯ ಕೈ ತಡೆಯಿತು. ಥತ್ ಇವನದೊಂದು ಕಿರಿ ಕಿರಿ ಎಂದು ಜೇಬಿಗೆ ಕೈಹಾಕಿ ತಕ್ಷಣಕ್ಕೆ ಸಿಕ್ಕಿದ ನೂರರ ನೋಟೊಂದನ್ನು ಅವನತ್ತ ತೂರಿ ಮುಂದೆ ಹೆಜ್ಜೆ ಹಾಕಿದ. ಮತ್ತೆರಡು ನಿಮಿಷದಲ್ಲಿ ಅದೇ ಬೈರಾಗಿ ನೋಡು ಮಗು ನೀನು ಕೈ ಬಿಚ್ಚಿ ನೂರು ರೂಪಾಯಿ ಕೊಟ್ಟಿದ್ದೀಯ ಅದಕ್ಕೆ ನಿನ್ನ ಕೋರಿಕೆಯೇನಾದರೂ ತೀರಿಸಬೇಕು ಎನ್ನಿಸಿತು. ಅದಕ್ಕೆ ಮತ್ತೆ ಬಂದೆ ಹೇಳು ನಿಂಗೇನಾದರೂ ಕೆಲಸ ಆಗಬೇಕೆಂದಿದ್ದರೆ ನಾನು ಮಾಡಿಸುತ್ತೇನೆ ಎಂದ. ಕೂಡಲೇ ಗಹಗಹಿಸಿ ನಕ್ಕ ವಿಜಯ್ ಅಲ್ಲ ನೀನೇ ಒಬ್ಬ ತಿರುಪೆ ಎತ್ತೋ ಬೈರಾಗಿ ನೀನು ನಂಗೇನು ಕೊಡ್ತೀಯಪ್ಪ ಹೆಚ್ಚೆಂದರೆ ನಿನ್ನ ಹರಿದ ಜೋಳಿಗೆ ಇಲ್ಲ ಕಿತ್ತು ಹೋಗಿರೋ ಈ ನಿನ್ನ ಚೊಂಬು, ಇವೆಲ್ಲ ಅಂತೂ ನನಗೆ ಬೇಡ ಹಾಗಾಗಿ ಮರ್ಯಾದೆಯಾಗಿ ಕೊಟ್ಟ ನೂರರಲ್ಲಿ ಏನಾದರೂ ತಿಂದು ಯಾವುದಾದರೂ ಮೂಲೆ ಸೇರಿಕೋ, ಇಲ್ಲ ಅಂದರೇ ಅದನ್ನೂ ಕಿತ್ತುಕೊಂಡೇನು ಹುಷಾರ್! ಇವನ ಬೆದರಿಕೆಗೆ ಮಣಿಯದ ಬೈರಾಗಿ ಆಯಿತು ಮಗು ನಿಂಗೆ ನಂಬಿಕೆ ಇಲ್ಲದಿದ್ದರೂ ಪರವಾಗಿಲ್ಲ ನನಗೆ ನನ್ನ ದೈವದಿಂದ ನಿಂಗೆ ಒಂದು ಸಹಾಯ ಮಾಡಲು ಅಪ್ಪಣೆಯಾಗಿದೆ. ನೀನು ಕೇಳದಿದ್ದರೂ ನಾನೇ ನಿನಗೊಂದು ವಿಶೇಷ ಶಕ್ತಿ ಕೊಡುತ್ತೇನೆ ಅದರಿಂದ ಇನ್ನು ಮುಂದಿನ ಐದು ನಿಮಿಷದಲ್ಲಿ ಇಪ್ಪತ್ತು ವರ್ಷದ ಹಿಂದೆ ತೀರಿಕೊಂಡ ನಿನ್ನ ಅಪ್ಪ ನಿನ್ನ ಮುಂದೆ ಪ್ರತ್ಯಕ್ಷ ಆಗಿ ನಿನ್ನೊಂದಿಗೆ ಹತ್ತುನಿಮಿಷ ಇರುತ್ತಾರೆ. ಅವರೊಂದಿಗೆ ನೀನು ಏನು ಬೇಕಾದರೂ ಮಾತನಾಡಬಹುದು, ನಾನು ಹೊರಟೆ ಎಂದ. ಬೈರಾಗಿಯನ್ನು ತಡೆದು ನಿಲ್ಲಿಸಿದ ವಿಜಯ್ ಆಶ್ಚರ್ಯದಿಂದ ಅಲ್ಲ ಇಪ್ಪತ್ತು ವರ್ಷದ ಹಿಂದೆ ನನ್ನ ತಂದೆ ತೀರಿಕೊಂಡ್ರು ಎಂದು ನಿನಗೆ ಹೇಗೆ ಗೊತ್ತಾಯ್ತು? ನಿಜವಾಗಿ ಈಗ ನೀನು ಹೇಳಿದ್ದೆಲ್ಲ ಆಗುತ್ತಾ ಎಂದು ಬೆರಗುಗಣ್ಣಿನಿಂದ ಕೇಳಿದ. ಹೌದಪ್ಪ ನಿನ್ನಷ್ಟೆ ಸತ್ಯ. ಎಲ್ಲಿ ಒಂದು ಕ್ಷಣ ಆ ಉರಿಯುವ ಸೂರ್ಯನ ಕಡೆ ನೋಡು ಎಂದ. ಅದರಲ್ಲೇನು ವಿಶೇಷ ಎಂದು ಅತ್ತ ತಿರುಗಿ ಮತ್ತೆ ಇತ್ತ ತಿರುಗುವಷ್ಟರಲ್ಲಿ ಬೈರಾಗಿ ನಾಪತ್ತೆ. ಹುಂ ಯಾರೋ ಹುಚ್ಚ ಇರಬೇಕು. ನಾನು ಅವನ ಮಾತು ಕೇಳುತ್ತ ಟೈಮ್ ವೇಸ್ಟ್ ಮಾಡಿದೆ ಎಂದು ಹೆಜ್ಜೆ ಹಾಕಿದ ವಿಜಯ್. ಮತ್ತೆರಡು ನಿಮಿಷದಲ್ಲಿ ಅವನನ್ನು ಮರೆತೇ ಬಿಟ್ಟ. ಪುನಃ ಸಿಗರೇಟ್ ಸುರುಳಿಯೊಂದಿಗೆ ಕಾರಿನ ಬಗ್ಗೆ ಕನಸು ಕಾಣಲಾರಂಭಿಸಿದ. ಅವನನ್ನು ಪಕ್ಕದಲ್ಲೇ ಗೊರ ಗೊರ ಕೆಮ್ಮೊಂದು ಈ ಲೋಕಕ್ಕೆ ಮರಳಿ ತಂದಿತು. ಯಾರೆಂದು ನೋಡಿದಾಗ ಅವನೊಂದಿಗೆ ಹೆಜ್ಜೆ ಹಾಕುತ್ತಿದ್ದ ಸುಮಾರು 25ರ ಪ್ರಾಯದ ವ್ಯಕ್ತಿ ಅವನನ್ನೇ ನೋಡಿ ಮುಗುಳ್ನಕ್ಕಿದ. ಇವನನ್ನು ಎಲ್ಲೋ ನೋಡಿದೆನಲ್ಲ ಎಂದು ಯೋಚಿಸುತ್ತಿದ್ದಾಗ ತಮ್ಮ ಮನೆಯಲ್ಲಿ ನೇತುಹಾಕಿದ್ದ, ಕೂದಲನ್ನು ನೀಟಾಗಿ ಹಿಂದೆ ಬಾಚಿ ಮುಗುಳ್ನಗು ಅವನ ಅಪ್ಪನ ಫೋಟೋ ನೆನಪಿಗೆ ಬಂತು. ಹಾಗಾದರೆ ಇದು ಎಂದು ಮತ್ತೆ ಅವನತ್ತ ನೋಡಿದಾಗ ಅದೇ ನಗುವಿನೊಂದಿಗೆ ಹೌದು ಮಗು ಅದು ನಾನೇ ನಿನ್ನ ಅಪ್ಪ ಎಂದಾಕ್ಷಣ ಇವನಿಗೆ ಮೈಯೆಲ್ಲಾ ಅದುರಿದಂತಾಯ್ತು. ಅಲ್ಲ ಇದು ಸತ್ಯವೇ ಎಂದು ಚಿವುಟಿ ನೋಡಿಕೊಂಡ ಅವನು. ಇದು ನಿಜ ಎಂದು ಗೊತ್ತಾಗಿ ಕಣ್ಣು ತುಂಬಾ ನೀಡು ತುಂಬಿಕೊಂಡು ಅಪ್ಪ ಎಂದ . . . ಅಷ್ಟೇ. ಮುಂದೆ ಮಾತನಾಡಲು ಧ್ವನಿ ಹೊರಡಲಿಲ್ಲ. ಹಾ, ಮಗು ನಾನೇ. ಹೆಚ್ಚು ಉದ್ವೇಗಕ್ಕೆ ಒಳಗಾಗುವ ಅಗತ್ಯವಿಲ್ಲ ಯಾಕೆಂದರೆ ನಾನು ನಿನ್ನೊಂದಿಗಿರುವುದು ಹತ್ತು ನಿಮಿಷ ಮಾತ್ರ. ಏನಾದರೂ ಕೇಳಬೇಕೆಂದಿದ್ದರೆ ಕೇಳು ಎಂದಾಕ್ಷಣ ಇವನಿಗೆ ಮೈಯೆಲ್ಲಾ ಪುಳಕವಾಗಿ ಅಪ್ಪ ನೀವೀಗ ಎಲ್ಲಿದ್ದೀರಿ ಅಲ್ಲಿ ಯಾರೆಲ್ಲ ಇದ್ದಾರೆ ಎಂದೆಲ್ಲಾ ಶುರು ಮಾಡಿದ. ನೋಡು ಮಗು ನನ್ನ ಈಗಿನ ಬಗ್ಗೆ ನೀನು ಏನೇ ಪ್ರಶ್ನೆ ಕೇಳಿದರೂ ಅದಕ್ಕುತ್ತರ ನನ್ನ ಮೌನ ಅಷ್ಟೇ. ಅದನ್ನು ಬಿಟ್ಟು ಬೇರೆ ಏನಾದರೂ ಕೇಳುವ ಆಸೆ ಇದ್ದರೆ ಕೇಳು. ಕೂಡಲೇ ಅವನಿಗೆ ನಿನ್ನೆಯಷ್ಟೇ ಸ್ನೇಹಿತರೆಲ್ಲ ಅವರವರ ತಂದೆಯ ಬಗ್ಗೆ ಚರ್ಚೆ ಮಾಡಿದ್ದು ನೆನಪಿಗೆ ಬಂದಿತ್ತು. ಎಲ್ಲರೂ ನಮ್ಮ ಅಪ್ಪ ನನಗೆ ಚಿಕ್ಕವನಿದ್ದಾಗ ಪ್ಲೇ ಸ್ಟೇಷನ್ ಕೊಡಿಸಿದ್ದರು, ಸೈಕಲ್, ಮೋಟಾರ್ ಸೈಕಲ್ ಎಂದೆಲ್ಲಾ ಮಾತನಾಡಿದರೆ ಇವನ ಬಳಿ ಅಂತಹ ನೆನಪುಗಳು ಯಾವುದೂ ಇರಲಿಲ್ಲ. ಅವನಿಗೆ ಅಪ್ಪ ಎಂದರೆ ನೆನಪಾಗುವುದು ಒಂದೇ ಮೂರು ಹೊತ್ತು ತನಗೆ ದನಕ್ಕೆ ಬಡಿಯುವಂತೆ ಹೊಡೆಯುತ್ತಿದ್ದುದು. ಅದೇ ಮತ್ತೆ ನೆನಪಿಸಿಕೊಂಡು ಸಿಟ್ಟಿನಿಂದ ಅಲ್ಲಪ್ಪ ನೀವು ನನಗೆ ಎಷ್ಟೊಂದು ಹೊಡೆಯುತ್ತಿದ್ದೀರಿ ಮಾತು ಮಾತಿಗೆ ಕಿವಿ ಹಿಂಡುವುದೇನು, ತಲೆಯನ್ನು ತೆಂಗಿನಕಾಯಿ ಚಿಪ್ಪು ಒಡೆಯುವಂತೆ ಗೋಡೆಗೆ ಬಡಿಯುತ್ತಿದ್ದೀರಿ ಯಾಕೆ ಅಷ್ಟೊಂದು ಹಿಂಸೆ ನೀಡುತ್ತಿದ್ದೀರಿ ಹೇಳಿ ಎಂದ. ಮಗು ನಾನು ಅವತ್ತು ಅಷ್ಟು ಶಿಸ್ತಿನಿಂದ ನಿನ್ನನ್ನು ಬೆಳೆಸದಿದ್ದರೆ ನೀನು ಇಂದು ಈ ಮಟ್ಟದಲ್ಲಿ ಇರುತ್ತಿದೆಯಾ ಯೋಚಿಸು ಎಂದಾಗ ವಿಜಯನಿಗೆ ಅದೂ ಹೌದೆಂದೆನಿಸಿತು. ಮತ್ತೇನೂ ಕೇಳಲು ನೆನಪಿಗೆ ಬಾರದೇ ಹೇಳದೆ ಅಪ್ಪ ನೀನು ನಾನು ಹೀಗೆ ವಾಕಿಂಗ್ ಹೋಗುವ ಹಾಗೆ ಹೋಗುತ್ತಿದೆಯಾ ಎಂದು ಕೇಳಿದ ಅದಕ್ಕೆ ಅವನನ್ನೇ ಅತೀ ನೋವಿನಿಂದ ನೋಡಿದ ಅವರಪ್ಪ, ಮಗು ನನಗೆ ಅಂತ ಭಾಗ್ಯ ಇರಲಿಲ್ಲ ನಾನು ಮತ್ತು ನಿನ್ನ ಅಮ್ಮ ಸೂರ್ಯ ಹುಟ್ಟಿದಾಗಿನಿಂದ ಹಿಡಿದು ರಾತ್ರಿಯವರೆಗೆ ನಮ್ಮ ಪುಟ್ಟ ಹೋಟೆಲ್‌ನಲ್ಲಿ ದುಡಿದರೆ ನಾಕು ಕಾಸು ಬಂದು ದಿನ ನಿತ್ಯ ಖರ್ಚಿಗಾಗುತ್ತಿತ್ತು. ವಾಕಿಂಗ್ ಹೋಗುವುದೆಲ್ಲ ಒಂದು ಕನಸಾಗಿತ್ತು. ಆ ರಾತ್ರಿ ಹತ್ತು ಘಂಟೆಯ ವೇಳೆಗೆ ನಾನು ನಿಮ್ಮಮ್ಮ ಆಗಾಗ ಅಪರೂಪಕ್ಕೆ ಒಂದು ರೌಂಡ್ ತಿರುಗಾಡುತ್ತಿದ್ದೆವು ಎಂದಾಗ ಹೊ ಹೊ ರೋಮ್ಯಾಂಟಿಕ್ ಮೂಡ್ನಲ್ಲಿ ಅಲ್ವೇ ಎಂದು ಕಿಸಕ್ಕನೆ ನಕ್ಕ ವಿಜಯ್ ಅಪ್ಪನ ಮುಖ ನೋಡಿದ. ಹುಂ ನಿನ್ನಂತ ಹುಡುಗರೆಲ್ಲ ಹಾಗೆ ಅಂದುಕೊಳ್ಳಬಹುದು. ಆದರೆ ನಾವು ಮಾತನಾಡುತ್ತಿದ್ದುದೆಲ್ಲ ಅಂದು ಉಳಿದ ನಾಕು ಕಾಸಿನ ಬಗ್ಗೆ ಮೂರು ವರುಷದವನಿದ್ದ ನಿನಗೆ ಹರಿದ ಅಂಗಿಯನ್ನು ಬಿಟ್ಟು ಹೊಸದೊಂದು ಕಾಟನ್ ಅಂಗಿ ಕೊಡಿಸುವುದು ಮುಂದೆ ನಮಗಾಗಿ ಒಂದು ಪುಟ್ಟ ಮನೆ ಅದಕ್ಕೆ ದುಡ್ಡು



ಹೊಂದಿಸುವುದು ಹೀಗೆ ನಮ್ಮ ಅಲೋಚನೆಯಲ್ಲ ಹೆಚ್ಚು ಕಡಿಮೆ ನಿನ್ನ ಬಗ್ಗೆ ನಿನ್ನ ಮುಂದಿನ ಭವಿಷ್ಯದ ಬಗ್ಗೆಗೆ ಇತ್ತು. ಮುಂದಿನ ಮೂರ್ನಾಲ್ಕು ವರ್ಷದಲ್ಲಿ ನಾವಿಬ್ಬರೂ ನಮ್ಮ ಎಲ್ಲ ಆಸೆಗಳನ್ನೂ ಬದಿಗೊತ್ತಿ ಪೈ ಪೈ ಸೇರಿ ಒಂದು ಚಿಕ್ಕ ಮನೆ ಮಾಡಿದೆವು. ಆ ಸಮಯದಲ್ಲಿ ನಾನಾಗಲಿ ನಿನ್ನ ಅಮ್ಮನಾಗಲಿ ಬಹಳ ಕಷ್ಟಪಟ್ಟೆವು. ನನ್ನ ವಿಷಯ ಹಾಗಿರಲಿ ಇನ್ನು ಹೆಚ್ಚಿಗೆ ಸಮಯ ಉಳಿದಿಲ್ಲ. ನಿನ್ನ ಬಗ್ಗೆ ಹೇಳು ನಿನ್ನ ಜೀವನ ಹೇಗಿದೆ ಚೆನ್ನಾಗಿದೆಯಾ ಎನ್ನುತ್ತಿದ್ದಂತೆಯೇ ಎದೆಯುಬ್ಬಿಸಿ ವಿಜಯ್ ಹೇಳತೊಡಗಿದ ಅಪ್ಪ ನಿಮ್ಮ ಮಗ ಈಗ ಕಾರ್ ತೆಗೆದುಕೊಳ್ಳುತ್ತಿದ್ದಾನೆ. ಅಲ್ಲದೆ ನಾನಂತೂ ವೀಕ್ ಎಂಡ್ ಪಾರ್ಟಿ ಸಿನಿಮಾ ಎನ್ನುತ್ತಾ ಬಹಳ ಮಜವಾಗಿ ಇದ್ದೇನೆ ಎಂದು ಹೇಳಿದ. ಹೂ ಹೌದಪ್ಪ ಸಣ್ಣಗೆ ಬರುತ್ತಿರುವ ನಿನ್ನ ಹೊಟ್ಟೆ ನೋಡಿದರೆ ಗೊತ್ತಾಗುತ್ತದೆ, ಅದಿರಲಿ ಊರಿನಲ್ಲಿ ಇರುವ ತಾಯಿ ತಂಗಿಗೆ ಏನಾದರೂ ವ್ಯವಸ್ಥೆ ಮಾಡಿದ್ದೀಯಾ ಎನ್ನುತ್ತಿದ್ದಂತೆಯೇ ಅದಕ್ಕೇನು ಚಿಂತೆ ಇಲ್ಲಪ್ಪ ತಿಂಗಳಿಗೆ ನಾನು ಐದು ಸಾವಿರ ಕಳಿಸುತ್ತಿದ್ದೇನೆ ಎಂದು ಹೆಮ್ಮೆಯಿಂದ ಹೇಳಿದ. ಹೌದೇ ಮಗು ಬಹಳ ಸಂತೋಷ ಹೀಗೆ ಕೇಳುತ್ತೆಂದು ತಪ್ಪು ತಿಳಿಯಬೇಡ ನೀನು ದಿನಕ್ಕೆ ಎಷ್ಟು ಸಿಗರೇಟ್ ಸೇದುತ್ತೀಯಾ, ಒಂದು ಪ್ಯಾಕ್ ಅಪ್ಪ, ಅದರ ಬೆಲೆ ಎಂದಾಗ ನೂರು ರೂಪಾಯಿ ಎಂದ. ಅವನ ಮಾತಿಗೆ ಅಂದರೆ ತಿಂಗಳಿಗೆ ಮೂರು ಸಾವಿರ, ಹೋಟೆಲ್ ಖರ್ಚು ಎಂದಾಗ ಏನು ವಾರಕ್ಕೆ ಎರಡು ಸಾವಿರ ಎಂದ ವಿಜಯ್. ಮತ್ತೆ ಬಾರ್, ಕ್ರಿಕೆಟ್, ಫುಟ್‌ಬಾಲ್ ಮ್ಯಾಚ್ ಎನ್ನುತ್ತಿದ್ದಾಗ ಮಧ್ಯದಲ್ಲೆ ತಡೆದ ವಿಜಯ್ ನೋಡಪ್ಪ ಸುತ್ತಿ ಬಳಸಿ ಯಾಕೆ ಕೇಳ್ತಿಯಾ ನನ್ನ ಮನೆ ಬಾಡಿಗೆ ಬಿಟ್ಟು ನನ್ನ ತಿಂಗಳ ಖರ್ಚು ಮೂವತ್ತು ಸಾವಿರ ಅಂದ. ಅಲ್ಲ ಮಗು ನಿಂಗೆ ಒಬ್ಬನಿಗೆ ಅಷ್ಟೊಂದು ಖರ್ಚಾದರೆ ನಿನ್ನ ಅಮ್ಮ ತಂಗಿ ಇಬ್ಬರೂ ಸೇರಿ ಐದು ಸಾವಿರ ಸಾಕೆ ಹೇಳು ಎಂದ. ಅಪ್ಪನ ಮಾತು ಅವನಿಗೆ ಕಪಾಳಕ್ಕೆ ಭಾರಿಸಿದಂತಾಯಿತು. ಆದರೂ ಸೈರಿಸಿಕೊಂಡ ವಿಜಯ್, ಅಪ್ಪ ನಾನು ಸಂಪಾದಿಸೋದು ನಾನೇ ಅನುಭವಿಸೋದರಲ್ಲಿ ತಪ್ಪೇನಿದೆ ಎಂದ. ತಪ್ಪೇನಿಲ್ಲಪ್ಪ ಆದರೆ ನಿನ್ನ ಅಮ್ಮನ ಬಳಿ ಎಷ್ಟು ಸೀರೆ ಇದೆ ಎಂದು ಯಾವಾಗಲಾದರೂ ನೋಡಿದ್ದೀಯಾ, ಅವಳು ಹೊಸ ಸೀರೆ ಉಟ್ಟು ವರುಷಗಳಾದವು ಪಾಪ. ಮನೆ ಕಟ್ಟುವುದಕ್ಕೆ ಅಂತ ಪೈ ಪೈ ಸೇರಿಸುವಾಗ ಈಗಿನ ನಿನ್ನ ಪ್ರಾಯದವಳೇ ಆದ ಅವಳು ತನ್ನ ಒಡವೆ ವಸ್ತ್ರ ಆಸೆಯನ್ನೆಲ್ಲ ಬದಿಗೊತ್ತಿ ಗಾಣದೆತ್ತು ದುಡಿದರೆಂತೆ ದುಡಿದಂತೆ ದುಡಿದ್ದಕ್ಕೆ ಒಂದು ಮನೆಯಾಯಿತು. ನೆರೆ ಹೊರೆಯವರೆಲ್ಲ ಹಬ್ಬ ಹರಿದಿನದಂದು ಹೊಸ ಬಟ್ಟೆ ಧರಿಸಿ ಸಂಭ್ರಮಿಸುವುದನ್ನು ನೋಡಿ ಅವಳು ಹತಾಶಳಾಗಿ ಕುಳಿತಾಗಲೆಲ್ಲ, ನಾನೇ ಅವಳಿಗೆ ಸಮಾಧಾನ ಹೇಳುತ್ತಿದ್ದೆ. ನೋಡು ಈ ಮನೆಯೊಂದಾಗಲಿ ಆಮೇಲೆ ನಿನಗೆ ಬೇಕಾದನ್ನು ಕೊಡಿಸುತ್ತೇನೆ. ಆದರೆ ಅವಳ ದುರಾದೃಷ್ಟಕ್ಕೆ ಮನೆ ಕಟ್ಟಿ ವರುಷದಲ್ಲೇ ನಾನೇ ಹೋಗಿಬಿಟ್ಟೆ. ಸೀರೆ ಇರಲಿ ಅವಳು ಯಾವಾ ಪ್ರವಾಸ ತಾಣಕ್ಕೋ ಹೋಗಿಲ್ಲ, ಸುತ್ತಿಲ್ಲ, ಯಾವತ್ತಾದರೂ ಅವಳನ್ನು ಒಂದು ತೀರ್ಥ ಕ್ಷೇತ್ರಕ್ಕೆ ಪ್ರವಾಸ ತಾಣಕ್ಕೂ ಕರೆದುಕೊಂಡು ಹೋಗಬೇಕೆಂದು ಎಂದು ನಿನಗನ್ನಿಸಲಿಲ್ಲವೇ ನಿನ್ನ ಪ್ರಾಯದಲ್ಲೇನಾದರೂ ಅವಳೇನಾದರೂ ಅವಳ ಸುಖ ನೋಡಿಕೊಂಡಿದ್ದರೆ ಇರಲಿಕ್ಕೆ ಒಂದು ಮನೆಯು ಇಲ್ಲದೆ ನೀನು ಓದು ಆಗದೆ ಸಣ್ಣ ಪುಟ್ಟ ಕೆಲಸ ಮಾಡಿಕೊಂಡು ಕೊಳೆಯಬೇಕಿತ್ತು ಗೊತ್ತಾ ಅಂದಾಗ ವಿಜಯನಿಗೆ, ಯಾರೋ ಸುತ್ತಿಗೆಯಿಂದ ತಲೆಗೆ ಬಾರಿಸಿದಂತಾಯಿತು, ಛೇ, ಹೌದಲ್ಲ ನಾನ್ಯಾಕೆ ಇಷ್ಟು ದಿನ ಯೋಚಿಸಲಿಲ್ಲ ಎನಿಸಿ ತುಂಬಾ ನಾಚಿಕೆಯಾಯಿತು. ಅಲ್ಲ ಮಗು ಬದುಕೆಲ್ಲ ನಿನಗಾಗಿ ಕಷ್ಟಪಟ್ಟ ಅವಳನ್ನು ಈಗಲಾದರೂ ಸುಖವಾಗಿಡುವ ಜವಾಬ್ದಾರಿ ನಿನ್ನದಲ್ಲವೇ ಎಂದು ಅಪ್ಪ ಹೇಳಿದಾಗ ವಿಜಯನಿಗೆ ಅಳುವೇ ಬಂದಿತು. ಕಣ್ಣು ತುಂಬಿ ಬಂದು ಇಲ್ಲಪ್ಪ ಖಂಡಿತ ಇನ್ನು ಅವಳನ್ನು ದೇವತೆಯಂತೆ ನೋಡಿಕೊಳ್ಳುತ್ತೇನೆ. ಅವಳಿಗೆ ಯಾವುದೇ ಕೊರತೆ ಬರದಂತೆ ಅವಳನ್ನು ನೋಡುವ ಸಂಪೂರ್ಣ ಹೊಣೆ ನನ್ನದು ಎಂದು ಹೇಳಿದ. ಕಣ್ಣಿನಲ್ಲಿ ತುಂಬಿಕೊಂಡ ನೀರಿನಿಂದಾಗಿ ದೃಷ್ಟಿ ಮಂಜು ಮಂಜಾಗಿ ಅವನು ಕಣ್ಣೊರೆಸಿಕೊಂಡು ನೋಡುವಷ್ಟರಲ್ಲಿ ಬೈರಾಗಿ ಹೇಳಿದ ಸಮಯ ಮುಗಿದು ಹೋಗಿ ಅವನಪ್ಪ ಮಾಯವಾಗಿ ಆಗಿತ್ತು.

ಇದು ನಿಜವೋ ಭ್ರಮೆಯೋ ಅವನಿಗರ್ಥವಾಗಲಿಲ್ಲ, ಆದರೆ ಮಾತನಾಡಿದ್ದೆಲ್ಲ ನೆನಪಿನಲ್ಲೇ ಇದ್ದುದರಿಂದ ಕೂಡಲೇ ತಡ ಮಾಡದೆ ಪರಿಚಯದ ಟ್ರಾವೆಲ್ ಏಜೆಂಟ್‌ಗೆ ಫೋನ್ ಮಾಡಿ ಆದಷ್ಟು ಹತ್ತಿರದ ತಾರೀಕಿನಲ್ಲಿ ಹತ್ತು ದಿನದ ದಕ್ಷಿಣ ಭಾರತ ಟ್ರಿಪ್ ಒಂದಕ್ಕೆ ಮೂರು ಸೀಟ್ ಬುಕ್ ಮಾಡಲು ಹೇಳಿ ನಿರಾಳವಾದ ಮನಸ್ಸಿನಿಂದ ಆಫೀಸ್ ಸೇರಿದ.

ಇವನು ಆಫೀಸಿಗೆ ಬರುತ್ತಿದ್ದಂತೆಯೇ ಇವನ ಸಹೋದ್ಯೋಗಿ, ಅಯ್ಯೋ ಎಲ್ಲಿ ಹೋಗಿದ್ದೆಯಲ್ಲೋ ಮಾರಾಯ ಆಗಿನಿಂದ ಐದಾರು ಸಲ ಲ್ಯಾಂಡ್ ಲೈನಿನಲ್ಲಿ ನಿಂಗೆ ಕರೆ ಬಂದಿದೆ. ಯಾವುದೋ ಅರ್ಜೆಂಟ್ ಕರೆ ಇರಬೇಕು ಮತ್ತೆ ಬರಬಹುದು ನೋಡು ಎಂದ. ಎರಡೇ ನಿಮಿಷದಲ್ಲೇ ಮತ್ತೊಮ್ಮೆ ರಿಂಗಾದಾಗ ತೆಗೆದುಕೊಂಡ ವಿಜಯ್ ಅದು ತಂಗಿಯ ಕರೆ ಎಂದು ಗೊತ್ತಾಗಿ ಅವಳು ಅಣ್ಣ. . . ಎಂದು ಹೇಳುವುದನ್ನು ತುಂಡರಿಸಿ ತನ್ನದೇ ಸಂಭ್ರಮದಿಂದ ಮೀನಾ ನಿಂಗೊಂದು ಸಿಹಿ ಸುದ್ದಿ ನಾನು ನಿನಗೆ ಅಮ್ಮನಿಗೆ ದಕ್ಷಿಣ ಭಾರತ ಪ್ರವಾಸ ಟಿಕೆಟ್ ತೆಗೆದಿದ್ದೀನಿ ಅಲ್ಲದೆ ನಾಳೆಯೇ ನಿನಗೆ ಮತ್ತು ಅಮ್ಮನಿಗೆ ಹೊಸ ಬಟ್ಟೆ ಎಲ್ಲ ತೆಗೆದುಕೊಂಡು ಬರುತ್ತಿದ್ದೀನಿ... ಅವನ ಮಾತು ಮುಗಿಯುವ ಮುಂಚೆಯೇ ಆ ಬದಿಯಿಂದ ಜೋರಾಗಿ ಅಳುವ ಶಬ್ದ ಕೇಳಿ ಯಾಕೆ ಏನಾಯ್ತು ಮೀನಾ ಎಂದಾಗ ಬಿಕ್ಕುತ್ತಲೇ ಅವಳ ಅವಳು ಅಣ್ಣ ಈಗ ಅರ್ಧ ಗಂಟೆ ಹಿಂದೆ ಎದೆನೋವು ಅಂತ ಮಲಗಿದ ಅಮ್ಮ ಹಾಗೆ ನಮ್ಮನ್ನೆಲ್ಲ ಬಿಟ್ಟು ಹೋಗಿಬಿಟ್ರಣ್ಣ... ಮುಂದಿನದು ಕೇಳಲಾಗದೆ ಧಡಾರನೆ ಚೇರಿನಲ್ಲಿ ಕುಸಿದುಬಿದ್ದ ಅವನ ಮುಂದೆ ಹಾದು ಹೋಗಿದ್ದು ನೋವು ತುಂಬಿದ ಅಪ್ಪನ ಮುಖ. ಒಮ್ಮೆಲೇ ಅವನಿಗೆ ಅವನ ಹೊಸ ಕಾರು, ಮೋಜಿನ ಜೀವನ ಎಲ್ಲ ಮುದುರಿದ ಕಾಗದದ ಹೂವಿನಂತೆ ಭಾಸವಾಯ್ತು. ಅ

***ಶೈಲೇಂದ್ರ ರಾವ್, ನೋಯ್ಡಾ.***

# ಸ್ನೇಹ ಅಜರಾಮರ



ಸ್ನೇಹ ಬಹಳ ಮಧುರ, ಸ್ನೇಹಿತೆ ಮನದಂತರಾಳ ಸುಖ ದುಃಖಗಳಿಗೆ ಸ್ಪಂದಿಸುವ ಬಳ್ಳಿ ಮುಗಿಲೆತ್ತರಕ್ಕೆ ಹಬ್ಬಿ ಕಂಪನು ಸೂಸುತ್ತಾ ಬರಸೆಳೆಯುತ್ತಿರುತ್ತದೆ. ಸರಳಾರ್ಥದಲೆಲಿ ನಿರಂತರವಾಗಿ ಆರೋಗ್ಯಕರ ಸಿಹಿ ಉಣಿಸುವ ನಳಮಹಾರಾಜ.

ಸಿಹಿ ಹೆಚ್ಚಾದಾಗ ಮದ್ದನ್ನು ಕೊಡುವ ವೈದ್ಯ ತಪ್ಪು ಹೆಜ್ಜೆ ಇಡುವ ಸಂದರ್ಭದಲ್ಲಿ ಎಚ್ಚರಿಸುವ ಹಾಗು ಸರಿ ಮಾರ್ಗದರ್ಶನ ನೀಡುವ ಮಾರ್ಗದರ್ಶಕ. ಸಂಬಂಧಗಳನ್ನು ಖಾಯಂ ಉಳಿಸಿಕೊಳ್ಳಲು ಹೋರಾಡುವ ಯೋಧ ಹೀಗೆ ಹೇಳುತ್ತಾ ಹೋದಲ್ಲಿ ಪ್ರತಿ ಹಂತದಲ್ಲಿಯೂ ನಡೆಗೆ ನಡೆಯಾಗಿ ನುಡಿಗೆ ನುಡಿಯಾಗಿ ಪ್ರತಿ ಧ್ವನಿಸುವ ಒಬ್ಬ ವಿಶೇಷ ವ್ಯಕ್ತಿ, ದೇವರ ಮಂದ ಸ್ಮೃತಿಯಲ್ಲಿ, ಸಂತಸದ ಸಮಯದಲಿ ಸೃಷ್ಟಿಯಾದದ್ದು ಗೆಳೆತನ. ಬದುಕಿನ ಎಲ್ಲಾ ಸಂಬಂಧಗಳು ಒಂದು ಹಂತದಲ್ಲಿ ಬೇಸರಿಕೆ ಉಂಟಾಗಬಹುದು, ಆದರೆ ಸ್ನೇಹದಲ್ಲಿ ಎಂದಿಗೂ ಸಾಧ್ಯವಿಲ್ಲ. ನಮ್ಮ ಅಭಿವ್ಯಕ್ತಿಯಾಗುವುದು ಕೇವಲ ಸ್ನೇಹದಲ್ಲಿ ಮಾತ್ರ. ಸ್ನೇಹ ಸಂಜೀವಿನಿಯಿದ್ದ ಹಾಗೆ ಕೆಡಕೆಂದೂ ಉಂಟಾಗದು ಅಮೃತವನ್ನು ನೀಡುವ ಅಕ್ಷಯ ಪಾತ್ರೆ, ಹತ್ತಿರವಿರಲಿ, ದೂರವಿರಲಿ ಸ್ನೇಹ ಅಜರಾಮರ, ಸ್ನೇಹಕ್ಕೆ ಸಾವಿಲ್ಲ, ಕೇವಲ ಈ ಒಂದು ಭಾಂದವ್ಯ ಮಾತ್ರ ಜಗತ್ತಿನ್ನ ಉದ್ದಗಲಕ್ಕೂ ಹಬ್ಬಿರುವ ಸರಪಳಿ, ಈ ಸ್ನೇಹ ಎಲ್ಲರೊಂದಿಗೂ ಸಧ್ಯವಾಗುವುದಿಲ್ಲ, ಕೇವಲ ಆತ್ಮೀಯತೆ, ಆಪ್ತತೆ, ಹೃದಯವಂತಿಕೆ, ಹೃದಯಸ್ಪರ್ಶಿ, ಏಕತಾ ಭವನೆ ಇಬ್ಬರಲ್ಲೂ ಉಂಟಾದಾಗ ಮಾತ್ರ ಸಾಧ್ಯವಾಗುತ್ತದೆ. ನನ್ನ ಗೆಳತಿ ಮಮತಾ ಜೀವದ ಗೆಳತಿ ನನ್ನನಗಲಿ ತಾಯ್ನಾಡಿಗೆ ಹೋಗಲಿದ್ದಾಳೆ, ನಮ್ಮ ದೇಹ ದೂರವಾದರೂ ಆತ್ಮಗಳು ದೂರಾಗದು, ಮಮತಾಳ ಮಮತೆಯ ನೆನಪು ಶಾಶ್ವತ. ಅ

***ಎಮ್.ಎಸ್. ಲಾವಣ್ಯ ಬಸವರಾಜು***



# ಗುರುಗಾಂವ್‌ನಲ್ಲಿ ಕನ್ನಡ ಕಲಿಕಾ ಕೇಂದ್ರವನ್ನು ನಿರಂತರ ನಡೆಸಲು ಸರಕಾರಕ್ಕೆ ಮನವಿ

ಗುರುಗಾಂವ್ ಕನ್ನಡ ಸಂಘವು ಸುಮಾರು ವರ್ಷಗಳಿಂದ ಕನ್ನಡ ಉಳಿಸಿ ಬೆಳೆಸುವ ಕೆಲಸ ಮಾಡುತ್ತಾ ಬರುತ್ತಿದೆ. ಅದರ ಜೊತೆಗೆ ಕನ್ನಡದ ಮಕ್ಕಳಿಗೆ ಕನ್ನಡ ಭಾಷೆ, ಕನ್ನಡದ ಅರಿವು ಮೂಡಿಸುವ ಸಲುವಾಗಿ ಗುರಗಾಂವ್ ಕನ್ನಡ ಸಂಘದ ಸಹಯೋಗ ಹಾಗು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಸಹಯೋಗದೊಂದಿಗೆ ಕನ್ನಡ ಕಲಿಕಾ ಕೇಂದ್ರವನ್ನು ಪ್ರಾರಂಭಿಸಲಾಗಿದೆ. ಕನ್ನಡ ಕಲಿಕಾ ಕೇಂದ್ರವನ್ನು ನಿರಂತರವಾಗಿ ನಡೆಸಿಕೊಂಡು ಹೋಗಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ.ಎಸ್ ಜಿ ಸಿದ್ದರಾಮಯ್ಯ, ಶ್ರೀ ಮನು ಬಳಿಗಾರ್, ಶ್ರೀ ಮುಖ್ಯಮಂತ್ರಿ ಚಂದ್ರು, ಶ್ರೀ ಬಿ.ಟಿ. ಲಲಿತಾ ನಾಯಕ್, ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಶ್ರೀ ಮುರಳೀಧರ ಅವರಿಗೆ ಗುರುಗಾಂವ್ ಕನ್ನಡ ಸಂಘದ ವತಿಯಿಂದ ಮನವಿ ಪತ್ರವನ್ನು ಸಲ್ಲಿಸಲಾಯಿತು. ಅವರು ಉತ್ತಮ ರೀತಿಯಲ್ಲಿ ಸ್ಪಂದಿಸಿ ಸಹಕಾರ ನೀಡಲು ಒಪ್ಪಿದ್ದಾರೆ. ಈ ಸಂದರ್ಭದಲ್ಲಿ ಶ್ರೀ ಎಲ್.ಪಿ. ಗಿರೀಶ್, ಉಪನಿರ್ದೇಶಕರು ವಾರ್ತಾ ಇಲಾಖೆ, ಡಾ.ಪುರುಷೋತ್ತಮ ಬಿಳಿಮಲೆ, ಮುಖ್ಯಸ್ಥರು, ಜೆ.ಎನ್.ಯು. ಕನ್ನಡ ಭಾಷಾ ಪೀಠ, ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿಗಳು ದೆಹಲಿ ಕರ್ನಾಟಕ ಸಂಘ ಮತ್ತು ಗುರ್‌ಗಾಂವ್ ಕನ್ನಡ ಸಂಘದ ಉಪಾಧ್ಯಕ್ಷ ಪ್ರಭಾಕರ್ ಮಡ್ಡಿತೋಟ, ಕಾರ್ಯದರ್ಶಿ ಕುಮಾರ್ ಸಿ., ಖಜಾಂಚಿ ಮರಿಬಸಪ್ಪ ಎಂ, ಮಾಜಿ ಕಾರ್ಯದರ್ಶಿಗಳಾದ ಶ್ರೀ ಕೃಷ್ಣಪ್ಪ ಎಂ. ಮತ್ತು ಶ್ರೀ ಸಾಬು ದರ್ಗಾ ಹಾಗೂ ಸದಸ್ಯರಾದ ಶ್ರೀ ಶಾಂತ ಕುಮಾರ್ ನಿಂಬಾಳ್ ಉಪಸ್ಥಿತಿದ್ದರು. ಅ

*ಅಭಿಮತ ವರದಿ*

## ಓದುಗರ ಪತ್ರ

# ಸಂಘದಲ್ಲಿ ಶ್ಲಾಘನೀಯ ಕೆಲಸ ನಡೆಯುತ್ತಿದೆ

ಕರ್ನಾಟಕದ ಭವ್ಯ ಪರಂಪರೆಯನ್ನು ಎತ್ತಿ ಹಿಡಿಯುವ ಹಲವಾರು ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯುತ್ತಿರುವುದು ಶ್ಲಾಘನೀಯ. ಇಂತಹ ಕಾರ್ಯಕ್ರಮಗಳ ಮೂಲಕ ನಾವು ಒಬ್ಬರನ್ನೊಬ್ಬರು ಆಗಾಗ ಭೇಟಿಯಾಗಲು ಸಹಾಯಕವಾಗುತ್ತಿವೆ.

ಸಂಘವು ಸ್ಥಳೀಯ ಹೊಸ ತಲೆಮಾರಿನ ಕನ್ನಡಿಗರಿಗೆ ಕೂಡಾ ಆಟೋಟ ಸ್ಪರ್ಧೆ, ಕಲೆ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸಂತೋಷಕರವಾಗಿದೆ.

ಕನ್ನಡಕ್ಕಾಗಿ ಹಿನ್ನೆಲೆಯಲ್ಲಿ ನಿಂತು ಕೂಡಾ ಹಲವರು ಶ್ರಮಿಸಿರುವುದನ್ನು ನೀವು ಗೌರವಿಸುತ್ತಿರುವುದು ಮೆಚ್ಚುಗೆಯ ಅಂಶವಾಗಿದೆ. ಸಂಘದ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ಸಾಗಲಿ ಎಂದು ಹಾರೈಸುತ್ತೇನೆ. ಅ

*ಬಿ.ಎಸ್. ಕಲ್ಲೂರು*



# ಜನಕಪುರಿ ಕನ್ನಡ ಕೂಟದ ರಾಜ್ಯೋತ್ಸವ ಮತ್ತು ಆಟೋಟ ಕಾರ್ಯಕ್ರಮ

ಜನಕಪುರಿ ಕನ್ನಡ ಕೂಟದ ಕರ್ನಾಟಕ ರಾಜ್ಯೋತ್ಸವ ಹಾಗೂ ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಜನಕಪುರಿಯ ಜಿಲ್ಲಾ ಪಾರ್ಕ್‌ನಲ್ಲಿ ಇದೇ ಡಿಸೆಂಬರ್ 24ರಂದು ನಡೆಸಲಾಯಿತು. ಚಳಿಗಾಲದ ಮಂಪರು ಬಿಸಿಲಿನಲ್ಲಿ ಸದಸ್ಯರೆಲ್ಲಾ ಹುರುಪಿನಿಂದ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು. ಮಕ್ಕಳಿಗಾಗಿ, ಮಹಿಳೆಯರಿಗೆ, ಪುರುಷರಿಗೆ ಮತ್ತು ಹಿರಿಯ ಸದಸ್ಯರಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಕೂಟದ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಹಾಗು ಕಾರ್ಯದರ್ಶಿ ಶ್ರೀ ಶೇಷಗಿರಿ ನಾಯಕ್ ಅವರು ಆಗಮಿಸಿದ್ದ ಸದಸ್ಯರನ್ನು ಹಾಗು ಅತಿಥಿಗಳಾಗಿದ್ದ ಶ್ರೀ ರೇಣುಕುಮಾರ್, ಶ್ರೀ ಟಿ.ಎಂ. ಮೈಲಾರಪ್ಪ, ಶ್ರೀ ಹನುಮೇ ಗೌಡರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕೂಟದ ಆಟೋಟ ಸ್ಪರ್ಧೆಗಳನ್ನು ಶ್ರೀ ಶಿವರಾಮ್ ರೈ ಹಾಗು ಶ್ರೀ ಕೃಷ್ಣರಾಜ್ ನಡೆಸಿಕೊಟ್ಟರು. ರುಚಿಯಾದ ಭೋಜನದ ನಂತರ ತಂಬೋಲ ಆಡಲಾಯಿತು. ಅ

*ಶ್ರೀನಾಥ್ ಎನ್.ಆರ್*



# ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಎಸ್.ಜಿ. ಸಿದ್ದರಾಮಯ್ಯನವರಿಂದ ಕೇಂದ್ರ ಸಚಿವರ ಭೇಟಿ

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ ನೇತೃತ್ವದಲ್ಲಿ ನಿಯೋಗವು ಇದೇ ಡಿಸೆಂಬರ್ 27ರಂದು ಕೇಂದ್ರ ಮಾನವ ಸಂಪನ್ಮೂಲ ಸಚಿವರಾದ ಶ್ರೀ ಪ್ರಕಾಶ್ ಜಾವಡೇಕರ್‌ರವರನ್ನು ಭೇಟಿ ಮಾಡಿ ಕನ್ನಡದ ಅಭಿವೃದ್ಧಿಗೆ ಬೇಕಾದ ಹಲವು ಅಂಶಗಳನ್ನೊಳಗೊಂಡ ಮನವಿಯನ್ನು ಸಲ್ಲಿಸಿ ತುರ್ತಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕೋರಿದೆ.

ಕೇಂದ್ರ ಸರ್ಕಾರ ನಡೆಸುವ ಎಲ್ಲಾ ಪರೀಕ್ಷೆಗಳ, ಪ್ರಶ್ನೆ ಪತ್ರಿಕೆಗಳು ಸಂವಿಧಾನವು ಗುರುತಿಸಿರುವ ಎಲ್ಲಾ 22 ಅಧಿಕೃತ ಭಾಷೆಗಳಲ್ಲಿ ಇರಬೇಕು. ಈ ಕುರಿತಂತೆ ಕೇಂದ್ರ ಸರ್ಕಾರವು ಅಗತ್ಯ ತಿದ್ದುಪಡಿಗಳನ್ನು ಹೊರತರಬೇಕು. ಕನ್ನಡಕ್ಕೆ 2008ರಲ್ಲಿ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರೆತಿದೆ. ಈ ಕುರಿತಂತೆ ಇದ್ದ ಕಾನೂನು ಹೋರಾಟದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸ್ವಯಂ ಪ್ರೇರಿತವಾಗಿ ತನ್ನನ್ನು ತೊಡಗಿಸಿಕೊಂಡು 2016ರಲ್ಲಿ ಈ ದಾವೆಯ ಇತ್ಯರ್ಥ ಆಗುವಲ್ಲಿ ಸಕ್ರಿಯವಾಗಿ ತನ್ನ ಪಾತ್ರವನ್ನು ನಿರ್ವಹಿಸಿರುತ್ತದೆ. ಶಾಸ್ತ್ರೀಯ ಭಾಷಾ ಸ್ಥಾನಮಾನ ಹಿನ್ನೆಲೆಯಲ್ಲಿ ಕನ್ನಡ ಭಾಷೆಗೆ ದೊರಕಬಹುದಾದ ಹಲವು ಸವಲತ್ತುಗಳ ನಿರ್ವಹಣೆಯನ್ನು ಕನ್ನಡ ಭಾಷಾ ಅತ್ಯುನ್ನತ ಕೇಂದ್ರ, ಮೈಸೂರು ಇವರು ನಿರ್ವಹಿಸಬೇಕಿರುತ್ತದೆ. ಈ ಕೇಂದ್ರಕ್ಕೆ ಶಾಶ್ವತ ಕಛೇರಿಯ ವ್ಯವಸ್ಥೆ, ಯೋಜನಾ ನಿರ್ದೇಶಕರ ನೇಮಕಾತಿ ಮತ್ತು ಕಳೆದ ನಾಲ್ಕು ವರ್ಷಗಳಿಂದ ಯುವ ವಿದ್ವಾಂಸರುಗಳಿಗೆ ನೀಡಬೇಕಿರುವ ಪ್ರಶಸ್ತಿಗಳು ಕುರಿತಂತೆ ಕೇಂದ್ರ ಸರ್ಕಾರ ತುರ್ತು ನಿರ್ಧಾರವನ್ನು ತೆಗೆದುಕೊಳ್ಳುವ ಅವಶ್ಯಕತೆ ಇದೆ ಎಂದು ಮನವಿಯಲ್ಲಿ ಹೇಳಲಾಗಿದೆ.

'ಶಾಸ್ತ್ರೀಯ ತಮಿಳು' ಭಾಷೆಯನ್ನು ವಿಶ್ವದ ಎಲ್ಲಾ ದೇಶಗಳಿಗೂ ಪರಿಚಯಿಸುವ, ಕಲಿಕೆಗೆ ಅವಕಾಶ ಒದಗಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ಯುನೈಟೆಡ್ ನೇಶನ್ ಎಜ್ಯುಕೇಶನಲ್, ಸೈಂಟಿಫಿಕ್ ಅಂಡ್ ಕಲ್ಚರಲ್ ಆರ್ಗನೈಸೇಶನ್ (ಯುನೆಸ್ಕೋ)ಗೆ ಪತ್ರ ಬರೆದಿರುವ ರೀತಿಯಲ್ಲಿಯೇ ಕನ್ನಡಕ್ಕೆ ಶಾಸ್ತ್ರೀಯ ಕಲ್ಪಿಸಲಾಗಿರುವ ನಿಟ್ಟಿನಲ್ಲಿ ಈ ಕುರಿತಂತೆ ಪತ್ರ ಬರೆದು ಕನ್ನಡಕ್ಕೆ ವಿಶೇಷ ವೇದಿಕೆಯನ್ನು ವಿಶ್ವಮಟ್ಟದಲ್ಲಿ ಕಲ್ಪಿಸಬೇಕೆಂದು ಕೇಳಲಾಗಿದೆ. ಕೇಂದ್ರದ ಮಾನ್ಯ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರಾದ ಶ್ರೀ ಡಿ.ವಿ. ಸದಾನಂದ ಗೌಡರವರು, ಕೇಂದ್ರದ ಮಾನ್ಯ ಗೃಹ ಸಚಿವರಾದ ಶ್ರೀ ರಾಜನಾಥ್ ಸಿಂಗ್, ಮಾನ್ಯ ವಿತ್ತ ಸಚಿವರಾದ ಶ್ರೀ ಅರುಣ್ ಜೇಟ್ಲಿ, ಮಾನ್ಯ ಮಾನವ ಸಂಪನ್ಮೂಲ ಸಚಿವರಾದ ಪ್ರಕಾರ್ಶ ಜಾವಡೇಕರ್ ಹಾಗೂ ಮಾನ್ಯ ಆಡಳಿತ ಸುಧಾರಣಾ ಇಲಾಖೆಯ ರಾಜ್ಯ ಸಚಿವರಾದ ಶ್ರೀ ಜಿತೇಂದ್ರ ಸಿಂಗ್ ಅವರಿಗೆ ಕೇಂದ್ರ ಸರ್ಕಾರ ಮತ್ತು ಬ್ಯಾಂಕ್‌ಗಳ ನೇಮಕಾತಿಯಲ್ಲಿ ಸ್ಥಳೀಯರಿಗೆ ಪ್ರಾತಿನಿಧ್ಯ ಕಲ್ಪಿಸುವುದೂ ಸೇರಿದಂತೆ ಕೇಂದ್ರ ಸರ್ಕಾರದ ವತಿಯಿಂದ ಬಾಕಿಯಿರುವ ಹಲವಾರು ಕನ್ನಡದ ಕೆಲಸಗಳ ಬಗ್ಗೆ ತರ್ತು ಕ್ರಮವಹಿಸುವಂತೆ ಕೋರಿ ಪತ್ರವನ್ನು ಬರೆದಿರುತ್ತಾರೆ.

ಕೇಂದ ಸಚಿವರನ್ನು ಭೇಟಿ ಮಾಡಿದ ಸಮಯದಲ್ಲಿ ಕರ್ನಾಟಕ ವಿಶೇಷ ಪ್ರತಿನಿಧಿಯಾದ ಶ್ರೀ ಸಲೀಂ ಅಹಮ್ಮದ್, ಪ್ರಾಧಿಕಾರದ ಅಧ್ಯಕ್ಷರುಗಳಾದ ಡಾ. ಸಿದ್ದಲಿಂಗಯ್ಯ, ಮುಖ್ಯಮಂತ್ರಿಚಂದ್ರು, ಡಾ. ಎಲ್. ಹನುಮಂತಯ್ಯ, ಮಾಜಿ ಸಚಿವೆ ಶ್ರೀಮತಿ ಬಿ.ಟಿ. ಲಲಿತ ನಾಯಕ್, ಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ಡಾ. ಕೆ. ಮುರಳೀಧರ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಪ್ರತಿನಿಧಿ ಮಂಡಲದಲ್ಲಿದ್ದರು. ಅ

***ಅಭಿಮತ ವರದಿ***


ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

PHONE:
011-40520770

MOBILE:
9811104398,
9811604398

E-MAIL:
saujanyapp2010@gmail.com /
hpgp2006@gmail.com

Delhi Karnataka Sangha Abhimatha Monthly,
Jan-2018, Vol. No.28, Issue No.4, Price Rs.1/-
RNI Regn. No. 53405/91, DL-SW-1/4016/16-18
Printout Date : Dec 8th / 9th, Postal Date :10th / 11th, Total Pages-24
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Balakrishna Naik D.







## ಸಂಘದ ಕ್ರೀಡಾ ಸ್ಪರ್ಧೆಗಳಲ್ಲಿ ಸದಸ್ಯರು



